ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಪ್ರಜ್ಞೆ

ಕನ್ನಡ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧನಾ ವಿದ್ಯಾರ್ಥಿ

ರಾಜಯ್ಯ.ಎಚ್.ಜಿ.
ರಿ.ನಂ. **KRSMKS-00701**

ಮಾರ್ಗದರ್ಶಕರು

...ಗೌಡ
...ಕರು
ಸ... ಕಾಲೇಜು
...ರು

ಅಧ್ಯಯನ ಕೇಂದ್ರ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ (ರಿ.), ಮಂಡ್ಯ

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ
ಹಂಪಿ

೨೦೧೩-೨೦೧೪

ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಪ್ರಜ್ಞೆ

ಕನ್ನಡ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧನಾ ವಿದ್ಯಾರ್ಥಿ

ರಾಚಯ್ಯ.ಎಚ್.ಬಿ.

ರಿ.ನಂ. KRSMKS-00701

ಮಾರ್ಗದರ್ಶಕರು

ಡಾ. ಪಿ.ಬೆಟ್ಟೇಗೌಡ
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು
ವಿಜಯನಗರ, ಮೈಸೂರು

ಅಧ್ಯಯನ ಕೇಂದ್ರ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ (ರಿ.), ಮಂಡ್ಯ

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ
ಹಂಪಿ

೨೦೧೩-೨೦೧೪

ಮಾರ್ಗದರ್ಶಕರ ದೃಢೀಕರಣ ಪತ್ರ

"ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಪ್ರಜ್ಞೆ" ಎಂಬ ವಿಷಯದ ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಎಂ.ಫಿಲ್. (ಕನ್ನಡ)** ಪದವಿಗೆ ವಿದ್ಯಾರ್ಥಿಯಾದ **ರಾಚಯ್ಯ ಎಚ್.ಬಿ.** ಅವರು ನನ್ನ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಬರೆದು ಒಪ್ಪಿಸುತ್ತಿದ್ದಾರೆಂದು ಹಾಗೂ ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು :

(ಡಾ. ಪಿ.ಬೆಟ್ಟೇಗೌಡ)
ಕನ್ನಡ ಸಹ ಪ್ರಾಧ್ಯಾಪಕರು,
ಸರ್ಕಾರಿ ಮಹಿಳಾ ಕಾಲೇಜು,
ವಿಜಯನಗರ, ಮೈಸೂರು.

ಡಾ. ಪಿ. ಬೆಟ್ಟೇಗೌಡ
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಮಹಿಳಾ ಕಾಲೇಜು
ವಿಜಯನಗರ, ಮೈಸೂರು-17.

ದಿನಾಂಕ : 10.07.2014
ಸ್ಥಳ : ಮೈಸೂರು.

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ, ಸಂಶೋಧನಾ ಕೇಂದ್ರದಲ್ಲಿ 2013-14ರ ಸಾಲಿಗೆ **ಕನ್ನಡ ಎಂ.ಫಿಲ್.** ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **'ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಪ್ರಜ್ಞೆ'** ವಿಷಯವನ್ನು ಆಯ್ಕೆಮಾಡಿಕೊಂಡು ಡಾ. ಪಿ.ಬೆಟ್ಟೇಗೌಡರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಯಾವುದೇ ಅಧ್ಯಾಯವನ್ನಾಗಲಿ, ಬೇರೆ ಯಾವ ವಿಶ್ವವಿದ್ಯಾನಿಲಯಕ್ಕೂ ಒಪ್ಪಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ. ಮತ್ತು ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್. (ಕನ್ನಡ) ಪದವಿಗಾಗಿ ಈ ನಿಬಂಧವನ್ನು ಅರ್ಪಿಸುತ್ತಿದ್ದೇನೆ.

ಸಂಶೋಧನಾ ವಿದ್ಯಾರ್ಥಿ)
ರಾಜಯ್ಯ. ಎಚ್. ಬಿ.
(ರಾಜಯ್ಯ.ಎಚ್.ಬಿ)
ರಿ.ನಂ. KRSMKS-00701
ಕನ್ನಡ ವಿಭಾಗ
ಕರ್ನಾಟಕ ಸಂಘ (ರಿ.), ಮಂಡ್ಯ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

ದಿನಾಂಕ : 10.07.2014.
ಸ್ಥಳ : ಮಂಡ್ಯ

ಪರಿವಿಡಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಗೆ ಮಧ್ಯಯುಗ, ಹಲವು ಬಗೆಯ ಪರಿಣಾಮಕಾರಿ ಬದಲಾವಣೆಗಳನ್ನು ಕಂಡ ಕ್ರಾಂತಿಕಾರಿ ಘಟ್ಟ. ವೈದಿಕ ಪರಂಪರೆಯ ಮೌಲ್ಯಗಳು ನಿರ್ಮಿಸಿಕೊಂಡಿದ್ದ ಹಿತಾಶಕ್ತಿಗೆ ವಿರುದ್ಧವಾಗಿ ಬೇರೆ ಬೇರೆ ಮಾರ್ಗಗಳು ಹುಟ್ಟಿಕೊಂಡ ಸಾಂದರ್ಭಿಕ ವಾತಾವರಣ. ಈ ಒಂದು ದಿಸೆಯಲ್ಲಿ ಧಾರ್ಮಿಕ ಪರಿಕಲ್ಪನೆಗಳು ಆಳುವ ವರ್ಗದಿಂದ ಕಳಚಿಕೊಂಡು, ಜನಸಾಮಾನ್ಯರ ಬಳಿಗೆ ಬಂದ ಸಂಕ್ರಮಣ ಯುಗ. ಧಾರ್ಮಿಕ ಅಸಮಾನತೆ ಮತ್ತು ಜಾತಿಯತೆಯ ಸಾಮಾಜಿಕ ಅಸಮಾನತೆಗಳಿಗೆ ಎದುರಾಗಿ ಭಕ್ತಿ ಪರಂಪರೆಯ ತತ್ವ ಚಿಂತನೆಗಳು ಜನಪ್ರಿಯಗೊಂಡು ಸಾಮಾಜಿಕ ಬದಲಾವಣೆಗೆ ಕಾರಣವಾದ ಕಾಲಘಟ್ಟ. ಈ ಕಾಲಘಟ್ಟದಲ್ಲಿ ಸಮಾಜದ ತಳಸ್ತರದ ಸಮುದಾಯಗಳನ್ನು ಪ್ರತಿನಿಧಿಸುವ ಮೌಲ್ಯಗಳು ಮುಖ್ಯ ನೆಲೆಗೆ ಬಂದುದ್ದು, ಮಹತ್ವದ ಮತ್ತು ಪರಿವರ್ತನಾ ಶೀಲ ಸಂಗತಿಯಾಗಿದೆ. ಈ ಯುಗದ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಮುಖ್ಯವಾಗಿ ವಚನ ಮತ್ತು ಕೀರ್ತನಾ ಸಾಹಿತ್ಯ ಪ್ರಕಾರಗಳು ಧಾರ್ಮಿಕ ಮತ್ತು ಸಾಮಾಜಿಕ ಅಸಮಾನತೆಯ ಅಂಶಗಳನ್ನು ವಾಸ್ತವಿಕ ನೆಲೆಯಲ್ಲಿ ಉದಾಹರಣೆಗಳ ಮೂಲಕ ಗುರುತಿಸುವ ಕೆಲಸ ಮಾಡಿದ್ದು, ಚರಿತ್ರೆಯ ಪುಟದಲ್ಲಿ ದಾಖಲಾಗಿರುವ ನೈಜ ಸತ್ಯಗಳಾಗಿವೆ.

ಈ ಹಿನ್ನೆಲೆಯಲ್ಲಿ ದಾಸ ಸಾಹಿತ್ಯ ಪರಂಪರೆಯು ಧಾರ್ಮಿಕ ಮತ್ತು ಸಾಮಾಜಿಕ ಅಸಮಾನತೆಯ ಒಡಲಲ್ಲಿ ಪ್ರತಿಭಟನಾತ್ಮಕ ಧೋರಣೆಯನ್ನಿಟ್ಟುಕೊಂಡು ಬಂದ ಸಾಹಿತ್ಯ ಪ್ರಕಾರವಾಗಿದೆ. ಈ ಕಾಲಘಟ್ಟದ ದಾಸ ಸಾಹಿತ್ಯದ ಶ್ರೇಷ್ಟರಲ್ಲಿ ಕನಕದಾಸರು ಒಬ್ಬರು. ಇವರ ಬದುಕು ಹಾಗೂ ಅವರು ಕೃತಿಗಳ ಮೂಲಕ ಪ್ರಚಾರಪಡಿಸಿದ ತತ್ವ ಚಿಂತನೆಗಳು ಮಧ್ಯಯುಗದ ವೈಚಾರಿಕ ನೆಲೆಗಟ್ಟಿಗೆ ಹಿಡಿದ ಕನ್ನಡಿಯಾಗಿದೆ.

ಕನಕದಾಸರು ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಜನಪ್ರಿಯತೆಗಳಿಸಿಕೊಂಡು ಪ್ರಸಿದ್ಧಿಯಾಗಿರುವ ಶ್ರೇಷ್ಠ ಸಂತ. ಸಮಾಜದ ಅತ್ಯಂತ ಹಿಂದುಳಿದ ವರ್ಗದಲ್ಲಿ ಹುಟ್ಟಿ, ತಮ್ಮ ಸಹಜವಾದ ಪ್ರತಿಭೆ, ಶ್ರದ್ಧೆ, ಪ್ರಾಮಾಣಿಕತೆಗಳಿಂದ ಉನ್ನತ ಸ್ತರಕ್ಕೆ ಬಂದವರು. ತಮಗೆ ಬಂದ ಅಧಿಕಾರ ಕೀರ್ತಿ, ಪ್ರತಿಷ್ಠೆ, ಭೋಗ ವೈಭವಗಳ ಜೀವನವನ್ನು ತೊರೆದು, ಮೇಲ್ವರ್ಗದವರ ನಿಂದೆ, ಅವಹೇಳನ ಕಟು ತಿರಸ್ಕಾರಗಳ ಬೆಂಕಿಯಲ್ಲಿ ಬೆಂದು, ತಾವು ಪಟ್ಟ ಪಾಡನೆಲ್ಲ, ಕಂಡ ಲೋಕವನ್ನೆಲ್ಲಾ ಉಂಡ ಅನುಭವವನೆಲ್ಲಾ ಹಾಡಿನ ಮೂಲಕ ತಿಳಿಸಿದವರು. ಇವರು ತಮ್ಮ ಅಂತರಂಗದ ಅಭಿವ್ಯಕ್ತಿಗೆ ದೇಶಿ ಭಾಷೆಯನ್ನು ಬಳಸಿಕೊಂಡು ಸಮಾಜದಲ್ಲಿದ್ದ ಓರೆ-ಕೋರೆ, ಅಶುಚಿಗಳನ್ನು ತೋರಿಸುತ್ತಾ, ಭಕ್ತಿಯ ಪಥದಲ್ಲಿ ಸಾಗಿ ಮುಕ್ತಿಗಾಗಿ ಪರಿತಪಿಸಿದವರು. ಈ ದಿಸೆಯಲ್ಲಿ ಅವರ ಅಂತರಂಗದ ಆಧ್ಯಾತ್ಮಿಕವಾದ ವಿಚಾರಧಾರೆಯ ನುಡಿಗಳು ಆರೋಗ್ಯಕರ ಸಮಾಜವನ್ನು ನಿರ್ಮಿಸುವ, ಆ ಸಮಾಜಕ್ಕೆ ಮಾರ್ಗದರ್ಶನ ನೀಡುವಂತಹ ನುಡಿಗಳಾಗಿವೆ. ಇವರ ಅನುಭವದ ನುಡಿಗಳು ಸಾಹಿತ್ಯದ ಪರಿಧಿಯಲ್ಲಿ ಕಾವ್ಯಗಳು (ಮೋಹನ ತರಂಗಿಣಿ, ಹರಿಭಕ್ತಸಾರ, ರಾಮಧಾನ್ಯ ಚರಿತೆ,

ನೃಸಿಂಹಸ್ತವ) ಕೀರ್ತನೆಗಳು, ಸುಳಾದಿಗಳು, ಮುಂಡಿಗೆಗಳು ಈ ಪ್ರಕಾರಗಳಲ್ಲಿ ಪಸರಿಸಿ ಕನ್ನಡ ಸಾಹಿತ್ಯದ ಅಮೂಲ್ಯ ಕೊಡುಗೆಗಳಾಗಿವೆ.

ಹೀಗೆ ವಿಪುಲವಾಗಿರುವ ಕನಕದಾಸರ ಬದುಕು ಮತ್ತು ಸಾಹಿತ್ಯದ ಮೇಲೆ ಬೆಳಕು ಚೆಲ್ಲುವ ದಿಸೆಯಲ್ಲಿ ಹಲವಾರು ಕೃತಿಗಳು ಹೊರಬಂದಿವೆ. ಆ ಒಂದು ಕಿರುನೋಟವನ್ನು 'ಎಸ್.ಶಿವಣ್ಣ' ಎಂಬುವವರು 'ಕನಕಾವಲೋಕನ' ಎಂಬ 'ಕನ್ನಡ ಮತ್ತು ಸಂಸ್ಕೃತಿ' ಇಲಾಖೆಯಡಿಯಲ್ಲಿ ಪ್ರಕಟವಾಗಿರುವ 'ದೇಜಗೌ' ಅವರ ಸಂಪಾದಕತ್ವದ ಕೃತಿಯಲ್ಲಿ ಕಟ್ಟಿಕೊಡಲಾಗಿದೆ.

ಕನಕದಾಸರು ತಾವು ಕಂಡುಂಡ ಅನುಭವಗಳನ್ನು ಕೀರ್ತನೆಗಳಲ್ಲಿ ಉಣಬಡಿಸಿದ್ದಾರೆ. ಅವರ ಕೀರ್ತನೆಗಳನ್ನು ಒಟ್ಟಿಗೆ ಸಂಗ್ರಹಿಸಿ ಕೃತಿರೂಪದಲ್ಲಿ ಪ್ರಕಟಿಸುವ ಕೆಲಸವನ್ನು ವಸಂತಕುಷ್ಟಗಿ, ಬಿ.ಶಿವಮೂರ್ತಿಶಾಸ್ತ್ರಿ, ಬೇಟಗೇರಿ ಕೃಷ್ಣಶರ್ಮ, ಪಾವಂಜೆ ಗುರುರಾಜ ಇತ್ಯಾದಿ ವಿದ್ವಾಂಸರು ಕನಕದಾಸರ ಭಕ್ತಿಗೀತೆಗಳು, ಕೀರ್ತನೆಗಳು ಮತ್ತು ಪದಗಳು ಎಂಬ ಶೀರ್ಷಿಕೆಯಡಿಯಲ್ಲಿ ಹೊರತಂದಿದ್ದಾರೆ. ಕನಕದಾಸರನ್ನು ಕುರಿತಂತೆ ಮಾಸ್ತಿ, ಜೋಳದ ರಾಶಿ ದೊಡ್ಡನಗೌಡ, ಭದ್ರಗಿರಿ ಕೇಶವದಾಸ್, ಶ್ರೀನಿವಾಸಯ್ಯಂಗಾರ್ ಮತ್ತು ಹುಣಸೂರು ಕೃಷ್ಣಮೂರ್ತಿ ಇತ್ಯಾದಿಯಾದ ಲೇಖಕರು ಭಕ್ತಕನಕದಾಸ, ಮುಕ್ತ ಕನಕದಾಸ, ಕವಿಕನಕದಾಸ, ಕನಕದಾಸ ಎಂಬ ಹೆಸರಿನಡಿಯಲ್ಲಿ ನಾಟಕವನ್ನು ರಚಿಸಿದ್ದಾರೆ.

ಕನಕದಾಸರ ಬದುಕು ಮತ್ತು ಸಾಹಿತ್ಯವನ್ನು ಕುರಿತಂತೆ ಹಲವಾರು ಕೃತಿಗಳು ಹೊರಬಂದಿವೆ. ಬಿ.ವೈ.ಕೌಜಲಗಿ ಎಂಬ ವಿದ್ವಾಂಸರು 'ಕನಕದಾಸರ ಜೀವನ ಮತ್ತು ಸಾಧನೆ' ಎಂಬ ಕೃತಿಯಲ್ಲಿ ದಾಸರ ಜೀವನದ ವೃತ್ತಾಂತ ಮತ್ತು ಅವರ ಸಾಧನೆಯ ಹಾದಿಯನ್ನು ತಿಳಿಸಿದ್ದಾರೆ. ಇದೇ ನಿಟ್ಟಿನಲ್ಲಿ ಕಲಮದಾನಿ ಗುರುರಾಯರು ಸಹ ಕನಕದಾಸರ ಜೀವನದ ವೃತ್ತಾಂತವನ್ನು ಕನಕದಾಸರ ಜೀವನ ಚರಿತ್ರೆ ಮತ್ತು ಪದಗಳು ಎಂಬ ಕೃತಿಯಲ್ಲಿ ಚಿತ್ರಿಸಿದ್ದಾರೆ.

ಕೀರ್ತನೆಗಳ ಮೂಲಕ ಕನಕದಾಸರು ಗುರುತಿಸಿಕೊಂಡಿದ್ದರೂ, ಅವರು ಬರೆದಿರುವ ಕಾವ್ಯಗಳು ಸತ್ವಪೂರ್ಣವಾದ ಕೃತಿಗಳಾಗಿವೆ. ಇವುಗಳ ಪ್ರಕಟಿತ ಗ್ರಂಥದಡಿಯಲ್ಲಿ ಹಲವಾರು ವಿದ್ವಾಂಸರು ಕೆಲಸ ಮಾಡಿದ್ದಾರೆ. ಅವರಲ್ಲಿ ಪಂಚಲಿಂಗೇಗೌಡ (ರಾಮಧಾನ್ಯ ಚರಿತೆ) ರಂಗನಾಥಶರ್ಮ (ಹರಿಭಕ್ತಸಾರ) ಆರ್.ಸಿ.ಹಿರೇಮಠ (ಮೋಹನ ತರಂಗಿಣಿ) ದೇ.ಜವರೇಗೌಡ (ನಳಚರಿತ್ರೆ) ವೆಂಕಟಸುಬ್ಬಶಾಸ್ತ್ರಿ (ವರಮೋಹನ ತರಂಗಿಣಿ ಎಂಬ ಕೃಷ್ಣ ಚರಿತೆ) ಪ್ರಮುಖರಾಗಿದ್ದಾರೆ.

ಕನಕದಾಸರ ಬದುಕು ಮತ್ತು ಸಾಹಿತ್ಯ ಕುರಿತಂತೆ ರಾಜಪುರೋಹಿತ.ಹ.ರಾ (ಅಪ್ರಕಟಿತ ಮಹಾಪ್ರಬಂಧ ಕ.ವಿ.ವಿ.ಧಾರವಾಡ) ಎಂಬುವವರು ಅಧ್ಯಯನ ನಡೆಸಿದ್ದಾರೆ ಮತ್ತು ಮೋಹನತರಂಗಿಣಿ ತೌಲನಿಕ ಅಧ್ಯಯನ ಎಂಬ ವಿಷಯದಡಿಯಲ್ಲಿ ಮುಕ್ಕಣ್ಣನವರು

ಎಂ.ಫಿಲ್. ನಿಂಬಧವನ್ನು (ಅಪ್ರಕಟಿತ) ರಚಿಸಿದ್ದಾರೆ.

ಕನಕದಾಸರ ಬದುಕು ಮತ್ತು ಸಾಹಿತ್ಯದ ಮೇಲೆ ಹಲವಾರು ಲೇಖನಗಳು ಪ್ರಕಟವಾಗಿವೆ. ಅಂದಿನ ಕಾಲಮಾನದಲ್ಲಿ ಕಂಡ ಸಮಾಜ, ಸಂಸ್ಕೃತಿ, ರೀತಿ-ನೀತಿ ಬಗ್ಗೆ ಬೆಳಕು ಚೆಲ್ಲುವ ನೋಟವಿದೆ. ದಾಸ ಸಾಹಿತ್ಯದಲ್ಲಿ ಕನಕರ ಸ್ಥಾನ, ಅವರು ಕಾವ್ಯಗಳಲ್ಲಿ ಕಟ್ಟಿಕೊಟ್ಟಂತಹ ವರ್ಗಪ್ರಜ್ಞೆ, ಪೌರಾಣಿಕ ಪ್ರಜ್ಞೆ, ಜಾನಪದೀಯ ನೆಲೆಗಟ್ಟು ಇತ್ಯಾದಿ ಅಂಶಗಳ ಬಗ್ಗೆ ಲೇಖನಗಳು ಬಂದಿವೆ. ಕೀರ್ತನೆಗಳಿಗೆ ಸಂಬಂಧಪಟ್ಟಂತೆ ಕೀರ್ತನೆಗಳಲ್ಲಿ ಕಾವ್ಯಮೌಲ್ಯ, ಸಾಮಾಜಿಕಮೌಲ್ಯ, ಭಕ್ತಿಪರಿಕಲ್ಪನೆ, ಶೈಲಿ ಹಾಗೂ ಕೀರ್ತನೆಗಳಲ್ಲಿ ಬಳಸಿದ ಪೌರಾಣಿಕ ಸಂಗತಿಗಳು ಇತ್ಯಾದಿ ಅಂಶಗಳ ಬಗ್ಗೆ ಹಲವಾರು ವಿದ್ವಾಂಸರು ಲೇಖನಗಳನ್ನು ಪ್ರಕಟಿಸಿದ್ದಾರೆ. ಒಟ್ಟಾರೆಯಾಗಿ ಕನಕದಾಸರ ಜೀವನ ಮತ್ತು ಸಾಹಿತ್ಯದ ಮೇಲೆ '೬೨' ಗ್ರಂಥಗಳು ಹಾಗೂ ೧೪೧ ಲೇಖನಗಳು ಪ್ರಕಟಗೊಂಡಿವೆ.

ಹೀಗೆ ಕನಕದಾಸರ ಜೀವನ ಮತ್ತು ಅವರ ಕೃತಿಗಳ ಮೇಲೆ ವಿವಿಧ ಮಜಲುಗಳಲ್ಲಿ ಅಧ್ಯಯನ ನಡೆದಿವೆ. ವಿಶೇಷವಾಗಿ ಅವರ ಕೀರ್ತನೆಗಳಿಗೆ ಸಂಬಂಧಿಸಿದಂತೆ, ಚಾರಿತ್ರಿಕ, ಸಾಮಾಜಿಕ, ಪೌರಾಣಿಕ, ಜಾನಪದ, ಸಾಹಿತ್ಯಿಕ ಪ್ರಜ್ಞೆಗೆ ಸಂಬಂಧಿಸಿದಂತೆ ಅಧ್ಯಯನಗಳು ನಡೆದಿವೆ. ಆದರೆ ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಕಂಡಂತಹ ತಾತ್ವಿಕ ಚಿಂತನೆಗಳು ಬದಲಾದ ಕಾಲಘಟ್ಟದ ಮೇಲೆ ಪರಿಣಾಮ ಬೀರುತ್ತಲೇ ಇರುತ್ತವೆ. ಹಾಗಾಗಿ ನೋಡುವ ದೃಷ್ಟಿ ಧೋರಣೆಗಳು ಬದಲಾಗುತ್ತಿರುವ ಈ ದಿಸೆಯಲ್ಲಿ ಎಷ್ಟೇ ಅಧ್ಯಯನಗಳಾದರೂ ಸಹ ಬಹುಶಃ ಪರಿಪೂರ್ಣತೆಯನ್ನು ಪಡೆಯಲಾರವು. ಏಕೆಂದರೆ ಅದರ ವಸ್ತು, ವಿಷಯ ಸಾರ್ವಕಾಲಿಕವಾಗಿರುವುದರಿಂದ ಸದಾ ಚರ್ಚೆಗೆ ಒಳಪಟ್ಟು ಹೊಸ ಹೊಸ ರೂಪ ತಾಳುತ್ತವೆ. ಸದಾ ಓದಿಸಿಕೊಳ್ಳುವ, ಚರ್ಚೆಗೆ ಒಳಪಡುವ, ಚಿಂತನೆಗೆ ಒಡ್ಡಿಕೊಳ್ಳುವ ಗುಣ ಇವರ ಕೀರ್ತನೆಗಳಲ್ಲಿವೆ. ಇವರ ಕೀರ್ತನೆಗಳನ್ನು ನೋಡುವ ದೃಷ್ಟಿಕೋನ ಭಿನ್ನತೆಯಿಂದ ಕೂಡಿರುವುದರಿಂದ ಅವರ ಕೀರ್ತನೆಯಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಬಿಂಬಿಸುವಂತಹ ಭಿನ್ನತೆಗಳನ್ನು, ಸೂಕ್ಷ್ಮ ಎಳೆಗಳನ್ನು ಗುರುತಿಸುವುದು ನನ್ನ ಅಧ್ಯಯನದ ಉದ್ದೇಶವಾಗಿದೆ.

ಕನಕದಾಸರ ಸಾಹಿತ್ಯದ ಹರಹು ಕಾವ್ಯಗಳು ಮತ್ತು ಕೀರ್ತನೆಗಳಲ್ಲಿ ಪಸರಿಸಿದೆ. ನನ್ನ ಅಧ್ಯಯನದ ಪರಿಮಿತಿಯು ಕೀರ್ತನೆಗಳಿಗೆ ಮಾತ್ರ ಸಂಬಂಧಿಸಿದೆ. ಇವರ ಕೀರ್ತನೆಗಳು "ಛಂದಸ್ಸಿನ ದೃಷ್ಟಿಯಿಂದ ಇವು ಒಂದೊಂದೆ ಸಾಲಿನದಾಗಿರಬಹುದು ಅಥವಾ ಎರಡು ಸಾಲಿನದಾಗಿರಬಹುದು; ಮೂರು ಸಾಲಿನದಾಗಿರಬಹುದು ಹೀಗೆ ಒಂಬತ್ತು ಸಾಲಿನವರೆಗೂ ಕೂಡಿದೆ. ಆದಿ ಪ್ರಾಸ ನಿಯತ ನುಡಿಗಳಲ್ಲಿ ಉತ್ಸಾಹ ಮಂದಾನಿಲ, ಲಲಿತಗಳು ಇಲ್ಲಿವೆ. ಅಂಶಗಣಗಳು ಬರುತ್ತವೆ"[೧] ಹಾಗೂ ವಸ್ತುವಿನ ದೃಷ್ಟಿಯಿಂದ ಸಮಾಜದ ಎಲ್ಲಾ ನೆಲೆಯ ಮೇಲೂ ಬೆಳಕು ಬೀರುವ ವಿಶಾಲ ಗುಣ ಹೊಂದಿವೆ. ಭಾವಾಭಿವ್ಯಕ್ತಿಯಲ್ಲಿ ದಾಸರು ತಮಗನಿಸಿದ್ದನ್ನು ನೇರವಾಗಿ ನಿರ್ಭೀಡತೆಯಿಂದ ಅಭಿವ್ಯಕ್ತಿಸಿದ್ದಾರೆ. ಹಾಗಾಗಿ ಇವರ ಕೀರ್ತನೆಗಳ ಅಧ್ಯಯನದ ವ್ಯಾಪ್ತಿ ಪಿ.ಎಚ್.ಡಿ ಪ್ರಬಂಧವನ್ನು ಮೀರಿದ್ದು ಆಗಿದೆ. ಆದುದರಿಂದ

ನನ್ನ ಎಂ.ಫಿಲ್ ನಿಬಂಧದ ಪರಿಮಿತಿಯಲ್ಲಿ ಸಮಾಜದ ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಸಾಮಾಜಿಕ ಪ್ರಜ್ಞೆಯನ್ನು ಬಿಂಬಿಸುವಂತಹ ಕೀರ್ತನೆಗಳನ್ನು ಆಯ್ದು ವಿಶ್ಲೇಷಿಸುವುದು ನನ್ನ ಅಧ್ಯಯನದ ಪರಿಧಿಯಾಗಿದೆ.

ಕನಕದಾಸರು ಸಾಹಿತ್ಯವಲಯದಲ್ಲಿ ಗುರುತಿಸಿಕೊಂಡಿರುವುದು ಕೀರ್ತನಾಕಾರರೆಂದೇ ಹಾಗೂ ಹರಿದಾಸ ಸಾಹಿತ್ಯವನ್ನು ಕೂಡ ಕೀರ್ತನೆಗಳನ್ನು ಗಮನದಲ್ಲಿಟ್ಟುಕೊಂಡೇ ಹೇಳುವುದು ರೂಢಿಗತವಾಗಿದೆ. ಈ ಹಿನ್ನೆಲೆಯಲ್ಲಿ ಜನಮಾನಸದ ಮನದಲ್ಲಿ ನೆಲೆಯಾಗಿರುವ ಕೀರ್ತನಾ ಪ್ರಕಾರದ ಬೀಜಾಂಕುರವು "ಕ್ರಿ.ಶ.೧೨ನೇ ಶತಮಾನದಲ್ಲಿ ಇಡೀ ಭಾರತೀಯ ಸಾಹಿತ್ಯಕ್ಕೆ ವಚನವೆಂಬ ಅಭೂತಪೂರ್ವ ಕಾಣಿಕೆಯನ್ನು ಕೊಟ್ಟ ಶಿವದಾಸರು ತಮ್ಮ ಕಾಲಕ್ಕೆ ಅಥವಾ ತತ್ಪೂರ್ವಕ್ಕೆ ಕನ್ನಡದಲ್ಲಿಲ್ಲದಿದ್ದ ಹಾಡುಗಳನ್ನು ಬರೆಯಲು ಮೊದಲಿಗರಾದರು. ಶಿವಶರಣರು ಬರೆದ ಈ ಹಾಡುಗಳು ಪಲ್ಲವದಿಂದ ಕೂಡಿದ ಬೇರೆ ಬೇರೆ ರಾಗಗಳಲ್ಲಿ ಹಾಡಲು ಅನುವರಿತು ರಚಿತವಾದ ಮುಂದೆ ೧೫-೧೬ನೇ ಶತಮಾನದಲ್ಲಿ ಹರಿದಾಸರು ಯಾವ ಕೀರ್ತನಾ ಸಾಹಿತ್ಯ ಪ್ರಕಾರದಿಂದ ಇಡೀ ದಕ್ಷಿಣ ಭಾರತ ಸಂಗೀತ ಮತ್ತು ಸಾಹಿತ್ಯ ಪ್ರಪಂಚಗಳೆರಡರಲ್ಲೂ ಅದ್ವಿತೀಯ ಕೀರ್ತಿಯನ್ನು ಗಳಿಸಿದರೋ, ಆ ಕೀರ್ತನಾ ಪ್ರಕಾರಕ್ಕೆ ೧೨ನೇ ಶತಮಾನದ ಬಸವಾದಿ ಶಿವದಾಸರ ಈ ಗೀತಾ ಪ್ರಕಾರದ ಮೂಲವೂ ಮಾದರಿ ಆಯಿತು."[೨] ಹಾಗಾಗಿ ಇವು ಸಾಹಿತ್ಯ ರಚನೆಯ ಉದ್ದೇಶದಿಂದ ರಚನೆಯಾಗಿರದೆ ಇವುಗಳಲ್ಲಿ ಭಾಷೆಯ ಸೊಗಸು ಸೊಗಡು, ಬೆಡಗುಗಳು ಕಾಲ್ಪನಿಕತೆ ವಿಸ್ತಾರಗಳು, ಅವುಗಳಲ್ಲಿನ ಉಪಮೆಗಳು ಮತ್ತು ಹೊಸತನ ವೈವಿಧ್ಯತೆಗಳು ಪರಿಣಾಮಕಾರಿಯಾಗಿದ್ದು, ಉತ್ತಮ ಕಾವ್ಯದ ಮಾದರಿಗಳಾಗಿವೆ. ಇವುಗಳಲ್ಲಿ ಸಮಾಜದ ಹಿತ, ಸಮರ್ಪಣಭಾವ, ಸಮಾಜದ ಕಳಕಳಿ, ವಿಡಂಬನೆ, ಸಾಮಾಜಿಕ ವಿಮರ್ಶೆ ಕಂಡು ಬಂದು ಸಾಮಾಜಿಕವಾಗಿ ಮತ್ತು ಸಾಹಿತ್ಯಿಕವಾಗಿ ಒಂದು ವಿಶಿಷ್ಟ ಪ್ರಕಾರವೆನಿಸಿದೆ.

ಈ ದಿಸೆಯಲ್ಲಿ ಜನಮಾನಸಕ್ಕೆ ಆಕರ್ಷಿತವಾಗುವ ಈ ಪ್ರಕಾರವನ್ನು ಕನಕದಾಸರು ದೈವದ ಆರಾಧನೆಗೆ ಬಳಸಿಕೊಂಡರೂ, ಅಷ್ಟಕ್ಕೆ ನಿಲ್ಲದೆ ಬದುಕಿನ ಪರಿಶುದ್ಧತೆ ಕಾಯ್ದುಕೊಳ್ಳುವುದು ಮುಖ್ಯವೆಂದು ಸಾರಿದರು. ನಾನಾ ಬಗೆಯ ವರ್ಗದ ಜನರ ಸಣ್ಣತನವನ್ನು ಎತ್ತಿತೋರಿ ಬಯಲಿಗೆಳೆದರು. ಸಮಾಜದ ಕೆಟ್ಟ ಪದ್ಧತಿಗಳನ್ನು ಖಂಡಿಸಿದರು. ಬರಡು ಭ್ರಮೆಯಿಂದ ಬಳಲುತ್ತಿದ್ದವರನ್ನು ತಿದ್ದುವ ಪ್ರಯತ್ನ ಮಾಡಿದರು. ನಿಜವಾದ ಸತ್ಯ ಧರ್ಮದ ಅಸ್ತಿತ್ವವನ್ನು ತಿಳಿಸಿದರು. ಸಮಾಜವನ್ನು ತಾರ್ಕಿಕವಾಗಿ ವಿವೇಚಿಸಿ ತೀರ್ಮಾನಿಸುವ ಸಂಕಲ್ಪ ಮಾಡಿದರು. ಹಾಗಾಗಿ ನನ್ನ ನಿಬಂಧವನ್ನು ವಸ್ತು ವಿಷಯದ ವ್ಯಾಪ್ತಿಗನುಗುಣವಾಗಿ ನಾಲ್ಕು ಅಧ್ಯಯಗಳಾಗಿ ವಿಭಾಗಿಸಿಕೊಂಡಿದ್ದೇನೆ.

ಮೊದಲನೆ ಅಧ್ಯಾಯದಲ್ಲಿ ಮನುಷ್ಯನ ಡಾಂಭಿಕತೆಯ ಖಂಡನೆ ಇದೆ. ಸಾದು, ಸನ್ಯಾಸಿ, ದಾಸ, ಜಂಗಮ ಮುಂತಾದ ವೇಷಗಳ ಮೂಲಕ ಜಗತ್ತಿನಲ್ಲಿ ನಡೆಯುತ್ತಿರುವ ಕಪಟ, ವಂಚನೆ, ದುರ್ವ್ಯವಹಾರಗಳ ವಿಡಂಬನೆ ಇದೆ.

ಎರಡನೇ ಅಧ್ಯಾಯದಲ್ಲಿ ಸಮಾಜದಲ್ಲಿನ ಜನರ ನಡವಳಿಕೆ, ಬೇರು ಬಿಟ್ಟಿರುವ ರೂಢಿಗತವಾದ ಸಂಪ್ರದಾಯಗಳು, ಕಂದಾಚಾರ–ಮೌಢ್ಯತನ, ನೈತಿಕ ಮೌಲ್ಯಗಳ ಅಧಃಪತನ ಮನುಷ್ಯನ ಸಂಸಾರಿಕ ಜೀವನದ ತಾತ್ವಿಕತೆ, ಭಕ್ತಿಯ ಮೂಲಕ ಸಮಾಜ ಮತ್ತು ಮಾನವನ ಅಸ್ತಿತ್ವದ ಚಿಂತನೆ, ಸಾಮಾಜಿಕ ಮೌಲ್ಯವನ್ನು ಜನಪದೀಯ ನೆಲೆಗಟ್ಟಿನಲ್ಲಿ ಆಯ್ದ ಪರಿ, ಇವುಗಳನ್ನು ಕಟ್ಟಿಕೊಡುವಲ್ಲಿ ಕನಕದಾಸರ ಕಾವ್ಯಮೌಲ್ಯಗಳ ವಿಶ್ಲೇಷಣೆ ಇದೆ.

ಅಧ್ಯಾಯ ಮೂರರಲ್ಲಿ ಪಂರಪರಾಗತ ಮೌಲ್ಯ, ಮೌಢ್ಯ, ಸಂಪ್ರದಾಯದ ವಿರೋಧಿ ಧ್ವನಿ, ಜಾತಿವ್ಯವಸ್ಥೆ, ಧಾರ್ಮಿಕ ಆಚರಣೆಗಳಲ್ಲಿ ಮೌಢ್ಯ, ಮಾನವರ ವೃತ್ತಿ ಮತ್ತು ನಡತೆಯಲ್ಲಿ ಕೊರತೆ ಕಂಡ ದಾಸರ ಬಂಡಾಯದ ವಿಶ್ಲೇಷಣೆ ಇದೆ.

ಅಧ್ಯಾಯ ನಾಲ್ಕರಲ್ಲಿ ಕನಕದಾಸರ ಕೀರ್ತನೆಗಳು ಪ್ರಸ್ತುತ ಕಾಲಮಾನದಲ್ಲಿ ಯಾವ ರೀತಿ ಪ್ರಭಾವ ಬೀರುತ್ತವೆ. ಜಾತಿಯತೆ, ಮೌಢ್ಯತನ, ಮೂಢನಂಬಿಕೆ, ಸ್ವಾರ್ಥತನ ಇತ್ಯಾದಿ ಅಂಶಗಳ ಮೇಲೆ ಬೆಳಕು ಚೆಲ್ಲುವ ವಿಶ್ಲೇಷಣೆ ಇದೆ.

ಹೀಗೆ ಕನಕದಾಸರ ಕೀರ್ತನೆಗಳನ್ನು 'ಸಾಮಾಜಿಕ ಪ್ರಜ್ಞೆ'ಯಡಿಯಲ್ಲಿ ವಸ್ತು ವೈವಿಧ್ಯತೆಯ ವಿಭಜನೆಗೆ ಅನುಗುಣವಾಗಿ ಈ ಮೇಲಿನ ಅಧ್ಯಾಯಗಳ ಮುಖೇನ ಸಾಮಾಜಿಕ ಪ್ರಜ್ಞೆಯನ್ನು ಬಿಂಬಿಸುವಂತಹ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳಲ್ಲಿ ಪರಿಣಾಮ ಬೀರಬಲ್ಲ ಮತ್ತು ಪ್ರಾತಿನಿಧಿಕವೆನಿಸುವ ಕೆಲವು ಕೀರ್ತನೆಗಳನ್ನು ಆಯ್ದುಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಡಿಟಿಪ್ಪಣಿಗಳು

೧. ಎಂ.ಜೈಕುಮಾರ್–ಕನ್ನಡದಲ್ಲಿ ಕೀರ್ತನಾ ಸಾಹಿತ್ಯಾ ಮತ್ತು ಕನಕ ಕೀರ್ತನೆಗಳು–ಕನಕಾವಲೋಕನ – ಪುಟ ಸಂ. ೫೩೪

೨. ಅದೇ.................. ಪುಟ ಸಂ. ೫೩೧

ಅಧ್ಯಾಯ ೧

ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ವಿಡಂಬನೆ

ಸಮಾಜದಲ್ಲಿ ನಡೆಯುವ ದೋಷಪೂರಿತವಾದ ವಸ್ತು, ವಿಷಯ, ಘಟನೆಗಳು ವಿಡಂಬನೆಗೆ ಗುರಿಯಾಗುವ ಅಂಶಗಳು. ಹಾಸ್ಯ, ವ್ಯಂಗ್ಯ ಮಾರ್ಮಿಕವಾದ ಸತ್ಯದ ಧ್ವನಿ ಇದ್ದು, ಈ ಮೂಲಕ ಸಮಾಜದ ಸ್ವಾಸ್ಥ್ಯವನ್ನು ನಿರ್ಮಿಸುವ ಉದ್ಧೇಶವಿರುತ್ತದೆ. ಕನಕದಾಸರು ಪರಂಪರೆಯ ಶೂದ್ರ ಪರಿಕಲ್ಪನೆಯ ನೋವನ್ನು ಅನುಭವಿಸಿದವರು. ತಾನು ಅನುಭವಿಸಿದ ಜೀವನದ ನಾನಾ ನೋವಿನ ಸಂಗತಿಗಳು ಸಮಾಜದ ವೈಷಮ್ಯ, ವೈದೃಶ್ಯಗಳು ಅವರ ಕೀರ್ತನೆಗೆ ವಿಡಂಬಿಕ ವಸ್ತುಗಳಾಗಿ ಪರಿಣಮಿಸಿವೆ. ಅವರ ಕೀರ್ತನೆಗಳ ಮೂಲ ಸೆಲೆ ಭಕ್ತಿಯಾದರೂ ಆತ್ಮ ನಿವೇದನೆ ಹಾಗೂ ಸಾಮಾಜಿಕ ವಿಡಂಬನೆಯ ಮಿಶ್ರಣ ಕಂಡು ಬರುತ್ತದೆ.

ಕನಕದಾಸರಿಗೆ ಜನ ಸಾಮಾನ್ಯರ ಬಗ್ಗೆ ಕಾಳಜಿಯನ್ನು ಅವರ ಮುಗ್ದ ಸ್ವಭಾವದ ಭಾವಾನಾತ್ಮಕ ಭಕ್ತಿಯನ್ನು ಒಂದು ಕಡೆ ಪುರೋಹಿತ ವರ್ಗ, ಇನ್ನೊಂದು ಕಡೆ ಕ್ಷುದ್ರ ದೈವಗಳು ಅಪರಿಹರಿಸುತ್ತಿರುವುದನ್ನು ಕಂಡು ಚಿಂತಿಸಿದರು. ಸಾಮಾನ್ಯ ಜನರು ಯಾವುದೊಂದು ದೈವವನ್ನು ನಿಶ್ಚಂತವಾಗಿ ನಂಬದೆ ಅಸಂಖ್ಯಾತ ದೇವತೆಗಳನ್ನು ಮನಸ್ಸಿಗೆ ಬಂದಂತೆ ಪೂಜಿಸುತ್ತಾರೆ. ಅವುಗಳನ್ನು ತಣಿಸುವ ಮೂಲಕ ಇಷ್ಟಾರ್ಥವನ್ನು ನೆರವೆಸಿಕೊಳ್ಳುತ್ತೇವೆಂಬ ತಲೆಬುಡವಿಲ್ಲದ ಭಾವನೆಯಿಂದ ತಮ್ಮ ಕಾಲ, ಹಣ, ಸತ್ವಗಳನ್ನೆಲ್ಲಾ ಕಳೆದುಕೊಂಡು ನೂರಾರು ಹೀನ ಹವ್ಯಾಸಗಳಿಗೆ ದಾಸರಾಗಿ ಬದುಕನ್ನು ವ್ಯರ್ಥಗೊಳಿಸಿಕೊಳ್ಳುವ ಸಮಾಜದ ಬುದ್ಧಿಹೀನ ಜನರನ್ನು ಕಂಡು ದಾಸರು ಮರುಗಿದ್ದಾರೆ.

ಎಕ್ಕನಾತಿ ಎಲ್ಲಮ್ಮ ಮಾರಿ ದುರ್ಗಿಯ ಚೌಡಿ
ಅಕ್ಕರಿಂದಲಿ ಪೂಜೆ ಮಾಡಲೇಕೆ
ಕಿಕ್ಕಿರಿದು ಯಮನ ದೂತರೆಳೆದೊಯ್ವಾಗ
ಸಂಭ್ರಮದಲೊಂದ್ಹೊತ್ತು ನೇಮದಲ್ಲಿದ್ದು
ತಂಬ್ಹಿಟ್ಟಿನಾ ದೀಪ ಹೊರಲೇತಕೆ
ಕೊಂಬು ಹೋತು ಕುರಿ ಕೋಣನಾ ಬಲಿಗೊಂಬ
ಡೊಂಬಿ ದೈವಗಳ ಭಜಿಸದಿರು ಮನವೆ
ಚಿಗುರೆಲೆ ಬೀವಿನಸೊಪ್ಪು ನಾರಸೀರೆ
ಬಗೆ ಬಗೆಯಿಂದ ಶೃಂಗಾರ ಮಾಡಿ
ನೆಗೆ ನಗೆದು, ಆಡಲು ಕುಣಿಯಲು ನಿನಗಿನ್ನು
ಮಿಗಿಲಾದ ಮುಕುತಿಯುಂಟೇ ಹುಚ್ಚು ಮನವೆ

ದಾನ ಧರ್ಮ ಪರೋಪಕಾರವ ಮಾಡು
ದೀನನಾಗಿ ನೀ ಕೆಡಬೇಡವೋ
ಜ್ಞಾನವಿಲ್ಲದೆ ಹೀನ ದೈವವ ಭಜಿಸಲು
ಏನುಂಟು ನಿನಗಿನ್ನು ಎಲೆ ಹುಚ್ಚು ಮನವೆ

ಇಲ್ಲಿ ಕನಕದಾಸರು ಗ್ರಾಮೀಣರ ಹಲವು ಪ್ರಮುಖ ದೈವಗಳನ್ನು ವಿಡಂಬನಾತ್ಮಕಕವಾಗಿ ಚಿತ್ರಿಸಿದ್ದಾರೆ. ವಿಶೇಷವೆಂದರೆ ಇದರಲ್ಲಿ ಮೈಲಾರ ಮತ್ತು ಸವದತ್ತಿಯ ಎಲ್ಲಮ್ಮರ ಚಿತ್ರಣವಿದೆ. ಮೈಲಾರನಲ್ಲಿಯ ಭಂಡಾರ, ಎಲ್ಲಮ್ಮನಲ್ಲಿಯ ಬೆತ್ತಲೆ ಮತ್ತು ಬೇವಿನ ಉಡುಗೆಯ ಆಚರಣೆಯನ್ನು ಧಿಕ್ಕರಿಸಿದ್ದಾರೆ. ಮುಗ್ಧ ಜನರನ್ನು ಮತ್ತಷ್ಟು ಮೂಢರನ್ನಾಗಿ ಮಾಡುವ ಇಂತಹ ಆಚರಣೆಗಳ ಬಗ್ಗೆ ಖಂಡನೆ ಇದೆ. ದೈವದ ಹೆಸರಿನಲ್ಲಿ ಪ್ರಾಣಿ ಹಿಂಸೆಯಂತಹ ಕ್ರೂರ ಕೃತ್ಯದ ಬಗ್ಗೆ ದಾಸರಿಗೆ ಅಸಹನೆ ಇದೆ. ನೂರಾರು ಕ್ಷುದ್ರ ದೇವತೆಗಳು ಅವುಗಳ ಸುತ್ತ ಹರಡಿಕೊಂಡ ನೂರಾರು ಆಚರಣೆಗಳು ಅವುಗಳ ಫಲವಾಗಿ ಉಂಟಾಗುವ ನೈತಿಕ, ಆರ್ಥಿಕ, ಸಾಮಾಜಿಕ ಅಧಃಪತನ ಮುಂತಾದವುಗಳನ್ನು ನಗ್ನವಾಗಿ ಶಕ್ತಿವತ್ತಾಗಿ ಚಿತ್ರಿಸುವ ಮೂಲಕ ಈ ನರಕ ವರ್ತುಲದ ಸಮಾಜದಿಂದ ಪಾರಾಗಬೇಕೆನ್ನುವ ಅಂತಃಕರಣ ಪೂರ್ವಕವಾದ ಕಳಕಳಿ ಈ ಕೀರ್ತನೆಯಲ್ಲಿ ತುಂಬಿ ಹರಡಿದೆ.

ಮನುಷ್ಯನ ಸ್ವಾರ್ಥಕ್ಕಿಂತ ಭಯಂಕರವಾದ ಭೂತ ಮತ್ತೊಂದಿಲ್ಲ. ಈ ಬಗೆಯ ಮನೋಧೋರಣೆ ಬಹುವೇಷ ಧರಿಸಿದೆ. ಈ ವೇಷದ ವಿವಿಧ ವರ್ಣವಿನ್ಯಾಸ ಆಕರ್ಷಣೆ ಪ್ರಲೋಭನೆ ಎಷ್ಟು ಮೋಹಕವಾಗಿದೆ ಮತ್ತು ವಂಚಕವಾಗಿದೆ ಎಂಬ ಕಟುಸತ್ಯವನ್ನು ಎಲ್ಲರೂ ಎದೆಮುಟ್ಟಿ ನೋಡಿಕೊಳ್ಳುವಂತೆ ವಜ್ರನಿಷ್ಠುರವಾಗಿ ಬಯಲಿಗೆಳೆಯುತ್ತಾ, ಆ ಮುಸುಕುಗಳನ್ನೆಲ್ಲ ಕಿತ್ತೆಸದಿದ್ದಾರೆ.

ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ
ವೇದಾಶಾಸ್ತ್ರ ಪಂಚಾಂಗ ಓದಿಕೊಂಡು ಪರರಿಗೆ
ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಚಂಡಭಟರಾಗಿ ನಡೆದು ಕತ್ತಿ ಢಾಲು ಕೈಲಿ ಹಿಡಿದು
ಖಂಡ ತುಂಡ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಅಂಗಡಿಗಳನ್ನೆ ಹೂಡಿ ವ್ಯಂಗ್ಯ ಮಾತುಗಳಾಡಿ
ಭಂಗಬಿದ್ದು ಗಳಿಸುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಕುಂಟೆ ತುದಿಗೆ ಕೊರಡು ಹಾಕಿ ಹೆಂಟೆ ಮಣ್ಣು ಸಮ ಮಾಡಿ
ರೆಂಟೆ ಹೊಡೆದು ಬೆಳೆಸುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ತಾಳ ದಂಡಿಗೆ ಶೃತಿ ಮೇಳ ತಂಬೂರಿಗೊಂಡ

ಸೂಳೆಯಂತೆ ಕುಣಿಯುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಸನ್ಯಾಸಿ ಜಂಗಮ ಜೋಗಿ ಜಟ್ಟಿ ಮೊಂಡ ಭೈರಾಗಿ
ನಾನಾ ವೇಷಗಳಲ್ಲಿ ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಹಳ್ಳದಲ್ಲಿ ಕುಳಿತುಕೊಂಡು ಕಲ್ಲು ದೊಣ್ಣೆ ಹಿಡಿದುಕೊಂಡು
ಕಳ್ಳತನವ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಅಂದಣ ಪಲ್ಲಕ್ಕಿ ಏರಿ ಮಂದಿ ಮಾರ್ಬಲ ಕೂಡಿ
ಚೆಂದದಿಂದ ಮೆರೆಯುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
ಉನ್ನತ ನೆಲೆಯಾದಿಕೇಶವನ ಧ್ಯಾನವನ್ನು
ಮನಮುಟ್ಟಿ ಮಾಡುವುದು ಮುಕ್ತಿಗಾಗಿ ಆನಂದಕ್ಕಾಗಿ

ಇಲ್ಲಿ ಕೊಟ್ಟಣ ಕುಟ್ಟುವ ಕಟ್ಟಿಗೆ ಹೊರುವ ತಾಳದಂಡಿಗೆ ಶೃತಿ ಮೇಳ ಹಿಡಿದುಕೊಂಡು ಸೂಳೆಯಂತೆ ಕುಣಿವ, ಕಳ್ಳತನವ ಮಾಡುವ, ಅಂದಣ ಏರಿ ಮಂದಿ ಮಾರ್ಬಲ ಕೂಡಿ ಮೆರೆಯುವ, ಸನ್ಯಾಸಿ ಜೋಗಿ ಜಂಗಮ ಜಟ್ಟಿ ಬೈರಾಗಿ ಈ ಎಲ್ಲಾ ವ್ಯಕ್ತಿಗಳ ಮುಖ್ಯ ಮತ್ತು ಮೂಲ ಉದ್ದೇಶ ಅನ್ನ ಮತ್ತು ಬಟ್ಟೆ ಎಂದು ಸ್ವಾರಸ್ಯವಾಗಿ ಕಡ್ಡಿ ಮುರಿದಂತೆ ಹೇಳುವ ಮೂಲಕ ಸಮಾಜದ ಎಲ್ಲಾ ಸೋಗಲಾಡಿತನವನ್ನು ಬೀದಿಯಲ್ಲಿ ಹರಾಜು ಹಾಕಿದ್ದಾರೆ. ಹೀಗೆ ಎಲ್ಲಾ ವ್ಯಕ್ತಿಗಳ ಮೂಲ ಉದ್ದೇಶ ಒಂದೇ ಆಗಿದ್ದಾಗ ವೃತ್ತಿಯಲ್ಲಿ ಶ್ರೇಷ್ಠ ಕನಿಷ್ಠ ಎಂಬ ತಾರತಮ್ಯ ಭಾವವಿಲ್ಲ. ಈ ಸಮಾಜ ಜೀವನ ಚಕ್ರ ಸುಗಮವಾಗಿ ಸಾಗಬೇಕಾದರೆ ಎಲ್ಲಾ ವ್ಯಕ್ತಿಗಳು ಅತ್ಯಗತ್ಯ. ಆದ್ದರಿಂದ ಅವೆಲ್ಲವೂ, ಅವರೆಲ್ಲರೂ ಸರ್ವಸಮಾನ ಎಂಬ ಉದಾತ್ತ ಚಿಂತನೆಯಡಿಯಲ್ಲಿ ಸಾಮಾಜಿಕ ಮೌಲ್ಯವನ್ನು ಎತ್ತಿ ಹಿಡಿದಿದ್ದಾರೆ.

ಮಾನವ ಸಮಾಜದಲ್ಲಿ ಸಾಂಸ್ಕೃತಿಕ ಮತ್ತು ನೈತಿಕ ಸಂಬಂಧಗಳು ಮುಖ್ಯ. ಅವು ದಿನೇ ದಿನೇ ಸಡಿಲಗೊಳ್ಳುತ್ತಿರುವ ಈ ಹಿನ್ನೆಲೆಯಲ್ಲಿ ದಾಸರ ಈ ಕೀರ್ತನೆ ವಿಡಂಬನಾತ್ಮಕ ಧೋರಣೆಯನ್ನು ಬಿಂಬಿಸುತ್ತದೆ.

ಸತ್ಯಧರ್ಮಗಳೆಲ್ಲ ಎತ್ತ ಹೋದವೋ ಕಾಣೆ
ಉತ್ತಮರ ಜೀವನಕೆ ದಾರಿಯಿಲ್ಲ
ನಿತ್ಯದಲಿ ಕಳವು ವ್ಯಬಿಚಾರಿವುಳ್ಳವರೆಲ್ಲ
ಅರ್ಥಸಂಪನ್ನರಾಗನುಭವಿಸುತಿಹರು
ಅತ್ತೆಯೇ ಸೊಸೆಯಾಗಿ ಸೊಸೆಯು ಅತ್ತೆಯೆ ಆಗಿ
ಪುತ್ರ ಪಿತನಾಗಿ ಪಿತನ ಪುತ್ರನಾಗಿ
ಮತ್ತೆ ಗಂಡನಿಗೆ ಹೆಂಡತಿಯೇ ಗಂಡಳು ಆಗಿ
ವರ್ತಿಸುವರಯ್ಯ ತಮಗೆಲ್ಲದುರಿದಿಲ್ಲವೆಂದು

ಅನ್ನವಸ್ತ್ರಗಳಿಂದ ಚೆನ್ನಾಗಿ ಬಾಳುವರ
ಭಿನ್ನ ತಂತ್ರವ ಮಾಡಿ ಕೆಡಿಸುತಿಹರು
ಗನ್ನಗತಕೆವ ಮಾಳ್ವ ಗ್ರಾಮ್ಯಗಳ ಕಲಿತು
ಕುನ್ನಿಗಳು ಹೆಚ್ಚಿದರು ಕ್ರೂರ ಫಣಿಯಂತೆ

ಇಲ್ಲಿ ಬದುಕಿನ ಸಾಮರಸ್ಯವನ್ನು, ಅರ್ಥವಂತಿಕೆಯನ್ನು ಆಪೋಶನ ತೆಗೆದುಕೊಳ್ಳುವ ಕೆಡುಕಿನ ಕಡೆಗೆ ತೀವ್ರವಾಗಿ ಹೊರಳಿದ ಈ ಸಾಮಾಜಿಕ ಜೀವನವನ್ನು ಕಂಡು ದಾಸರ ಮನಸ್ಸು ನೊಂದಿದೆ. ಸ್ವಾರ್ಥ ಪರವಾದ ಮನುಷ್ಯನ ತನ್ನ ಅಭಿಷ್ಟಾರ್ಥಕ್ಕೊಸ್ಕರ ಹಿಂದಿನಿಂದ ಬಂದ ತತ್ವಾದರ್ಶಗಳನ್ನು ಗಾಳಿಗೆ ತೂರಿ ತನ್ನಿಷ್ಟಕ್ಕೆ ತಕ್ಕಂತೆ ಬದಲಿಸಿಕೊಳ್ಳುವ ಪರಿಯಿದೆ. ನೈತಿಕ ಸ್ವಾಸ್ಥ್ಯಭರಿತ ಸಮಾಜವನ್ನು ಕೆಡಿಸುವ, ಅರಿಷಡ್ವರ್ಗಗಳಿಗೆ ಬಲಿಯಾಗಿ ಹೀನ ಕೃತ್ಯಗಳನ್ನು ಮಾಡುವ ಮಾನವನ ಮನೋಧೋರಣೆ ಇದೆ. ಈ "ದಿಸೆಯಲ್ಲಿ ಜ್ಞಾನಿಗಳು ಅಜ್ಞಾನಿಗಳಾಗುತ್ತಿದ್ದಾರೆ. ಮಹಾತ್ಮರು ಮೋಸಗಾರರಾಗುತ್ತಿದ್ದಾರೆ. ಮನುಷ್ಯನ ಜೀವನ ನೀರ ಮೇಲಿನ ಗುಳ್ಳೆಯಂತೆ ಸ್ಥಿರವಲ್ಲ. ಈ ಕಿರಿದಾದ ಬದುಕಿನ ಅವಧಿಯಲ್ಲಿ ಸತ್ಯವನ್ನು ಕಾಣುವ ಜ್ಞಾನವನ್ನು ಸಂಪಾದಿಸುವ ದಿಸೆಯಲ್ಲಿ ನಡೆಯಬೇಕು. ನಮ್ಮ ಸಂಗಡ ಬರುವುದು ಕೀರ್ತಿ ಅಪಕೀರ್ತಿ ಎರಡೆ"[೧] ಇಷ್ಟಕ್ಕಾಗಿ ಪರದಾಡುವ ಮಾನವರಿಗೆ ಕನಕದಾಸರ ಎಚ್ಚರಿಕೆಯ ಗಂಟೆ.

ಎನ್ನದೆಂದು ತನ್ನದೆಂದು ಹೊನ್ನು ಹೆಣ್ಣು ಮಣ್ಣಿಗಾಗಿ
ಘನವಾಗಿ ಬಾಯಿ ಬಿಡುತ್ತ ಬಂದ ಮೋಹವ
ಸನ್ನುತದಲ್ಲಿ ಪರಹಿತಾರ್ಥ ಮಾಡಿ
ಪುಣ್ಯ ಪಡೆಯಿನಿತು ಮುಂದೆ ಕಿರುಕುಳದ ರೂಪದಲ್ಲಿ ಕೆಡಲುಬೇಡ

ಈ ಮಾತುಗಳು ಜನಮನವನ್ನು ಜಾಗೃತಗೊಳಿಸುತ್ತವೆ. ಇದಕ್ಕಾಗಿ "ಸತ್ಯವ್ರತ, ಚಿತ್ತಶುದ್ಧಿ ತನುಶುದ್ಧಿ, ಆತ್ಮನಿವೇದಕ ಶಕ್ತಿಗಳು ಬೇಕು. ಮನುಷ್ಯನನ್ನು ಹಾಳು ಮಾಡುವುದು ಹೆಣ್ಣು, ಹೊನ್ನು, ಮಣ್ಣು ಇವು ಮಾನವನನ್ನು ಕ್ಷುದ್ರನನ್ನಾಗಿಸುತ್ತವೆ, ಅಹಂಕಾರಿಯನ್ನಾಗಿಸುತ್ತವೆ, ಹೀನನನ್ನಾಗಿಸುತ್ತವೆ ಮತ್ತು ಧೀನನನ್ನಾಗಿಸುತ್ತಿವೆ. ಇವನ್ನೆಲ್ಲಾ ವ್ಯಂಜಿಸುವ ದಿಟ್ಟ ಮನಸ್ಸು ಬೇಕು ಎಂಬುದು ದಾಸರ ನಿಲುವು"[೨] ಪ್ರಸ್ತುತ ವಿದ್ಯಮಾನದಲ್ಲಿ ನಡೆಯುತ್ತಿರುವ ಅಹಿತಕರ ಚಟುವಟಿಕೆಯ ಮೇಲೆ ಪ್ರಭಾವ ಬೀರುವ ನಿಟ್ಟಿನಲ್ಲಿ ಸಾರ್ವಕಾಲಿಕವಾದ ಸತ್ಯದ ನುಡಿಗಳಾಗಿವೆ. ಹಾಗಾಗಿ ಸತ್ಯ, ಧರ್ಮ, ನೀತಿ ಮೌಲ್ಯಗಳು ಸಾಂಸ್ಕೃತಿಕ ಬದುಕಿನ ಮೂಲ ಸೆಲೆಗಳು ಇವುಗಳ ಪ್ರಾಮಾಣಿಕ ಅನುಷ್ಠಾನದಿಂದ ಬದುಕು ಸಹನೀಯವೂ, ಆನಂದಮಯವೂ, ಸಾಮರಸ್ಯ ಪೂರ್ಣವಾಗುತ್ತದೆ. ಆದರೆ ಇಂತಹ ಮೌಲ್ಯಗಳು ಕುಸಿಯುತ್ತಿರುವುದನ್ನು ಕಂಡ ದಾಸರು ತೀವ್ರ ಕಳವಳದಿಂದ ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ.

ಕನಕದಾಸರು ಸಮಾಜದ ಎಲ್ಲಾ ಮಗ್ಗಲುಗಳನ್ನು ವಿಮರ್ಶಿಸಿದವರು. ಅಲ್ಲಿನ ಕಷ್ಟ ಕಾರ್ಪಣ್ಯದ ನೋವನ್ನು ಕಂಡವರು. ಮಾನವನ ಬದುಕಿನಲ್ಲಿ ವೈವಾಹಿಕ ಸಂಬಂಧ ಬಿಡಿಸಲಾಗದ ಅನುಬಂಧ ಈ ನಿಟ್ಟಿನಲ್ಲಿ ಮದುವೆಯ ನೆಪದಲ್ಲಿ ಹೆಣ್ಣು ಹೆತ್ತವರ ಮನೆಯಲ್ಲಿ ತಳವೂರಿ ಅವರನ್ನು ಸರ್ವವಿಧದಲ್ಲೂ ಸುಲಿಗೆ ಮಾಡುವ ಪ್ರವೃತ್ತಿ ಹಿಂದಿನಿಂದಲೂ ಬರುತ್ತಿರುವ ಪ್ರಕ್ರಿಯೆ. ಅದು ಇತ್ತೀಚಿನ ಕಾಲಮಾನದಲ್ಲಿ ಅಧಿಕವಾಗಿರುವುದು ವಾಸ್ತವದ ಸತ್ಯ. "ಇದು ಸಂಸ್ಕೃತಿಯ ಲಕ್ಷಣವೇ? ಸ್ವಾಭಿಮಾನ ಶೀಲತೆಯೆ?"[3] ನೂರಾರು ವರ್ಷಗಳ ಹಿಂದೆಯೇ ಕನಕದಾಸರು ಈ ಅಂಶದ ಕಡೆಗೆ ಗಮನ ಸೆಳೆದು ಮೊನಚಾಗಿ ಚುಚ್ಚಿದ್ದಾರೆ.

ಮಾವನ ಮನೆಯೊಳಗೆ ಇರಬಹುದೆ ಕೋವಿದರು
ಹಾವು ಹಿಡಿಯಲುಬಹುದು ಹರಣ ಕೊಡಲುಬಹುದು
ಬೇವ ಕಿಚ್ಚನು ಹಿಡಿದು ನುಂಗಲುಬಹುದು
ಭಾಮೆಯಳ ಮನೆಯಲ್ಲಿ ಜೀವಿಸುವುದಕ್ಕಿಂತ
ಸಾಯುವುದೇ ಲೇಸು ಅಭಿಮಾನಿಗಳಿಗೆ

ಒಂದು ಸಾಮಾಜಿಕ ಕೌಟುಂಬಿಕ ವ್ಯವಸ್ಥೆಯಡಿಯಲ್ಲಿ ಮಾನವ ಸಂಬಂಧಗಳು ಒಂದಕ್ಕೊಂದು ಹೆಣೆದುಕೊಂಡಿರುತ್ತವೆ. ಈ ಸಂಬಂಧಗಳನ್ನು ನವಿರಾಗಿ ವಿಡಂಬನಾತ್ಮಕವಾಗಿ ಮೂದಲಿಸಿದ್ದಾರೆ. 'ಮಾನವ ಮನೆಯೊಳಗೆ ಇರಬಹುದೆ ಕೋವಿದರು' ಎಂಬ ಈ ಕೀರ್ತನೆಯಲ್ಲಿ ಮಾವನ ಮನೆಯಲ್ಲಿ ಅಳಿಯನಿಗೆ ಸಿಗುವ ಆತಿಥ್ಯದ ಪ್ರಮಾಣವನ್ನು ಅಪಹಾಸ್ಯದ ಮೂಲಕ ವ್ಯಂಜಿಸಿದ್ದಾರೆ.

ಒಂದೊಂದು ತಿಂಗಳು ಬಹುಮಾನ ನಡತೆಗಳು
ಒಂದೆರಡು ತಿಂಗಳೊಳಗೆ ಹಿತವಾದನೆ
ಒಂದೊಂದಭದ್ರ ನುಡಿ ಒಳಗೊಳಗೆ ಹುಟ್ಟಿದವು
ಸಂದೇಹವೇಕೆ ಸಂಸಾರಿಗಳಿಗೆ

ನೆಂಟರು ಇನ್ನಷ್ಟು ದಿನ ಇರಲಿ ಎನ್ನುವ ಭಾವನೆ ಇದ್ದಾಗಲೆ ಅವರು ಜಾಗ ಮಾಡುವುದು ಸೂಕ್ತ ಮತ್ತು ಜಾಣತನ. ಇಲ್ಲದಿದ್ದರೆ ಹಿತವಾದ ಕುಹಕ ನುಡಿ ಹೆಮ್ಮರವಾಗಿ ಅವರ ಅಭಿಮಾನವನ್ನು ಸುಟ್ಟುಹಾಕಿ ಬಿಡುತ್ತದೆ. ಇಂಥ ಸಂದರ್ಭವನ್ನು ಕಂಡ ಕನಕದಾಸರು

ಪರರ ಸೇರಲೂಬಹುದು ಪತಿತರಲ್ಲಿರಬಹುದು
ಕೊಲೆ ಪಾತಕರ ಗರಗಸಕ್ಕೆ ಶಿರವೊಡ್ಡಬಹುದು
ತರುಣಿಯ ಸೆಳೆತಂದ ಮನೆಯ ವಾಸದಕ್ಕಿಂತ
ತರುಗಿರಿ ಗುಹದಿ ಇದ್ದು ತಪಸಿಯಾಗಿರಬಹುದು

ಎಂದು ಹೇಳಿರುವ ಮತು ಸರ್ವಕಾಲಕ್ಕೂ ಅನ್ವಯವಾಗುವಂಥದ್ದು ಪರರ ಮನೆಗೆ ಹೋದರೂ, ಕೊಲೆಗಡುಕರಿಗೆ ಶಿರವನ್ನು ನೀಡಿದರೂ, ಹೆಂಡತಿ ಮನೆಯ ವಾಸಕ್ಕಿಂತ ಬೆಟ್ಟಗುಡ್ಡದಲ್ಲಿ ತಪಸ್ಸು ಮಾಡುವುದೇ ಒಳಿತು ಎಂಬ ಚಿಂತನೆ ಈ ಕೀರ್ತನೆ ಆಶಯವಾಗಿದೆ.

ಪ್ರಸ್ತುತ ಸಮಾಜದಲ್ಲಿ ವೈವಾಹಿಕ ಸಂಬಂಧಗಳಡಿಯಲ್ಲಿ ಮಾನವರು ಒಬ್ಬರಿಗಿಂತ ಅಧಿಕ ಜನರ ಜೊತೆ ವಿವಾಹದ ಹೆಸರಿನಲ್ಲಿ ಮೋಸ ಮಾಡುವುದು, ಸೋಮಾರಿಯಾಗಿ ಹೆಂಡತಿ ದುಡಿಮೆಯಲ್ಲಿ ಬದುಕುವುದು ಇವೆಲ್ಲಾ ಇಂದು ನಡೆಯುತ್ತಿರುವ ವಾಸ್ತವ ಸತ್ಯ. ಆದರೆ ಮಾನವಂತನಾದ ಮನುಷ್ಯ ಮಾತ್ರ ಹೆಂಡತಿಯ ಮನೆಯಲ್ಲಿ ಹೆಚ್ಚು ದಿನ ಇರದೆ, ಅವರನ್ನು ಸುಲಿಗೆ ಮಾಡದೆ ಗಾಂಭೀರ್ಯದಿಂದ ವರ್ತಿಸುತ್ತಾರೆ. ಹಾಗೆಯೇ ನೆಂಟಸ್ತಿಕೆಗೂ ಒಂದು ಎಲ್ಲೆ ಇದೆ. ಪ್ರೀತಿ, ವಿಶ್ವಾಸ ಮತ್ತು ಆದರಗಳು ಒಂದು ಸೀಮಿತ ಪರಿಧಿಯಲ್ಲಿದ್ದಾಗ ಮಾತ್ರ ಅವುಗಳಿಗೆ ಬೆಲೆ. ನೆಂಟರ ಮನೆಯಲ್ಲಿ ಹೆಚ್ಚು ದಿನ ಇದ್ದಾಗ 'ಅತಿಯಾದರೆ ಅಮೃತವೂ ಕೂಡ ವಿಷವಾಗುತ್ತದೆ' ಎಂಬ ನುಡಿಯಂತೆ ಪ್ರೀತ್ಯಾದರಗಳು ಕಡಿಮೆಯಾಗುತ್ತವೆ. ಈ ನಿಟ್ಟಿನಲ್ಲಿ ಪರರ ಮನೆಯಲ್ಲಿದ್ದರೂ, ಕೊನೆಪಕ್ಷ ಕಾಡಿನಲ್ಲಿದ್ದು ತಪಸ್ಸು ಮಾಡಿದರೂ ಸರಿಯೇ, ಹೆಂಡತಿ ಮತ್ತು ಬಂಧುಗಳ ಮನೆಯಲ್ಲಿ ಹೆಚ್ಚು ದಿನದ ಆತಿಥ್ಯ ತರವಲ್ಲ ಎಂದಿದ್ದಾರೆ.

ಹಾಗೆಯೇ ಜನರು ವಿವಿಧ ಸಂದರ್ಭಗಳಲ್ಲಿ ನಡೆದುಕೊಳ್ಳಬೇಕಾದ ರೀತಿಯನ್ನು ತಮ್ಮ ಜೀವನಾನುಭವದ ಹಿನ್ನೆಲೆಯಿಂದ ನಿದರ್ಶನಗಳನ್ನು ನೀಡುವ ಮೂಲಕ ಸ್ಪಷ್ಟವಾಗಿ ಸಾರುತ್ತಾರೆ. ದಾಸರು ವಾಸ್ತವ ಬದುಕಿನ ಹೂರಣ. ಅವುಗಳಲ್ಲಿ ಅತ್ಯಂತ ಸಾಂದ್ರವಾಗಿ ತುಂಬಿಕೊಂಡಿರುವುದರಿಂದ ನಮ್ಮ ಮನಸ್ಸನ್ನು ಗಾಢವಾಗಿ ಕಾಡುವುದಲ್ಲದೆ ನಮ್ಮನ್ನು ನಮ್ಮೆದುರೇ ಹಿಡಿದು ನಿಲ್ಲಿಸುತ್ತವೆ.

ವರಕವಿಗಳ ಮುಂದೆ ನರಕವಿಗಳ ವಿದ್ಯೆ ತೋರಬಾರದು
ಧರಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದು
ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವ ತೋರಬಾರದು
ರೋಗಿಗಳಿದಲ್ಲಿ ಅನುಭವಗೋಷ್ಠಿಯ ಮಾಡಬಾರದು
ಅಡಿಸತ್ತ ಮಡಕೆಗೆ ಜೋಡಿಸಿ ಒಲೆಗುಂಡ ಹೂಡಬಾರದು
ಬಡತನ ಬಂದಾಗ ನೆಂಟರ ಬಾಗಿಲ ಸೇರಬಾರದು

ಇಂಥ ಕೀರ್ತನೆಗಳಲ್ಲಿ ತಮ್ಮ ಬದುಕನ್ನು ತಿದ್ದುವ, ತೀಡುವ ಸರಿಪಡಿಸುವ ದಾಸರ ಹೃದಯಾಂತರಾಳದ ಕಳಕಳಿ ವ್ಯಕ್ತವಾಗಿದೆ. ಮಾನವರ ಗುಣ ಸ್ವಭಾವ ವರ್ತನೆಗಳು ಭಿನ್ನ ನೆಲೆಯಿಂದ ಕೂಡಿರುತ್ತವೆ. "ಮನುಷ್ಯನ ಅಹಂ ಪ್ರವೃತ್ತಿ, ಮೌಢ್ಯ ಪ್ರವೃತ್ತಿ, ಕಳ್ಳತನದ ಪ್ರವೃತ್ತಿ, ದುಷ್ಟತನ, ಅರಿವಿನ ಕೊರತೆ ಹಾಗೂ ಬಡತನದ ಬೇಗೆಯ ಸಹಿಷ್ಣುತೆಯನ್ನುಳ್ಳ

ತಿರುಳಾಂಶಗಳು"[೪] ಈ ಕೀರ್ತನೆಯಲ್ಲಿ ಬಿಂಬಿಸುತ್ತವೆ.

ಇಹದ ಬದುಕಿಗೆ ಸಮಗ್ರತೆಗೆ ಬೇಕಾದುದೆಲ್ಲ ನಮ್ಮಲ್ಲಿದೆ. ಆದರೆ ಬೇಕಾದ ರೀತಿಯಲ್ಲಿ ಇಲ್ಲ ಎಂಬುದೆ ನಮ್ಮ ದುಃಖಕ್ಕೆ ಕಾರಣ. ನಮ್ಮ ಸುತ್ತ ಮುತ್ತಣ ವಾತಾವರಣವನ್ನೇ ನಮ್ಮ ಮುಂದೆ ಸಹಜವಾಗಿ ನೇರವಾಗಿ ಬಿಚ್ಚಿಟ್ಟು ಆ ಮೂಲಕ ದೋಷವೆಲ್ಲಿದೆ ಎಂಬುದು ನಮಗೆ ಸ್ಪಷ್ಟವಾಗಿ ಗೋಚರವಾಗುವಂತೆ ಮಾಡುವುದು ದಾಸರ ಮತ್ತೊಂದು ವೈಶಿಷ್ಟ್ಯ ಈ ಕೀರ್ತನೆಯಲ್ಲಿ

ತಾನು ಉಣದ ಪರರಿಗಿಕ್ಕದ ಧನವಿನ್ಯಾತಕೆ
ಮಾನಹೀನನಾಗಿ ಬಾಳ್ವ ಮನುಜನ್ಯಾತಕೆ
ಜ್ಞಾನವಿಲ್ಲದೆ ನೂರು ಕಾಲ ಬದುಕಲೇತಕೆ
ಮಾನನಿಯ ತೊರೆದ ಮೇಲೆ ಭೋಗವೇತಕೆ
ಮಾತು ಕೇಳದೆ ಮರೆತು ನಡೆವ ಮಕ್ಕಳ್ಯಾತಕೆ
ಪ್ರೀತಿಯಿಲ್ಲದೆ ಎಡೆಯಲಿಕ್ಕದ ಅನ್ನವೇತಕೆ
ನೀತಿಯರಿತು ನಡೆಯದಿರುವ ಬಂಟನ್ಯಾತಕೆ
ಸನ್ನೆಯನರಿತು ನಡೆಯದಿರುವ ಸತಿಯು ಯಾತಕೆ

ನಮಗೆ ಬೇಕಾದ ವ್ಯಕ್ತಿಗಳು, ವಸ್ತುಗಳು, ಗುಣಗಳು ನಮ್ಮಲ್ಲಿ ಕೇವಲ ಇದ್ದರೆ ಮಾತ್ರ ಸಾಲದು ಅವುಗಳ ಸಾರ್ಥಕವಾಗಬೇಕೆಂದರೆ ಅವು ಕ್ರಿಯಾ ರೂಪದಲ್ಲಿ ಅಭಿವ್ಯಕ್ತಿಗೊಂಡಾಗ ಮಾತ್ರ ಸಾಕಾರವಾಗುತ್ತದೆ. ಅಧಿಕ ಹಣವಂತನಾಗಿ ತಾನು ಬಳಸದೆ ಇತರರಿಗೂ ಕೊಡದಿದ್ದರೆ ಯಾವ ಪ್ರಯೋಜನವು ಆಗುವುದಿಲ್ಲ. ಹೆಂಡತಿಯನ್ನು ತೊರೆದು ಅನಂತರ ಸರಸಕ್ಕೆ ಅಪೇಕ್ಷಿಸಿದರೆ ಅರ್ಥಹೀನ ತಂದೆಯ ಮಾತನ್ನು ಕೇಳದ ಮಕ್ಕಳಿದ್ದರೂ ಅಪ್ರಯೋಜಕರು. ನಂಬಿಕೆಯಿಂದ ನಡೆದಕೊಳ್ಳದ ಭಂಟನ ನೇಮಕ ನಿರರ್ಥಕ ಹಾಗೂ ಸಂಸಾರ ನಿಷ್ಫಲ ಎಂಬ ಧೋರಣೆಯ ಚಿತ್ರಣ ಈ ಕೀರ್ತನೆಯ ಆಶಯವಾಗಿದೆ.

ಸ್ವಾಭಿಮಾನ ಸುಸಂಸ್ಕೃತ ವ್ಯಕ್ತಿಯ ಬದುಕಿನ ಅವಿಭಾಜ್ಯ ಅಂಗ. ಅದುವೇ ಜೀವನಸತ್ವ ಅದು ಇಲ್ಲದಿದ್ದರೆ ಮಾನವನು ಬದುಕಿದ್ದರೂ ಸತ್ತಂತೆ. ತಕ್ಷಣದ ಅವಶ್ಯಕತೆಗಾಗಿ ಸ್ವಾಭಿಮಾನವನ್ನು ಮಾರಿಕೊಂಡು ಹೇಗಾದರೂ ಬದುಕಬೇಕೆಂಬ ಆಸೆ ಅನರ್ಥಗಳ ಮೂಲಕ್ಕೆ ಕಾರಣವಾಗುತ್ತದೆ ಎಂಬ ತಾತ್ವಿಕತೆಯನ್ನು ಈ ಕೀರ್ತನೆಯಲ್ಲಿ ಚಿತ್ರಿಸಿದ್ದಾರೆ.

ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡ ಜಗಳವೇ ಲೇಸು
ಎಂಬುವುದು ಮಾನವಾದ ಅರಸನೊಲಗಕ್ಕಿಂತ

ತುಂಬಿದರೊಳಗೆ ತಿರಿದುಂಬುವುದೇ ಲೇಸು
ಒಡನೆ ಹಂಗಿಸುವ ಓಗರವನುಂಬುದಕ್ಕಿಂತ
ಕುಡಿನೀರು ಕುಡಿದು ಕೊಂಡಿರುವುದೇ ಲೇಸು

ಇಲ್ಲಿ ಸ್ವಾಭಿಮಾನಿಯಾದ ಮಾನವನಿಗೆ ಮಾರ್ಗದರ್ಶನ ನೀಡುವಂತಹ ತತ್ವಾದರ್ಶ ಇಲ್ಲಿದೆ. ಗೌರವಾನ್ವಿತನಾದ ಮನುಷ್ಯನಿಗೆ ಸ್ವಾಭಿಮಾನ ಅವನ ಉಸಿರನಷ್ಟೆ ಪ್ರಾಮುಖ್ಯ. ಹಲವಾರು ಅಜ್ಞಾನಿಗಳ ಜೊತೆ ಸೇರಿ ಗೌರವ ಕೆಡಿಸಿಕೊಳ್ಳುವುದಕ್ಕಿಂತ ಸುಜ್ಞಾನಿಗಳ ಜೊತೆ ಜಗಳವಾಡಿದರೂ ಸರಿ ಅವರ ಸಂಗಡ ಪೂರಕವಾಗಿರುತ್ತದೆ. ಮೃಷ್ಟಾನ್ನವನ್ನು ಬಡಿಸಿ ಒಡನೆ ಹಂಗಿಸುವ ಜನರ ಬಳಿ ಸೇರದೆ ಮೃಷ್ಟಾನದ ಬದಲು ತಿರಿದು ತಿನ್ನುವ, ನೀರು ಕುಡಿದು ಬದಕುವ ಬದುಕೇ ಅರ್ಥಪೂರ್ಣವಾಗಿರುತ್ತದೆ. ಸುಂದರವಾದ ಭವ್ಯ ಬಂಗಲೆಯ ತುಂಬ ಮದ ಮಾತ್ಸರ್ಯ ತುಂಬಿ ಅಲ್ಲಿ ಬಾಳ್ವೆ ನಡೆಸುವುದಕ್ಕಿಂತ ಸುಂದರವಲ್ಲದ ಪಾಳು ಗುಡಿಯಲ್ಲಿ ನೆಮ್ಮದಿ ಇರುತ್ತದೆ. ಈ ರೀತಿಯ ತಾತ್ವಿಕತೆಯ ಮಾರ್ಗದರ್ಶನದಂತೆ ನಡೆದರೆ ಮಾನವನ ಬದುಕು ವಿಶಿಷ್ಟವೂ, ಗೌರವಾನ್ವಿತವೂ, ಪ್ರಭಾವಕಾರಿಯೂ, ಸತ್ವ ಸಂಪನ್ನವೂ ಆಗುತ್ತದೆಂಬುದೇ ದಾಸರ ಇಂಗಿತವಾಗಿದೆ.

ಆಚಾರ ವಿಚಾರಗಳು ಸಾಮರಸ್ಯ ಬದುಕಿನಲ್ಲಿ ಸಾಧಿತವಾದಗಲೇ ಅದು ಅರ್ಥಪೂರ್ಣ, ಆದರ್ಶಮಯ, ನಮ್ಮ ಇಂದಿನ ಜೀವನದ ಬಿರುಕಿಗೆ, ದುರಂತಕ್ಕೆ, ನಮ್ಮ ನಡೆ ನುಡಿಗಳಲ್ಲಿನ ಬಿರುಕೆ ಕಾರಣವೆಂಬುದನ್ನು ಕನಕದಾಸರು ಈ ಕೀರ್ತನೆಯಲ್ಲಿ ತಿಳಿಸಿದ್ದಾರೆ.

ಜಪವಮಾಡಿದರೇನು ತಪವ ಮಾಡಿದರೇನು
ಕಪಟ ಗುಣವಿಪರೀತ ಕುಲುಷವಿದ್ದವರು
ಮೋಸದಿ ಜೀವದ ಘಾಸಿ ಮಾಡಿದ ಪಾಪ
ಕಾಶಿಗೆ ಹೋದರೆ ಹೋದೀತೆ
ಭಾಷೆಯ ಕೊಟ್ಟು ನಿರಾಸೆ ಮಾಡಿದ ಫಲ
ಕ್ಲೇಶವ ಗೊಳಿಸದೆ ಇದ್ದೀತೆ,

ದಾಸರು ಹೀಗೆ ಸಾರುತ್ತಾ ನಮ್ಮೊಳಗೆ ಆಪ್ತವಾಗಿ ನೆಲೆಯೂರುತ್ತ ನಮ್ಮಂತರಂಗವನ್ನು ಗಾಢವಾಗಿ ಕಲಕುತ್ತಾ ಪರಿವರ್ತನೆಯ ಬೀಜವನ್ನು ಬಿತ್ತುತ್ತ ಮಾನವನನ್ನು ಎಚ್ಚರಿಸಿದ್ದಾರೆ. ಮಾನವ ನುಡಿದಂತೆ ನಡೆಯಬೇಕು. ಈ ಮಾತು ಅವನ ಆಚಾರ, ವಿಚಾರ, ಧರ್ಮ, ನೈತಿಕತೆ, ಆಧ್ಯಾತ್ಮಿಕತೆ ಎಲ್ಲಾ ಕ್ಷೇತ್ರಗಳಿಗೂ ಅನ್ವಯವಾಗುವಂಥದ್ದು. ಸ್ವಾರ್ಥಪರನಾದ ಮನುಷ್ಯ ತನ್ನ ಸುಖ ಸಂತೋಷ ಲೋಲುಪತೆಗಾಗಿ ಇಂದ್ರಿಯಗಳ ತೃಪ್ತಿಗಾಗಿ ಇಂದು ಮಾಡಬಾರದ ಕೆಲಸ ಮಾಡುತ್ತಿದ್ದಾನೆ. ಸಮಾಜದ ನೈತಿಕ ಸ್ವಾಸ್ತ್ಯವನ್ನು ಹಾಳು ಮಾಡುತ್ತಿದ್ದಾನೆ. ಕೊಲೆ, ಸುಲಿಗೆ, ದರೋಡೆ, ಮಾನಭಂಗ ಇತ್ಯಾದಿ ಹೀನ ಕೃತ್ಯಗಳನ್ನು ಮಾಡಿ, ಪಾಪ ನಿವಾರಣೆಗಾಗಿ

ಮತ ಮಾನ್ಯಗಳಿಗೆ ಸುತ್ತುವ ಕಾಯಕ ಪ್ರವೃತ್ತಿ ಮಾಡಿಕೊಂಡಿದ್ದಾನೆ. ಹೀಗೆ ಹೀನ ಗುಣಗಳು ತುಂಬಿರುವ ಮನುಷ್ಯ ತಪ, ಜಪದಲ್ಲಿ ತೊಡಗಿ, ಪಾಪ ನಿವಾರಣೆಗೆ ಕಾಶಿಗೆ ಹೋದರೂ ಪಾಪ ಪ್ರಜ್ಞೆ ನಿವಾರಣೆಯಾದೀತೆ ಎಂಬ ಸಂದೇಶವಿದೆ.

ಹೀನ ಮನುಜಗೆ ಜ್ಞಾನವ ಬೋಧಿಸೆ
ಹೀನ ವಿಷಯವು ಅಳಿದು ಹೊದೀತೆ

ಮನುಜನನ್ನು ಉತ್ತಮನನ್ನಾಗಿ ಮಾಡುವುದೇ ಜ್ಞಾನ. ಅದೇ ಸಂಸ್ಕೃತಿ ಆದರೆ ಹೀನರನ್ನು ಹೀನರನ್ನಾಗಿಸುವ ಅವರಿಗೆ ಬೋಧಿಸುವುದು ವ್ಯರ್ಥವಾದುದು ಎನ್ನುವ ಕನಕದಾಸರ ನಿಲುವು ಆಕ್ಷೇಪಾರ್ಹ ಮತ್ತು ಆಶ್ಚರ್ಯಕರವಾಗಿದೆ. ತಾತ್ವಿಕ ಸಂತರನ್ನು ಕೂಡ ಒಮ್ಮೊಮ್ಮೆ ಪ್ರತಿಗಾಮಿತನ ಅವರಿಗರಿವಿಲ್ಲದಂತೆಯೆ ಆವರಿಸಿ ನಂಜನ್ನೊಡ್ಡುತ್ತಿದೆ ಎಂಬುದಕ್ಕೆ ಈ ಕೀರ್ತನೆ ಸಾಕ್ಷಿ. ಸರ್ವಜ್ಞನ 'ಮೂರ್ಖಂಗೆ ನೂರ್ಕಾಲ ಬುದ್ಧಿ ಹೇಳಿದರೆ ಗೊರ್ಕಲ್ಲ ಮೇಲೆ ಮಳೆ ಸುರಿದಂತೆ' ಎಂಬ ವಚನವು ಕೂಡ ಕನಕರ ಕೀರ್ತನೆಯನ್ನು ಅನುಮೋದಿಸುತ್ತದೆ.

ಸಾಮಾಜಿಕ ಪರಿಧಿಯಲ್ಲಿ ಬದುಕಿವ ಮಾನವನ ನಡೆ ನುಡಿಯಲ್ಲಿ ಸಂಸ್ಕೃತಿ ಇರುವುದರ ಜೊತೆಗೆ ಅವನು ಬಾಳುವ ಪರಿಸರವೂ ಕೂಡ ಸಂಸ್ಕೃತಿಯನ್ನಳೆಯುವ ಮಾನದಂಡವಾಗುತ್ತದೆ. ಆದ್ದರಿಂದ ಸನ್ಮಾರ್ಗಗಾಮಿಯಾಗುವ ಮಾನವ, ಯಾವ ಬಗೆಯ ಜನರ ಸಹವಾಸ ಮಾಡಬಾರದೆನ್ನುವ ಕಿವಿಮಾತುಗಳನ್ನು ಕನಕದಾಸರು ಇಲ್ಲಿ ತಿಳಿಸಿದ್ದಾರೆ.

ಕೂಡಿರುವ ಸಭೆಯಲ್ಲಿ ಕುತ್ಸಿತವ ನುಡಿವನ ಸಂಗ
ನಾಡಿನೊಳಗನ್ಯಾಯ ಮಾಡುವನ ಸಂಗ
ಬೇಡಿದರು ಕೊಡದಿರುವ ಕಡುಲೋಬಿಯ ಸಂಗ
ಮೂಢ ಮೂರ್ಖರ ಸಂಗ ಬಲು ಭಂಗ ಎಲೆ ರಂಗ

ವ್ಯಕ್ತಿಯ ವ್ಯಕ್ತಿತ್ವದಲ್ಲಿ ಗಾಂಭಿರ್ಯತೆ ದೊಡ್ಡ ಗುಣ. ಅದನ್ನು ಕೆಲವರು ಚೇಷ್ಟೆ ಮಾಡುವ ಮೂಲಕ ಕಳೆದುಕೊಳ್ಳುತ್ತಾರೆ. ಇಲ್ಲಿ ತುಂಬಿದ ಸಭೆಯಲ್ಲಿ ಗಾಂಭಿರ್ಯದಿಂದ ವರ್ತಿಸಬೇಕು. ಅದನ್ನು ಹೊರತುಪಡಿಸಿ ಚೇಷ್ಟೆ ಮಾಡಿದರೆ ಸಭೆ ಗಾಂಭೀರ್ಯತೆಯನ್ನು ಕಳೆದುಕೊಳ್ಳುತ್ತದೆ. ಅಂತವರ ಸಹವಾಸದಿಂದ ದೂರ ಇರಬೇಕೆಂಬುದು ಕನಕದಾಸರ ಸಲಹೆ. ಹಾಗೆ ನಾವು ವಾಸಿಸುವ ಪರಿಸರ ದೇವರಿಗೆ ಸಮ. ಆ ಪರಿಸರಕ್ಕೆ ಅನ್ಯಾಯ ಮಾಡುವ ಅದನ್ನು ಹಾಳು ಮಾಡುವವನ ಸಹವಾಸದಿಂದ ದೂರವಿರಬೇಕು. ಎಷ್ಟೇ ಬೇಡಿದರೂ, ಕೇಳಿದ್ದನ್ನು ಕೊಡದಿರುವ ಲೋಭಿಯ ಸಂಗ ಮತ್ತು ಕಡು ಮೂರ್ಖರ ಸಹವಾಸದಿಂದ ದೂರವಿರಬೇಕೆಂದು ಸಲಹೆಯನ್ನಿತ್ತಿದ್ದಾರೆ.

ಕನಕರು ಹುಟ್ಟಿನಿಂದ ಶೂದ್ರರು. ಅಂದಿನ ಸಮಾಜ ಕನಕರನ್ನು ಸ್ವೀಕರಿಸಲು ಸಿದ್ಧರಿರಲಿಲ್ಲ. ಅದಕ್ಕೆ ಕಾರಣ ಜಾತಿ. ಇದು ಇವರನ್ನು ಭಾದಿಸಿತು ಶೋಷಿತ ವರ್ಗದ ನೋವಿನ ದನಿಯ ಅರಿವೂ ಮೂಡಿತು. ಪರಿಣಾಮವಾಗಿ "ಕನಕರಿಗೆ ತಾತ್ವಿಕವಾದ ಕೋಪಹುಟ್ಟಿ, ಉಪ್ಪರಿಕೆಯ ಜನರ ಡೊಂಬರಾಟವನ್ನು ಕಂಡು ಕೆಂಡ ಕಾರಿದ್ದಾರೆ."[೫]

ಮಾತಿಗೆ ಮಾತಿಗೆ ಹರಿಯ ನಿಂದಿಸಿ ಸ
ರ್ವೋತ್ತಮ ಶಿವನೆಂದು ಸಾಧಿಸಿ
ದಾತು ಗ್ರಂಥಗಳೆಲ್ಲ ತೋರಿಸಿ ವೇ
ದಾಂತ ಪ್ರಮಾಣಗಳ್ಹಾರಿಸಿ
ಸೋತು ಸಂಕಟಪಟ್ಟು
ನೀತಿ ಹೇಳುವ ಕೆಟ್ಟಜಾತಿಗಳಲ್ಲದೆ

ಪುರೋಹಿತಶಾಹಿ ಜನಾಂಗ ವೇದಗಳನ್ನು ಉದ್ಧರಿಸುತ್ತ, ನೈತಿಕ ಬಲವಿಲ್ಲದೆ ಶೀಲಗೆಟ್ಟಂತೆ ಜಾತಿಯ ಬಗ್ಗೆ ನೀತಿಯನ್ನು ಹೇಳುವ ಮೂರ್ಖತನ ಮಾಡಿದ್ದಾರೆ. "ಜಾತಿ ನಿರ್ಣಯ ಜ್ಞಾನದಿಂದಾಗಬೇಕು ಭಕ್ತಿಯಿಂದಾಗಬೇಕು ಸತ್ಯದಿಂದಾಗಬೇಕೆ? ಹೊರತು ಹೊಲಸು ದೇಹ ಹಾಗೂ ಮನಸ್ಸನ್ನು ಮುಂದಿಟ್ಟುಕೊಂಡು ಮಾಡಬಾರದು. ಏಕೆಂದರೆ ಆತ್ಮ ಇಂದ್ರಿಯಗಳು ಯಾರ ಸೊತ್ತು ಅಲ್ಲ. ಇದೆಲ್ಲ ಸಾಧನೆಗೆ ಸಂಬಂಧಿಸಿದುದು ಹಾಗೆ ನೋಡಿದರೆ ಜಾತಿಯ ನೈಜ ಅರ್ಥವೇ ಮೇಲ್ವರ್ಗದವರಿಗೆ ತಿಳಿದಿಲ್ಲವೆಂದು"[೬] ಕನಕದಾಸರು ತೀಕ್ಷ್ಣವಾಗಿ ನುಡಿದಿದ್ದಾರೆ. ಕನಕದಾಸರು ಉತ್ತಮ ವರ್ಗದವರು ಆಚರಿಸುವ ಆಚಾರ ವಿಚಾರ ಸಂಪ್ರದಾಯಗಳ, ರೂಢಿಗತ ಪದ್ಧತಿಗಳಿಗೆ ಅಭಿಮುಖವಾದವರು ಅವರಲ್ಲಿನ ರೀತಿ ರಿವಾಜು ಬೂಟಾಟಿಕೆಯ ನಡವಳಿಕೆಗಳನ್ನು ನವಿರಾದ ವಿಡಂಬನೆಯಿಂದ ಅಣಿಕಿಸಿದವರು.

'ನೇಮವಿಲ್ಲದ ಹೋಮ ಇನ್ನೇತಕೆ' ಕೀರ್ತನೆಯಲ್ಲಿ ಕನಕದಾಸರು ನೇರವಾಗಿ ಶ್ರದ್ಧೆಯಿಲ್ಲದ ಕೇವಲ ಡಾಂಭಿಕ ತನದಲ್ಲಿ ವೃತ್ತಿ ಪ್ರದರ್ಶನ ಮಾಡುವ ಢಾಂಬಿಕ ವಿಪ್ರರನ್ನು ಟೀಕಿಸಿದ್ದಾರೆ. ವಾರಕ್ಕೊಂದು ಉಪವಾಸ ಮಾಡುತ್ತ, ನೀರಲ್ಲಿ ಮುಳುಗಿ ಹಾಕುತ್ತ ಪಾಪ ಕಳೆಯುವ ಭ್ರಮೆಯಲ್ಲಿ ನಡೆದಾಡುವ ಮಂದಿಯ ಜನ್ಮ ಜಾಲಾಡಿದ್ದಾರೆ. ನಾರಿಯರ ಸಂಗ ಬಿಡಲಾರದೆ ಒದ್ದಾಡುವ ಉತ್ತಮರ ನೀಚ ಗುಣವನ್ನು ಬಯಲಿಗೆಳೆದಿದ್ದಾರೆ. ಇವರ ಪೂಜೆ ಪುನಸ್ಕಾರಗಳು "ಕಳ್ಳರಿಗೆ ಕಳ್ಳನಂತೆ ಬೆಳ್ಳಕ್ಕಿಯಂದದಿ ಡಂಭ ಕಂಡಿದೆ. ಇವರೆಲ್ಲ ಕಣ್ಣಿದ್ದು ಕೂಡ ಗಾಣದೆತ್ತಿನಂತೆ ಕಣ್ಣು ಮುಚ್ಚಿ ಪ್ರದಕ್ಷಿಣೆ ಮಾಡಿ ಕಾಣದೆ ತಿರುಗುವ ವರ್ತನೆಯವರು"[೭] ಇವರ ಆಚಾರವಾದರೋ

ಸೋರೆಯೊಳಗೆ ಮದ್ಯ ತುಂಬಿ ಮೇಲೆ ತುಳಸಿ ಪುಷ್ಪ ಮಾಲೆ

ಗೀರು ಗಂಧ ಅಕ್ಷತೆಯ ಧರಿಸಿದಂತೆ.........

ದೇಹದೊಳಗೆ ಮದ್ಯ ಸೇವಿಸಿ, ದೇಹದ ಮೇಲೆ ನಾಮ ಬಳಿದು ಕೊರಳಿಗೆ ತುಳಸಿ ಮಾಲೆ ಹಾಕಿಕೊಂಡು ಡಾಂಭಿಕ ವೇಷಧರಿಸಿ ಬಾಹ್ಯಾಡಂಬರ ತೋರುವ ಡೊಂಬರಾಟದಂತೆ ಎಂದು ನಿರ್ದಾಕ್ಷಿಣ್ಯವಾಗಿ, ಖಂಡಿಸಿದ್ದಾರೆ. ಅವರ ಮನದ ಕೊರತೆ, ಸತ್ಯದ ಕೊರತೆ, ಜ್ಞಾನದ ಕೊರತೆಯ ಕಂಡು ಬೆರಗುಗೊಂಡಿದ್ದಾರೆ. ಇದು ಒಂದು ವರ್ಗಕ್ಕೆ ಸೀಮಿತವಾಗದೆ ಎಲ್ಲಾ ವರ್ಗಕ್ಕೂ ಅನ್ವಯಿಸಿ ವ್ಯಂಗ್ಯ ಮಾಡಿದ್ದಾರೆ.

ಮತಧರ್ಮಗಳು ಜನರನ್ನು ಭಾವುಕರನ್ನಾಗಿಸುತ್ತವೆ. ಜನರು ಅವಕ್ಕೆ ಭಯ ಭಕ್ತಿಯಿಂದ ಸ್ಪಂದಿಸುತ್ತಾರೆ. ಇವರ ದೌರ್ಬಲ್ಯವನ್ನು ಉತ್ತಮರು ಬಹು ಸುಲಭವಾಗಿ ಶೋಷಿಸುತ್ತಾರೆ, ಪೋಷಿಸಿ ಬೆಳೆಸುತ್ತಾರೆ. ತಮ್ಮ ಸ್ವಾರ್ಥ ನಿಲುವಿಗೆ, ನೀಚತನಕ್ಕೆ ಮತೀಯ ಲೋಪವನ್ನು ಬಳಿದು ಆಕರ್ಷಿಸುತ್ತಾರೆ. "ಇವರೊಡ್ಡಿದ ಬಲೆಗೆ ಎಳೆಮೀನಾಗಿ ಕೆಳವರ್ಗದವರು ಸಿಲುಕಿ ಬಿಡುತ್ತಾರೆ"[೮] ಈ ಪ್ರಮಾಣದಲ್ಲಿ ವೃತ್ತಿಪರರಾಗಿ ಮೇಲುಜಾತಿಯವರು ಸ್ವಾರ್ಥಕ್ಕೆ ಬಳಕೆ ಮಾಡಿಕೊಳ್ಳುವ ಅಂಥವರನ್ನು ಈ ರೀತಿಯಾಗಿ ವಿಡಂಬಿಸಿದ್ದಾರೆ.

ಮಂಡೆ ಬೋಳು ಮಾಡಿ ನಾವು
ಉಂಡೆಯನು ಬರೆದು ಕೆಡಿಸಿ
ಕಂಡ ಕಂಡವರ ಕೂಡಿ
ಭಂಡ ಜನ್ಮ ಹೊರೆಯುವರಿಗೆ
ಅವರಿವರ ಕೈಯ ನೋಡಿ ಹ
ಲವು ಕೆಲವು ಮಾತನಾಡಿ
ಹಲವು ಹಂಬಲಿಸಿ ದಿನವ
ಕಳೆದು ಉಳಿದು ಬಾಳುವಣೆ

'ಇಲ್ಲಿ ಉದರನಿಮಿತ್ತ ನಾನಾ ವೇಷಂ' ಎಂಬ ನುಡಿಯಂತೆ ತಲೆಬೋಳಿಸಿಕೊಂಡು ವಿಭೂತಿ ಧರಿಸಿ ಜನರಿಗೆ ಮೋಸಮಾಡುವ, ಜ್ಯೋತಿಷ್ಯ ಹೇಳುವ ಮೂಲಕ ಅವರಿವರ ಕೈಯ ನೋಡಿ ಕೈಕೊಡುವ (ಮೋಸ) ಬೂಟಾಟಿಕೆಯ ಮನುಷ್ಯರನ್ನು ಕುರಿತಂತೆ ವಿಡಂಬನಾತ್ಮಕವಾಗಿ ಚಿತ್ರಿಸಿದ್ದಾರೆ. ಹಾಗೆಯೇ ಈ ರೀತಿಯ ಮನೋಧೋರಣೆ ಕೇವಲ ಒಂದು ವರ್ಗಕ್ಕೆ ಸೀಮಿತವಾಗಿರದೆ ಎಲ್ಲ ವರ್ಗದವರಲ್ಲೂ ಕಂಡು ಬರುತ್ತದೆ.

ಒಡೆದ ಮಡಕೆ ತಂದು ಅರೆದು ನಾಮವ ಮಾಡಿ
ಕೊಡುವೆ ನೀ ಕಾಸಿಗೆ ಒಂದೊಂದನು
ಒಡಲು ತುಂಬಿ ಮಿಕ್ಕ ಅನ್ನವ ಮಾರಿಸಿ

ಒಡವೆಯ ಗಳಿಸುವ ಕಡು ಲೋಭಿಶೆಟ್ಟಿ

ಇಲ್ಲಿ ಹೊಟ್ಟೆ ಹೊರೆಯಲು ಒಂದು ಕಾಯಕ ವೃತ್ತಿ ಮಾಡುತ್ತಾ ಆ ವೃತ್ತಿಯಲ್ಲೂ ತಂತ್ರಗಾರಿಕೆಯಿಂದ ಮೋಸ ಮಾಡುವ ಕಡುಲೋಭಿ ಶೆಟ್ಟಿಯ ಜೀವನ ಕ್ರಮವನ್ನು ಬಿಂಬಿಸಿದ್ದಾರೆ.

ತಾಯಿಯ ಗರ್ಭದಿಂದ ಹುಟ್ಟುವ ಮನುಷ್ಯ ವಿಶ್ವಮಾನವನಾಗಿ ಹುಟ್ಟುತ್ತಾನೆ. ಪರಿಸರದ ಪ್ರಭಾವಕ್ಕೆ ತುತ್ತಾಗಿ ಕೇವಲ ಮಾನವನಾಗುತ್ತಾನೆ. ಅರಿಷಡ್ವರ್ಗಗಳಿಗೆ ದಾಸಾನುದಾಸನಾಗಿ ಬದುಕಿನ ದುರಂತವನ್ನು ತಂದುಕೊಳ್ಳುತ್ತಾನೆ. ಇದಕ್ಕೆ ಸಹವಾಸ ದೋಷವೂ ಒಂದಾಗಿರಬಹುದು. ಇದಕ್ಕೆ ಇಂಬುಕೊಡುವಂತೆ 'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ' ಎನ್ನುವ ಸರ್ವಜ್ಞವಾಣಿ ಮತ್ತು ಜನಪದರ 'ಸಗಣಿಯವನ ಸರಸಕ್ಕಿಂತ ಗಂಧದವನ ಜೊತೆ ಗುದ್ದಾಡುವುದೇ ಲೇಸು' ಎನ್ನುವ ವಾಣಿ ಈ ಸತ್ಯವನ್ನು ಪ್ರತಿಫಲಿಸುತ್ತದೆ. ನಮ್ಮ ಸುತ್ತ ಹಲವು ಬಗೆಯ ಊಸರವಳ್ಳಿ ಜನರಿರುತ್ತಾರೆ. ಹಲವಾರು ದುಸ್ವಭಾವ ದೌರ್ಬಲ್ಯಗಳನ್ನು ಹೊಂದಿದವರಿರುತ್ತಾರೆ. ಕಡುಲೋಭಿಗಳು, ಮೂಢರು, ಮೂರ್ಖರು, ಅನ್ಯಾಯಿಗಳು, ಗುರುನಿಂದೆ, ಪರನಿಂದೆ, ಗುರುಪತಿ–ಪರಸತಿ ಮೋಹಕರು, ಕೃತಘ್ನರು ಚಾಡಿಕೋರರು, ಮಾತಾ ಪಿತದ್ರೋಹಿಗಳು ಮುಂತಾದ ಜನರಿರುತ್ತಾರೆ. ಇವರೆಲ್ಲರಲ್ಲೂ ನೀಚತನ ರಕ್ತ ಕಣಗಳಷ್ಟೇ ಸಹಜವಾಗಿ ಮೈಗೊಂಡಿರುತ್ತದೆ. ಆದ್ದರಿಂದಲೇ ಇವರನ್ನು ನೀಚರು ಎಂದು ಕನಕದಾಸರು ಭೇಡಿಸಿದ್ದಾರೆ. ಜೊತೆಗೆ

ನ್ಯಾಯವ ಬಿಟ್ಟು ನ್ಯಾಯವ
ಹೇಳುವ ನಾಯಿಗೆ ನರಕವು ತಪ್ಪೀತೆ

ಡೊಂಕು ಬಾಲಕದ ನಾಯಕರೆ
ನೀವೇನೂಟ ಮಾಡಿದಿರಿ
ಕಣಕ ಕುಟ್ಟೋ ಅಲ್ಲಿಗೆ ಹೋಗಿ
ಹಣಕಿ ಇಣಕಿ ನೋಡುವಿರಿ
ಕಣಕ ಕುಟ್ಟೋ ಒನಕೆಲಿ ಹೊಡೆದರೆ
ಕುಂಯ್ಞಿ ಕುಂಯ್ಞಿ ರಾಗವ ಹಾಡುವಿರಿ

ಇಲ್ಲಿ ಮನುಷ್ಯನ ಚಪಲತೆ, ಚಂಚಲತೆ ಆತ್ಮಾಭಿಮಾನದ ನಡೆಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಮಾನವನನ್ನು "ನಾಯಿಯೊಂದಿಗೆ ಸಾದೃಶ್ಯ ಕಲ್ಪಿಸಿದ್ದಾರೆ. ನಾಯಿ ಜನಪದರ ದೃಷ್ಟಿಯಲ್ಲಿ ನಾರಾಯಣನೂ ಹೌದು, ಪ್ರಾಮಾಣಿಕತೆಗೆ ಇನ್ನೊಂದು ಹೆಸರೂ ಕೂಡ ಹೌದು. ಆದರೆ ಅದೇ ನಾಯಿ ಹೊಲಸು ತಿನ್ನುತ್ತದೆ. ಸಿಕ್ಕಿದನ್ನು ಮೂಸುತ್ತದೆ, ಪಲ್ಲಕ್ಕಿ ಏರಿದರೂ ಹೊಲಸು ಕಂಡಲ್ಲಿ ಧುಮುಕಿ ಚಂಚಲತೆ ತೋರುತ್ತದೆ" ಹೀಗೆಯೇ

ಮಾನವನ ಮನಸ್ಸು ಉನ್ನತ ಮಟ್ಟದ ಚಿಂತನೆ ಮಾಡಿದರೆ ದೈವತ್ವವನ್ನು ಹೇರಬಹುದು. ಪ್ರತಿಯಾಗಿ ಹೀನಮಟ್ಟದ ಚಿಂತನೆ ಮೈಗೂಡಿಸಿಕೊಂಡರೆ ಮಾನವತ್ವದಿಂದಲೂ ದೂರು ಸಿಡಿದು ಕೀಳಾಗಬಲ್ಲದು ಎಂಬುದಕ್ಕೆ ದಾಸರು ಏಕಕಾಲದಲ್ಲಿ ಒಂದೇ ಪದದಲ್ಲಿ ಜೀವನ ಎರಡು ಮುಖವನ್ನು ದರ್ಶಿಸುವ ರೀತಿ ಮನೋಜ್ಞವಾಗಿದೆ.

ಕನಕದಾಸರು ಸಮಾಜವನ್ನು ಚಿಕಿತ್ಸಕ ಮನೋಭಾವದಿಂದ ಕಂಡವರು ಅದಕ್ಕೆ ಮೊದಲು ತನ್ನ ಅಂತರಂಗವನ್ನು ಶೋಧಿಸಿಕೊಂಡವರು. ಬಸವಣ್ಣನವರ ನುಡಿಯಂತೆ 'ಎನಗಿಂತ ಕಿರಿಯರಿಲ್ಲ' ಎಂಬ ಸ್ವ ಅವಲೋಕನದಂತೆ ಕನಕರು ಅಷ್ಟೇ ನಿರ್ಮತೆ ನಿರ್ಲಿಪ್ತತೆಯಿಂದ 'ನರಜನ್ಮ ಹುಳು' ಎಂದು ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಾರೆ.

ಕನಕದಾಸರಿಗೆ ಸಂಸಾರದ ಬಗ್ಗೆ ತಿರಸ್ಕಾರವಿದೆ. ಅವರ ಕೀರ್ತನೆಯಲ್ಲಿ ಎಲ್ಲಿಯೂ ಪ್ರಗತಿಪರ ಧೋರಣೆ ಕಂಡು ಬರುವುದಿಲ್ಲ. ವಚನಕಾರರು ಸಂಸಾರದಲ್ಲಿದ್ದು ಮೋಕ್ಷವನ್ನು ಸಂಪಾದಿಸಲೆತ್ನಿಸಿದರೆ, ಕನಕದಾಸರು ಸಂಸಾರ ಮುಕ್ತತೆಯನ್ನು ಪ್ರಯಾಸ ಪೂರ್ವಕವಾಗಿ ಒಪ್ಪಿದಂತೆ ತೋರುತ್ತದೆ. ಇವರು ಬದುಕನ್ನು ಗ್ರಹಿಸುವ ಹಿಂದೆ ನೈಜತೆಯ ಕೊರತೆ ಇದೆ ಎಂದೆನಿಸುತ್ತದೆ. ಅದರಲ್ಲೂ ಸತಿ ಪಾತ್ರದ ಬಗ್ಗೆ ಕಸಿವಿಸಿ ಗುಮಾನಿಗಳಿರುವಂತೆ ತೋರುತ್ತದೆ.

ಮಂಡಲದೊಳಗೊಬ್ಬ ಜಾರಸ್ತ್ರೀಯಳು ತನ್ನ
ಗಂಡನರಿಕೆಯಿಂದ ವ್ಯಭಿಚಾರಗೈಯೆ
ಮಂಡಲ ಪತಿಯು ಶೋಧಿಸಿ ಹಿಡಿದೆಳೆತಂದು

ಚಂಡಿ ಮಾಡಲು ಬೆದರುವಳೆ
ಗುರುಬಂಧು ಬುಧಜನರು ನಿಂತಗ್ನಿಸಾಕ್ಷ್ಯಾಗಿ
ಕರವಿಡಿದು ಧಾರೆಯ ನೆರೆದುಕೊಂಡ
ತರುಣಿ ಇನಿಯನ ಹರಣ ಹೋಗಲು ತಾ ಕಂಡು
ಬರುವುದಕ್ಕಂಜಿ ದಾರುಗತಿಯೆಂಬುವಳು
ಪತಿವ್ರತೆಯರೆಂಬುವರು ಶತಸಹಸ್ರಕೆ ಒಂದು
ಮಿತಿಮೀರಿ ಇಹರಯ್ಯ ಇತರ ಜನರು
ಮತಿಗೆಟ್ಟ ಮನಸೋತು ಅನ್ಯಪುರುಷರ ಕೂಡಿ
ಗತಿಗೆಟ್ಟು ಹೋಗುವರು ಪರಲೋಕ ತೊರೆದು

ಇಲ್ಲಿ ಹೆಣ್ಣಿನ ಸ್ಥಾನಮಾನ ಮತ್ತು ಅಂದಿನ ಹಾಗೂ ಇಂದಿನ ಸಮಾಜದ ಧೋರಣೆಯನ್ನು ತಿಳಿಸುತ್ತದೆ. ಇಲ್ಲೆಲ್ಲ ಹೆಣ್ಣಿನ ಮನಸ್ಥಿತಿಯನ್ನು ಕನಕರು ರೋಚಕವಾಗಿ ಬಿಡಂಬಿಸಿದ್ದಾರೆ. ಇಲ್ಲಿ ಸತಿಯಿಲ್ಲದ ಸಂಪದವು ಏಕೆ ಎಂದು ಹೇಳುವ ಮಾತು ಕೇವಲ

ಹೇಳಿಕೆಯಾಗಿಯೇ ಉಳಿಯುತ್ತದೆ. ಕೊನೆಗೆ "ಆ ಸತಿಗೆ ಪತಿಯೆ ಗತಿಯೆಂದು ಪತಿಯ ನೆರಳಲ್ಲಿ ಅವನಾಜ್ಞೆಗೆ ಕಾದು ನಿಲ್ಲಬೇಕೆಂದು"[೧೦] ತಾಕೀತು ಮಾಡಿದ್ದಾರೆ. ಹಾಗೆಯೇ ಸ್ತ್ರೀ ವರ್ಗದ ಚಂಚಲ ಗುಣ ಸ್ವಭಾವ, ಅದರ ಜಾರತನ ಮತ್ತು ಪತಿವ್ರತೆಯ ಪರಿಕಲ್ಪನೆ ಸ್ತ್ರೀಯರಲ್ಲಿ ವಿರಳ ಎಂಬ ಮಾತು ಸ್ತ್ರೀ ವರ್ಗವನ್ನು ಗುಮಾನಿಯಿಂದ ನೋಡುವಂತಾಗಿದೆ.

"ಸಾಮಾಜಿಕ ಅಸಮಾನತೆಯಲ್ಲಿ ಬಡತನ ಬಲುಕೆಟ್ಟದ್ದು. ಇದು ಕರ್ಮಫಲ ಇದನ್ನು ನಿಭಾಯಿಸಿ ಸವೆಸುವುದೇ ಶ್ರೇಯಸ್ಕರ"[೧೧] ಇದನ್ನು ಬಿಟ್ಟು ಅವರಿವರ ಹತ್ತಿರ ಕೈಚಾಚಿ ಹಲುಬುವುದರಿಂದ ಬಡತನ ಹೋಗದು.

'ಕಳ್ಳತನ ಮಾಡಿ ಒಡಲು ಹೊರೆಯಲು ಬೇಡ'
'ಬಡತನ ಬಂದಾಗ ನೆಂಟರ ಬಾಗಿಲನು ಸೇರಲುಬಾರದು'
'ಮೆಚ್ಚಿ ಮೆರೆಯದಿರು ಬಂದೆ ಹೊತ್ತು ಕಳೆಯದಿರು'

ಮುಂತಾದ ಹೇಳಿಕೆಗಳು ಬಡತನಕ್ಕೆ ಪೂರಕವಾದ ಕೀರ್ತನೆಗಳಾಗಿವೆ. ಬಡತನ ಸಿರಿತನ ಬದುಕಿನಲ್ಲಿ ಬಂದು ಹೋಗುವ ಪ್ರಕ್ರಿಯೆಗಳು. ಬಡತನ ಬಂದಾಗ ಅವರಿವರ ಬಳಿ ನೆರೆಚಾಚದೆ, ಆಶ್ರಯಿಸದೆ ಎದುರಿಸಬೇಕು. ಅದು ಬಿಟ್ಟು ವಾಮ ಮಾರ್ಗದಲ್ಲಿ ಹೀನ ಕೃತ್ಯಗಳಿಗೆ ಬಲಿಯಾಗಬಾರದು. ಸಿರಿತನ ಬಂದಾಗ ಮೆಚ್ಚಿ ಮೆರೆಯದೆ, ಸಿರಿತನ ಬಡತನದ ಹಂಗನ್ನು ತೊರೆದು "ಉದಯಾಸ್ತಮಾನಗಳೆಂಬ ಎರಡು ಕೊಳಗವ ಮಾಡಿ ಆಯುಷ್ಯದ ರಾಶಿಯನ್ನು ಅಳೆಯಿರಯ್ಯ"[೧೨] ಎಂಬ ಅರಿವನ್ನು ಮೂಡಿಸಿದ್ದಾರೆ.

ಗಳಿಸದಿರುವ ಸೀಮೆಯೆನು ಗಳಿಸದಿರು ದ್ರವ್ಯವನು
ಗಳಿಸದಿರು ನೀ ದುರಿತ ರಾಶಿಗಳನು
ಎಂದು ಹೇಳಿ

"ಭೂಮಿ, ಸೀಮೆ, ಸಂಪತ್ತು ಸಿರಿವಂತಿಕೆಗಳೆಲ್ಲ ಅಂತಿಮವಲ್ಲ, ಅವನ ಶಾಶ್ವತ ಆಸ್ತಿಯೂ ಅಲ್ಲ, ಕಳ್ಳರು ಕದಿಯುವ, ರಾಜರು ಆಕ್ರಮಿಸುವ, ಅಣ್ಣತಮ್ಮಂದಿರು ಹಂಚಿಕೊಳ್ಳುವ ಹಪಹಪಿತನ ಇದಕ್ಕಿದೆ"[೧೩] ಆದ್ದರಿಂದ ನಿನ್ನ ವೈಯಕ್ತಿಕ ನೆಲೆಯ ವಿಕಾಸಕ್ಕೆ ಇವೆಲ್ಲವುಗಳನ್ನು ತಿರಸ್ಕರಿಸಲು ಕನಕದಾಸರು ಕರೆ ನೀಡಿದ್ದಾರೆ. ಇದರಂತೆ ಒಂದು ಸಮುದಾಯದಲ್ಲಿ ವ್ಯಕ್ತಿ ಸಂತೋಷ, ಸ್ವಾಭಿಮಾನಿ ಸತ್ಯಾಂಗಿಯಾಗಿರಬೇಕಾದರೆ, ಪರಸತಿಯರನು ನೋಡದೆ ದುರ್ಜನರೊಂದಿಗೆ ಕೂಡದೆ ಗರ್ವದ ಮಾತುಗಳನು ಆಡದೆ ಬೀದಿ ದೈವಗಳನ್ನು ಕೊಂಡಾಡದವನಾಗಿರಬೇಕು. ಈ ರೀತಿ ಯೋಚಿಸಿದಾಗ ತನ್ನ ಸುಖ ಸಮಾಜದ ಸುಖವಾಗಿ ಪರಿವರ್ತನೆಗೊಳ್ಳಬೇಕಾದರೆ ಪ್ರತಿಯೊಬ್ಬ ಈ ವ್ಯಕ್ತಿಯು ಆ ತತ್ವಾದರ್ಶದ ಪಥದಲ್ಲಿ ಸಾಗಿದಾಗ ಮಾತ್ರ ಸಾಧ್ಯವಾಗುತ್ತದೆ ಎಂಬುದು ಕನಕದಾಸರ ಚಿಂತನೆಯಾಗಿದೆ.

ಸಾಂಸಾರಿಕ ಕೌಟುಂಬಿಕ ವಲಯದಲ್ಲಿ ಶರಣರಿಗೆ ಸಂಸಾರ ಸಾರವಾದರೆ ದಾಸರಿಗೆ ಅದು ನಿಸ್ಸಾರ. ತಮ್ಮ ಸಾಧನೆಗೆ ಅಡ್ಡಿಯೆಂದರೆ ಈ ಸಂಸಾರವೇ ಎನ್ನುವಷ್ಟರಮಟ್ಟಿಗೆ ದಾಸರ ನಿಲುವು ದೃಢವಾಗಿದೆ. ದಾಸರ ದೃಷ್ಟಿಯಲ್ಲಿ ಸಂಸಾರವೆಂದರೆ ಆಸೆ ಆಮಿಷ ಬೋಗಲಾಲಸೆ ಸ್ವಾರ್ಥ ಸಂಪತ್ತು, ಪುತ್ರ ಪುತ್ರಿ, ಸತಿ ಸುತ, ಬಂಧು ಬಳಗದ ಗೂಡು. ಇದರ ಉಲ್ಲಂಘನೆಯೇ ಪರಮಾರ್ಥವೆಂದು ಬಗೆದರು. ಈ ನಿಟ್ಟಿನಲ್ಲಿ ಎಲ್ಲಾ ದಾಸರು ತಮ್ಮ ಮನೆ ಮಠ, ಸತಿ ಸುತ ಆಸ್ತಿ ಅಂತಸ್ತುಗಳನ್ನು ಮೊದಲು ಧಿಕ್ಕರಿಸಿದರು. ಇದ್ದ ಆಸ್ತಿ ಅಂತಸ್ತುಗಳನ್ನೆಲ್ಲಾ ದಾನ ಮಾಡಿದರು. ಕೊನೆಗೆ ಕಚ್ಚೆ ಪಂಚೆ ಕೈಯಲ್ಲಿ ತಂಬೂರಿ ಹಿಡಿದು ಬೀದಿಗೆ ಬಂದರು. ಈ ಹಿನ್ನೆಲೆಯಲ್ಲಿ ಕನಕದಾಸರು ಹೊರತಲ್ಲ. ಇದ್ದ ಶ್ರೀಮಂತಿಕೆ, ಸಾಮಂತಿಕೆ, ಸತಿ, ಸುತರನ್ನೆಲ್ಲ ತ್ಯಜಿಸುವ ಮೂಲಕ ಸಂಸಾರದ ಸಂಬಂಧವನ್ನು ಕಳಚಿಕೊಂಡರು.

ಬೆಳ್ಳಿ ಬಂಗಾರಿಟ್ಟುಕೊಂಡು ಒಳ್ಳೆ ವಸ್ತ್ರ ಹೊದ್ದುಕೊಂಡು
ಅಳ್ಳಾಚಾರಿಗೊಂಬೆಯಂತೆ ಆಡಿ ಹೋಯಿತು
ಹಳ್ಳ ಹರಿದು ಹೋಗುವಾಗ ನೀರ ಗುಳ್ಳೆ ಒಡೆಯುವಂತೆ
ಉಳ್ಳಿಯ ಪೊರೆಯಂತೆ ಕಾಣೋ ಸಂಸಾರದಾಟವು

ಇಲ್ಲಿ ಬೆಳ್ಳಿ ಬಂಗಾರವಾಗಲಿ, ಒಳ್ಳೆಯ ವಸ್ತ್ರಗಳಾಗಲಿ ಶಾಶ್ವತವಲ್ಲ ಅವು ಹರಿದು ಹೋಗುವ ಹಳ್ಳದಂತೆ. ಅಂಥ ಹಳ್ಳದಲ್ಲಿ ತೇಲಿ ಬರುವ ನೀರಗುಳ್ಳೆಯೆಂದರೆ ಸಂಸಾರ. ಇಂಥ ಗುಳ್ಳೆ ನಂಬುವುದಾದರೆ ಸಂಸಾರ ನಂಬಿದಂತೆ, ಗುಳ್ಳೆಗೆ ಇರುವ ಆಯುಷ್ಯವೇ ಸಂಸಾರಕ್ಕಿದೆ ಎನ್ನುವುದು ದಾಸರ ನಿಲುವು.

ಹೀಗೆ ವಿಡಂಬನೆ ಸೂಕ್ಷ್ಮಜ್ಞನ ಸಹಜ ಪ್ರವೃತ್ತಿ ಸಮಸ್ತ ದೋಷಗಳು ವಿಡಂಬನೆಯ ವಸ್ತುಗಳಾಗುತ್ತವೆ. ಮಾನವನಲ್ಲದೆ, ದೇವರು ಸಹ ಇದರ ವ್ಯಾಪ್ತಿಗೆ ಬರುತ್ತಾನೆ. ಈ ವಿಡಂಬನೆಯಲ್ಲಿ ರೊಚ್ಚಿನ ಕಾವಿರುತ್ತದೆ. ಮಾರ್ಮಿಕ ಸತ್ಯದ ಧ್ವನಿಯಿರುತ್ತದೆ. ಕನಕರು ಕವಿಮನದವರಾಗಿದ್ದರಿಂದ ವಿಡಂಬಕ ಶಕ್ತಿಗೊಂದು ಹೊಸ ಛಾಪು, ಹುರುಪು, ತೀಕ್ಷ್ಣತೆಯ ಸೊಗಸು ಬರುತ್ತದೆ. ಇವರ ವಿಡಂಬನೆಯಲ್ಲಿ ಕಲಾವಂತಿಕೆ, ನ್ಯಾಯಬುದ್ಧಿ, ಆತ್ಮಶೋಧನೆಯ ಗುಣ ಇದೆ. ಇಲ್ಲಿ ಕೇವಲ ಸಿಟ್ಟಿನ ಮನೋಧೋರಣೆ ಇರದೆ ಸ್ವಾಭಿಮಾನವಿದೆ. ತುಸು ವಿನೋದವಿದೆ. ತುಸು ಸಾತ್ವಿಕ ಕೋಪವು ಇದೆ. ವಿನೋದ, ಸ್ವಾಭಿಮಾನ ಮತ್ತು ಕೋಪ ಈ ಮೂರು ಸಮ್ಮಿಶ್ರಣದ ಮೇಲೆ ವಿಡಂಬನೆಯ ಸ್ವಭಾವವಿದೆ. ಇಲ್ಲಿ ದಾಸರು ವಿಡಂಬನೆಯ ಮೂಲಕ ಲೋಕದ ಡೊಂಕನ್ನು ತಿದ್ದಿದ್ದಾರೆ. ಸ್ವಾಸ್ಥ್ಯ ಸಮಾಜವನ್ನು ನಿರ್ಮಿಸುವಲ್ಲಿ, ಬರಿ ಮಾತಿನಿಂದಲೇ ಜನರ ಮನಸ್ಸನ್ನು ಪರಿವರ್ತಿಸುವ ಹವಣಿಕೆ ಮಾಡಿದ್ದಾರೆ. ಇವರು ಸ್ವಚ್ಚ ಮನಸ್ಸಿನಿಂದ ಆದರ್ಶ ಹಂಬಲಿಕೆಯಿಂದ ಸರ್ವಹಿತ ಮುಖಂಡತ್ವದಿಂದ ಜನರ ನಡುವಳಿಕೆ, ಸಮಾಜದಲ್ಲಿ ರೂಢಿಗತ ಸಂಪ್ರದಾಯಗಳು, ಜಾತಿ ಮತ ವ್ಯವಸ್ಥೆಗಳು ಬಡವ ಬಲ್ಲಿದ, ಮೇಲು–ಕೀಳು ತಾರತಮ್ಯ ಹಳಸಲು ಮೌಲ್ಯಗಳು, ಬದುಕಿನ ಆಡಂಬರದ ವಿಚಾರಗಳು, ಈ ಮೊದಲಾದ ವಾಸ್ತವಿಕ ಕಠೋರ ಸತ್ಯವನ್ನು ಪರಿಣಾಮಕಾರಿಯಾಗಿ ಮತ್ತು ತಲಸ್ಪರ್ಶಿಯಾಗಿ ಎತ್ತಿ ತೋರಿಸುವ ಮೂಲಕ ಕನಕದಾಸರು ಅದ್ವಿತಿಯ ವಿಡಂಬಕರಾಗಿ ಕಂಡು ಬರುತ್ತಾರೆ.

ಅಡಿಟಿಪ್ಪಣಿಗಳು

೧. ಹೆಚ್.ಜೆ.ಲಕ್ಕಪ್ಪಗೌಡ – ಸಾಹಿತ್ಯ ಬಹುಮುಖಿ ಚಿಂತನೆ. ಪುಟ ಸಂ. ೪೬೫.

೨. ಟಿ.ಮಹಾಬಲ ಅಡಿಗ – ಕನಕನ ಸಾಮಾಜಿಕ ವಿಡಂಬನೆ : ಕನಕಾವಲೋಕನ – ಪುಟ ೮೧೯

೩. ಹೆಚ್.ಜೆ.ಲಕ್ಕಪ್ಪಗೌಡ – ಸಾಹಿತ್ಯ ಬಹುಮುಖಿ ಚಿಂತನೆ – ಪುಟ ಸಂ. ೪೬೦

೪. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು – ಕನಕದಾಸರ ಕೀರ್ತನೆಗಳು – ಸಾಂಸ್ಕೃತಿಕ ಕನ್ನಡ ಎಂ.ಎ. ಪ್ರಥಮ – ಪುಟ ೧೦೫

೫. ಟಿ.ಪದ್ಮಾಶೇಖರ್ ಕನಕದಾಸರ ಕೃತಿಗಳಲ್ಲಿ ವಿಡಂಬನೆ – ಕನಕಾವಲೋಕನ – ಪುಟ ೭೨೮

೬. ಅದೇ.................. ಪುಟ ಸಂ. ೭೨೮

೭. ಅದೇ.................. ಪುಟ ಸಂ. ೭೩೦

೮. ಅದೇ.................. ಪುಟ ಸಂ. ೭೩೪

೯. ಅದೇ.................. ಪುಟ ಸಂ. ೭೩೫

೯. ಅದೇ.................. ಪುಟ ಸಂ. ೭೩೬

೧೦. ಅದೇ.................. ಪುಟ ಸಂ. ೭೪೦

೧೧. ಅದೇ.................. ಪುಟ ಸಂ. ೭೪೦

೧೨. ಅದೇ.................. ಪುಟ ಸಂ. ೭೪೦

೧೩. ಕರ್ನಾಟಕ ರಾಜ್ಯ ಮುಕ್ತ ವಿ.ವಿ. ಮೈಸೂರು – ಕನಕರ ಕೀರ್ತನೆಗಳಲ್ಲಿ ನೀತಿಬೋಧೆ – ಪುಟ ೧೦೬

ಅಧ್ಯಾಯ ೨

ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಚಿಂತನೆ

ಕನಕದಾಸರು ಶೂದ್ರ ವರ್ಗದವರು, ಅಂದಿನ ವಿಜಯನಗರದ ಕಾಲಘಟ್ಟದಲ್ಲಿ ಒಂದು ಪ್ರಾಂತ್ಯದ ಪಾಳೆಗಾರಿಕೆ ನಡೆಸಿದ ಶಕ್ತಿವಂತರು, ತನ್ನದೇ ಆದ ಸಾಂಸಾರಿಕ ಕುಟುಂಬದಲ್ಲಿ ತುಂಬು ಜೀವನ ನಡೆಸಿದ ರಸಿಕರು ಆಗಿದ್ದರು. ಕಾಲಗರ್ಭದಲ್ಲಿ ಆದಂತಹ ಆಕಸ್ಮಿಕ ಘಟನೆಗಳು ಕನಕದಾಸರ ಮನಸ್ಸನ್ನು ಘಾಸಿಗೊಳಿಸಿ ವೈರಾಗ್ಯದತ್ತ ಮುಖ ಮಾಡುವಂತೆ ಮಾಡಿರಬೇಕು. ತಾನು ಗಳಿಸಿದ ಸಂಪತ್ತೆಲ್ಲವನ್ನು ತೊರೆದು ವಿರಾಗಿಯಾಗಿ ಆಧ್ಯಾತ್ಮಿಕ ನೆಲೆಯಲ್ಲಿ ಸಂತರಾದಂತಹ ಶ್ರೇಷ್ಠ ಚಿಂತಕರು. ಇವರು ಹರಿನಾಮ ಸ್ಮರಣೆ ಮಾಡುತ್ತಾ ಲೋಕವನ್ನೆಲ್ಲಾ ಸಂಚರಿಸಿ ಜ್ಞಾನವೆಂಬ ದಿಗಂತವನ್ನು ಮುಟ್ಟಿ, ತಾವು ಕಂಡುಂಡ ಲೋಕಾನುಭವವನ್ನು ಸಾಹಿತ್ಯದ ಮೂಲಕ ಉಣಬಡಿಸಿದ ಪ್ರತಿಭಾಪೂರ್ಣರು. ಇವರು ತಮ್ಮ ಕೀರ್ತನೆಗಳಲ್ಲಿ ಸಮಾಜದಲ್ಲಿ ಜನರ ನಡವಳಿಕೆ, ಬೇರುಬಿಟ್ಟಿರುವ ರೂಢಿಗತವಾದ ಅಪ್ರಬುದ್ಧವಾದ ಸಂಪ್ರದಾಯಗಳು ಜಾತಿ–ಮತ, ಬಡವ–ಬಲ್ಲಿದ, ಮೇಲು–ಕೀಳು ಹಾಗೂ ಸಮಾಜದಲ್ಲಿ ಕಂಧಾಚಾರ ಮೌಢ್ಯಗಳನ್ನು ಖಂಡಿಸಿ ಆ ಮೂಲಕ ಆರೋಗ್ಯಕರ ಸಮಾಜವನ್ನು ಬಯಸಿದವರು. ಮನುಷ್ಯ ತನ್ನ ಸ್ವಾರ್ಥ ಸಿದ್ಧಿಗಾಗಿ ಏನೆಲ್ಲಾ ಅನಿಷ್ಟ ಸಂಪ್ರದಾಯವನ್ನು ಸೃಷ್ಟಿಸಿ ಸಮಾಜಕ್ಕೆ ಕಂಟಕಪ್ರಾಯನಾಗುತ್ತಾನೆ ಎಂದು ತಿಳಿಸಿ, ಅವನ ಮನಃಪರಿವರ್ತನೆಯಾಗುವಂತೆ ತಿಳಿ ಹೇಳಿದ ಸಂತ. ಈ ಹಿನ್ನೆಲೆಯಲ್ಲಿ ಸಮಾಜಮುಖಿ ಧೋರಣೆ ಅವರ ಕೀರ್ತನೆಗಳ ಆಶಯವಾಗಿದೆ.

ದುರ್ಜನರ ಸಂಗ ಎಂದಿಗೊಲ್ಲೆನು ಹರಿಯೆ / ಇಂಥ
ಸಜ್ಜನರ ಸಂಗದೊಳಗಿರಿಸೆನ್ನ ರಂಗ
ಉಂಡಮನೆಗೆರಡ ಎಣಿಸುವಾತನ ಸಂಗ
ಕೊಂಡೆಯವ ಪೇಳಿ ಕಾದಿಸುವನ ಸಂಗ
ತಂದೆ ತಾಯನು ಬೈದು ಜರಿದು ಭಾದಿಸುವವನ ಸಂಗ / ಇಂಥ
ನಿಂದಕರ ಸಂಗ ಬಹುಭಂಗ ರಂಗ.
ನಂಬಿದ ಠಾವಿನಲಿ ಕೇಡನೆಣಿಪನ ಸಂಗ
ಸಂಭ್ರಮದಿ ಜಗಳ ಕಾಯುವನ ಸಂಗ
ಹಂಬಲಿಸಿ ಭವದ ಸುಖ ಮೆಚ್ಚಿದಾತನ ಸಂಗ
ರಂಬೆ ಸ್ತ್ರೀಯರ ನೋಡಿ ಮೋಹಿಪನ ಸಂಗ
ಗುರುಸತಿಗೆ ಪರಸತಿಗೆ ಎರಡು ಎಣಿಪನ ಸಂಗ
ಗುರುನಿಂದೆ ಪರನಿಂದೆ ಮಾಳ್ಪನ ಸಂಗ

ಪರಹಿತಾರ್ಥವ ಧರ್ಮ ಪಡೆಯದಾತನ ಸಂಗ / ಇಂಥ
ಪರಮ ಪಾಮರರ ಸಂಗ ಬಹು ಭಂಗ ರಂಗ.

ಈ ಕೀರ್ತನೆಯು ಸಮಾಜದಲ್ಲಿ ಜೀವಿಸುವ ಮಾನವನಿಗೆ ಮಾರ್ಗದರ್ಶನ ನೀಡುವ ಮತ್ತು ಕೆಟ್ಟ ದಾರಿಯಲ್ಲಿ ನಡೆಯದಂತೆ ತಿದ್ದಿ ಹೇಳುವ ಧಾಟಿಯಲ್ಲಿದೆ. ಸಂಘ ಜೀವಿಯಾದ ಮನುಷ್ಯ ಹಲವಾರು ವ್ಯಕ್ತಿಗಳ ನಡುವೆ ಒಡನಾಟ ಹೊಂದಬೇಕಾಗುತ್ತದೆ. ಈ ಒಡನಾಟ ಎಂಥ ವ್ಯಕ್ತಿಗಳ ಜೊತೆ ಮಾಡಬೇಕು ಎಂಬ ನಿದರ್ಶನ ಇಲ್ಲಿದೆ. ಜೊತೆಯಲ್ಲಿ ತಂದೆ–ತಾಯಿಗಳಿಗೆ ಬೈದು ತೊಂದರೆ ನೀಡುವ ಹೀನ ಮನಸ್ಸಿನ ವ್ಯಕ್ತಿಗಳ ಜೊತೆ ಒಡನಾಟ ತರವಲ್ಲ. ನಂಬಿಕೆಯಿಂದ ವರ್ತಿಸಿ ಕೇಡನ್ನುಂಟು ಮಾಡುವ ದುಷ್ಟಜನ, ಜಗಳ ಪ್ರವೃತ್ತಿಯುಳ್ಳ ವ್ಯಕ್ತಿಗಳ ಸಹವಾಸ ಮಾಡಬಾರದು ಎಂದು ತಿಳಿ ಹೇಳಿದ್ದಾರೆ. ಗುರುಸತಿ ಪರಸತಿಯರಲ್ಲಿ ವಿಶ್ವಾಸಭಾವನೆ ಹೊಂದಬೇಕು. ಅವರಲ್ಲಿ ಕೇಡನ್ನು ಎಣಿಸುವ, ಗುರುನಿಂದನೆಯನ್ನು ಮಾಡುವ ವ್ಯಕ್ತಿಗಳ ಸಹವಾಸದಿಂದ ದೂರವಿರಬೇಕು ಎಂದು ಚಿಂತಿಸಿದ್ದಾರೆ.

ಈ ನಾಡಿನ ಸಾಂಸ್ಕೃತಿಕ ನೆಲದಲ್ಲಿ ಅನೇಕ ಚಿಂತಕರು ಜನ್ಮ ತಾಳಿದ್ದಾರೆ. ತಾವು ಪಡೆದುಕೊಂಡ ವಿದ್ಯೆ, ಬುದ್ದಿ ಮತ್ತು ಸತ್ಯದ ಸಂದೇಶಗಳನ್ನು ಈ ನೆಲದಲ್ಲಿ ಎಲ್ಲಾ ಸಾಧಕರು ಸಾರಿದ್ದಾರೆ. ಮುಖ್ಯವಾಗಿ ಬುದ್ಧ, ಮಹಾವೀರ, ಬಸವಣ್ಣ, ಗಾಂಧಿ, ಅಂಬೇಡ್ಕರ್ ಮುಂತಾದವರು. ಅಂತಹವರ ಸಾಲಿಗೆ ಸೇರಿದ ಮಹಾನ್ ಚಿಂತಕರಲ್ಲಿ ಕನಕದಾಸರು ಒಬ್ಬರಾಗಿದ್ದಾರೆ.

ನೈತಿಕ ಮೌಲ್ಯಗಳಿಲ್ಲದಿದ್ದರೆ ಸಮಾಜಕ್ಕೆ ಸ್ವಾಸ್ಥ್ಯವೇ ಇಲ್ಲವೆಂದು ಅರ್ಥ ಹಾಗಾಗಿ ಕನಕದಾಸರು ಅವಿರತವಾಗಿ ರೀತಿ–ನೀತಿಗಳ ಬಗ್ಗೆ ಭಕ್ತರಲ್ಲಿ ಅರಿವು ತಂದರು. ಹಸಿವನ್ನು ತಣಿಸುವುದು ಮನುಷ್ಯನ ಮೂಲ ಅವಶ್ಯಕತೆ. ಅದನ್ನು ಪರರಿಗೆ ಪೂರೈಸುವ ಮನುಷ್ಯ ಪ್ರತಿಯೊಬ್ಬರಿಗೂ ಬೇಕು.

ದೊರೆತನವು ಬಂದಾಗ ಕೆಟ್ಟ ನುಡಿಯಲು ಬೇಡ
ಸಿರಿಬಂದ ಕಾಲಕ್ಕೆ ಉರಿಯಬೇಡ.

ಎನ್ನುವಲ್ಲಿ ಕನಕದಾಸರ "ನೈತಿಕ ಮೌಲ್ಯಗಳು ಬೀಜಮಂತ್ರದಂತೆ ಪ್ರಕಟವಾಗಿವೆ"[1] ದಾಸರು ಮೂಲತಃ ಸಮಾಜಜೀವಿ. ಒಂದು ಸಮಾಜದ ಆಗು–ಹೋಗು ಅರಿತ ಸಾಮಂತ, ಬಡತನ ಸಿರಿತನ ಎರಡನ್ನು ಕಣ್ಣಾರೆ ಕಂಡಾತ. ಹಾಗಾಗಿಯೇ ಈ ಮೇಲಿನ ಜೀವನಾನುಭವಗಳು ಅವರ ಮೂಲಕ ಹೇಳಿಸಲ್ಪಟ್ಟಿವೆ. ಒಂದು ಕಡೆ ಕಳ್ಳತನವಿದೆ. ಕಾರಣ ಬಡತನ ಮತ್ತು ಸೋಮಾರಿತನ ದುಡಿದುಂಡರೆ ವ್ಯಷ್ಟಿ ಸಮಷ್ಟಿ ಎರಡೂ ಶ್ರೀಮಂತಗೊಳ್ಳುತ್ತವೆ. ಈ ರೀತಿ ಶ್ರೀಮಂತನಾದಾಗಲೂ ಬಂದ ಸಿರಿತನದ ಬಗ್ಗೆ ಬಹಳ ಎಚ್ಚರಿಕೆ ಬೇಕು. ಇಲ್ಲವಾದರೆ ಕುರುಡು ಕಾಂಚಾಣವಾಗಿ ಕುಣಿದಾಡುವ ಜೀವ ವಿರೋಧಿಯು ಆಗಬಹುದು

ಎನ್ನುವಲ್ಲಿ ಆದರ್ಶ ಸಮಾಜವೊಂದರ ಸಮತಾರಾಜ್ಯದ ಕಲ್ಪನೆ ಇದೆ.

ಕನಕದಾಸರು ತನ್ನ ಅಂತರ್ಗಣ್ಣಿನಿಂದ ಸಮಾಜವನ್ನು ನೋಡಿದವರು. ಸಮಾಜದಲ್ಲಿ ನಡೆಯುವ ಅಹಿತಕರ ಚುಟುವಟಿಕೆಗಳಿಂದ ಬಲಿಯಾಗುವ ಮನುಷ್ಯರನ್ನು ಕಂಡು ಕಳವಳ ವ್ಯಕ್ತಪಡಿಸಿದವರು.

ಹಲವು ಮಾಯಗಳಿಂದ ಹಂಬಲಿಸಿ ಕೆಡಬೇಡ
ಬಲವಂತರೊಡನೆ ಹಗೆ ಮಾಡಬೇಡ
ಕುಲದಲ್ಲಿ ಜನಿಸಿ ಕುಚೋದ್ಯ ಮಾಡಲು ಬೇಡ
ನಲಿದ್ವರಿಯ ಪೊಗಳದ ನಾಲಿಗೆಯು ಬೇಡ

ಮಾನವನ ಮನಸ್ಸು ಮಹಾ ಮರ್ಕಟದಂತೆ ಕೆಲಸ ಮಾಡುತ್ತದೆ. ಇಲ್ಲ ಸಲ್ಲದ ಮಾಯೆಗೆ ಒಳಗಾಗಿ ಮನ ನೆಮ್ಮದಿಗೆ ಭಂಗ ತಂದುಕೊಳ್ಳುವ ಪರಿ ಇದೆ. ಅದಕ್ಕೆ ದಾಸರು ಮಾಯೆ, ಮೋಹದಿಂದ ದೂರವಿರಬೇಕು. ಬಲಿಷ್ಠರೊಡನೆ ಹಗೆತನ ಮಾಡಿಕೊಂಡರೆ ನಮಗೆ ಸಂಚಕಾರ ಬರುತ್ತದೆ. ಉತ್ತಮ ಕುಲದಲ್ಲಿ ಜನಿಸಿದ ಮೇಲೆ ಕುಲಕ್ಕೆ ಅಪವಾದ ಬರುವ ಹೀನ ಕೆಲಸ ಮಾಡಬಾರದು ಎಂದಿದ್ದಾರೆ. ಇಂದು ಮಾನವ ಹಲವಾರು ಮೋಹ ಪಾಶಗಳಿಗೆ ಒಳಗಾಗುತ್ತಿದ್ದಾನೆ. ಆಸೆ ಮೋಹ, ಹಣದ ಮೋಹ, ಅಧಿಕಾರದ ಮೋಹ, ಪ್ರತಿಷ್ಠೆ ಮೋಹ, ಸಿರಿಯ ಮೋಹ ಇತ್ಯಾದಿ ಮಾಯಾ ಮೋಹ ಪಾಶಗಳಿಗೆ ಒಳಗಾಗಿ ಅದೋಗತಿಗೆ ಇಳಿಯುತ್ತಿದ್ದಾನೆ. ಮನಸ್ಸಿನ ನೆಮ್ಮದಿ ಕಳೆದುಕೊಳ್ಳುತ್ತಿದ್ದಾನೆ. ಈ ಮಾಯಾ ಮೋಹದ ಬಿಸಿಲುಗುದುರೆಗೆ ಹಂಬಲಿಸಿ ಬಳಲಿ ಹಲುಬುತ್ತಿದ್ದಾನೆ. ಹಾಗಾಗಿ ಈ ಮಾಯಾ ಮೋಹದ ಆಸೆಗೆ ಬಲಿಯಾಗದೆ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬಂತೆ ಇದ್ದದರಲ್ಲೇ ತೃಪ್ತಿಯನ್ನು ಹೊಂದುವ ಮನಸ್ಸನ್ನು ಹೊಂದಬೇಕು. ಇಂದ್ರಿಯಗಳ ಅರಿಷಡ್ವರ್ಗಗಳ ಹತೋಟಿಯಲ್ಲಿ ಮನುಷ್ಯ ಸಾಗಬೇಕಾಗುತ್ತದೆ. ಇಲ್ಲದಿದ್ದರೆ ತಾನು ನೆಮ್ಮದಿಯನ್ನು ಕಳೆದುಕೊಂಡು ಸಮಾಜದ ಮೇಲೂ ದುಷ್ಪರಿಣಾಮ ಬೀರುವ ಮೂಲಕ ಕಂಟಕ ಪ್ರಾಯನಾಗುತ್ತಿದ್ದಾನೆ.

ಸಮಾಜದಲ್ಲಿ ಉಳ್ಳವರು ಮತ್ತು ಇಲ್ಲದಿರುವವರ ನಡುವೆ ಅಸಮಾನ ಹಂಚಿಕೆಯಿದೆ. ಉಳ್ಳವರು ಸಮಾಜದಲ್ಲಿ ಸಿರಿ ಸಂಪತ್ತು, ಅಧಿಕಾರ ಬಲ, ತೋಳ್ಬಲದಿಂದ ಬಲಿಷ್ಠರಾಗಿರುತ್ತಾರೆ. ಇಂತವರ ನಡುವೆ ವ್ಯವಹಾರ ಮಾಡುವಾಗ ಹಗೆ ಕಟ್ಟಿಕೊಳ್ಳುವುದು 'ಬಡವನ ಕೋಪ ದವಡೆಗೆ ಮೂಲ' ಎಂದಾಗುತ್ತದೆ. ಆದುದರಿಂದ ಬಲಿಷ್ಟರೊಡನೆ ಹಗೆತನದಿಂದ ದೂರವಿರಬೇಕು ಎಂಬ ನೀತಿಯನ್ನು ತಿಳಿಸಿದ್ದಾರೆ.

ಮಾನವೀಯ ಮೌಲ್ಯಗಳು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಗುರುಹಿರಿಯರನ್ನು, ತಂದೆ ತಾಯಿಗಳನ್ನು ಗೌರವಿಸುವ ಸಂಸ್ಕಾರ ಗುಣ ಕಡಿಮೆಯಾಗುತ್ತಿದೆ. ಮಕ್ಕಳು ಇಂದು

ತಂದೆ ತಾಯಿಗಳ ನೆಮ್ಮದಿಗೆ ಭಂಗ ತರುತ್ತಿದ್ದಾರೆ. ಕಳ್ಳತನ, ಸುಳ್ಳತನ, ದರೋಡೆ, ಕೊಲೆ ಸುಲಿಗೆಯಂತಹ, ಪ್ರೀತಿ ಪ್ರೇಮವೆಂಬ ವಯೋಸಹಜ ಗುಣದಿಂದ ಅಸಹಜವಾದ ಕೃತ್ಯಗಳನ್ನು ಮಾಡುವ ಮೂಲಕ ಅವರಿಗೆ ಅಗೌರವವನ್ನುಂಟು ಮಾಡುವ ಮೂಲಕ ಅವರ ಘನತೆ ಗಾಂಭಿರ್ಯಕ್ಕೆ ಒಡಕನ್ನುಂಟು ಮಾಡುತ್ತಿದ್ದಾರೆ.

'ಸಂಕಟ ಬಂದಾಗ ವೆಂಕಟರಮಣ' ಎಂಬ ನಾಣ್ಣುಡಿಯಂತೆ ಮನುಷ್ಯ ದೈವದ ಮೊರೆ ಹೋಗುವುದು ಅಸಾಯಕನಾದಾಗ ಮಾತ್ರ. ಹಾಗಾಗಿ ಎಷ್ಟೆ ಸಿರಿ ಸಂಪತ್ತು ಸೌಕರ್ಯವಿದ್ದರೂ ಭಗವಂತನ ಭಕ್ತಿಯನ್ನು ರೂಢಿಸಿಕೊಳ್ಳಬೇಕು. ಅವನ ನಾಮಸ್ಮರಣೆ ಮಾಡದ ನಾಲಿಗೆ ಇದ್ದರೂ ವ್ಯರ್ಥವೆಂದು ಸಿರಿಸಂಪತ್ತಿನ ನಿರರ್ಥಕತೆಯನ್ನು ದೈವದ ಬಲದ ಸಾರ್ಥಕತೆಯನ್ನು ತಿಳಿಸಿದ್ದಾರೆ.

ಮಂದ ಮತಿಗಳ ಕೂಡ ಮಹಾ ಕಥೆ ಪೇಳಬೇಡ
ಯತಿಯಾದ ಮೇಲಿನ್ನು ಸುತಪತಿರಾಸೆ ಬೇಡ
ಹಿತ ತಪ್ಪಿ ನಡೆವಂಥ ಹೆಂಡತಿಯು ಬೇಡ

'ಜಾಣರಿಗೆ ಮಾತಿನ ಪೆಟ್ಟು ದಡ್ಡರಿಗೆ ದೊಣ್ಣೆ ಪೆಟ್ಟು' ಎಂಬ ನಾಣ್ಣುಡಿಯಂತೆ ಮಂದಮತಿಗಳಿಗೆ ಮಹಾಕತೆಯ ಬೋಧನೆ ಹಿತವೆನಿಸದು. ಹಾಗೆಯೇ ಸಾಂಸಾರಿಕ ಸುಖದಿಂದ ವಿಮುಖನಾಗಿ ಯತಿಯಾದ ಮೇಲೆ ಹೆಂಡತಿ ಮಕ್ಕಳ ಮೋಹ ಇರಬಾರದು. ಸಂಸಾರದ ಕಣ್ಣು ಹೆಣ್ಣು, ಆ ಹೆಣ್ಣು ಮನೆಯ ದಾರಿದೀಪವಾಗಬೇಕೆ ಹೊರತು ದಾರಿ ತಪ್ಪಿ ನಡೆಸುವ ಪತಿದ್ರೋಹಿಯಾಗಿರಬಾರದು ಎಂಬುದು ದಾಸರ ಚಿಂತನೆ.

ಇಂದು ಸಮಾಜದಲ್ಲಿ ನೈತಿಕತೆಯ ಕೊರತೆ ಎದ್ದು ಕಾಣುವ ಅಂಶ. ಮಾನವನಿಗೆ ಚರಿತ್ರೆಯುದ್ದಕ್ಕೂ ತತ್ವಜ್ಞಾನಿಗಳು, ಸಾದು, ಸಂತರರು ನೈತಿಕ ಮೌಲ್ಯವನ್ನು ತಿಳಿಸಿದ್ದರೂ ಅವು ರುಚಿಸುತ್ತಿಲ್ಲ. ಕೆಟ್ಟ ಕಾರ್ಯಗಳಿಗೆ ಕಾರಣವಾಗುವ ಮಾತುಗಳು ಒಳ್ಳೆಯ ಕಾರ್ಯವನ್ನು ಮಾಡುವಾಗ ರುಚಿಸುತ್ತಿಲ್ಲ. ಹಾಗಾಗಿ ಅಲ್ಪಮತಿಗಳಿಗೆ, ಮಂದಮತಿಗಳಿಗೆ ನೈತಿಕ ಮೌಲ್ಯ ಮತ್ತು ಮಾನವೀಯ ಮೌಲ್ಯಗಳು ಇಷ್ಟವಾಗುತ್ತಿಲ್ಲ.

ಎಲ್ಲವನ್ನು ತೊರೆದು ವಿರಾಗಿಯಾದ ಮೇಲೆ ಸಾಂಸಾರಿಕ ಸುಖಭೋಗಗಳಿಂದ ವಿಮುಖನಾಗಬೇಕು. ಆದರೆ ಇಂದು ಜೋಗಿ, ಜಂಗಮ, ಸನ್ಯಾಸಿ, ಸಾದು ಸ್ವಾಮೀಜಿ ಹೆಸರಿನಲ್ಲಿ ಸೋಗು ಹಾಕಿಕೊಂಡು, ಹೆಣ್ಣಿನ ಭೋಗದಾಸೆಗೆ ಒಳಗಾಗಿ ಹೀನ ಕೃತ್ಯಗಳಲ್ಲಿ ತೊಡಗಿರುವುದು ಸರ್ವವ್ಯಾಪಿ ಸಂಗತಿಯಾಗಿದೆ.

ಹೆಣ್ಣಿನಿಂದಲೇ ಇಹವು ಹೆಣ್ಣಿನಿಂದ ಪರವು, ಹೆಣ್ಣೇ ಸಕಲಕು ಎಂಬ ಉಕ್ತಿಯಿದೆ. ಸಂಸಾರದಲ್ಲಿ ಸುಖ ಶಾಂತಿ, ನೆಮ್ಮದಿ ನೆಲೆಸಲು ಹೆಣ್ಣೇ ಕಾರಣ. ಹಾಗಾಗಿ 'ಹೆಣ್ಣು ತನ್ನ ಮನೆಯಲ್ಲಿಯೇ ಕದ್ದರೆ ಯಾವ ರೀತಿ ಅಸಹಜವೋ' ಹಾಗೆ ಪತಿಯ ಅರ್ಧಾಂಗಿಯೆನಿಸುವ

ಸತಿಯು ಪತಿದ್ರೋಹ ಮಾಡಿ ದಾರಿ ತಪ್ಪಿ ನಡೆದಾಗ, ಸಂಸಾರದಲ್ಲಿ ನೆಮ್ಮದಿ ಇಲ್ಲವಾಗುತ್ತದೆ. ಸಂಸಾರದ ವಿಘಟನೆಗೆ ಕಾರಣವಾಗುತ್ತದೆ. ಈ ಪಥದಲ್ಲಿ ಕನಕದಾಸರ ಈ ಚಿಂತನೆ ಸಾರ್ವಕಾಲಿಕ ಸತ್ಯವಾಗಿದೆ.

ತೀರ್ಥಯಾತ್ರೆಗೆ ಹೋಗಿ ತಿರುತಿರುಗಿ ಬಳಲಿ ಕೃ
ತಾರ್ಥನಾದೆನು ಎಂಬ ಘನತೆ ಬೇಡ
ಮುಟ್ಟಾದ ಮೇಲಿನ್ನು ಮೋಹಿಸಿ ಕೆಡಬೇಡ
ಕಷ್ಟ ದೆಸೆಯೊಳು ಧೈರ್ಯ ಬಿಟ್ಟು ನೀ ನಡೆಯಬೇಡ

ದಾಸರ ಈ ಕೀರ್ತನೆಗಳು ಬೆಂಕಿಯ ಕಿಡಿಗಳಂತೆ, ಮಾನವನಿಗೆ ಬೆಳಕಿನ ಮಾರ್ಗದರ್ಶಕಗಳು. ಇವುಗಳ ದಾರಿಯಲ್ಲಿ ಸಾಗಿದರೆ ಮಾನವನ ಸಾರ್ಥಕ ಜೀವನಕ್ಕೊಂದು ಅರ್ಥ ಬರುತ್ತದೆ. ಪಾಪ ಪುಣ್ಯದ ನಿಮಿತ್ತ ತೀರ್ಥಯಾತ್ರೆ ಮಾಡಿ, ಸುತ್ತಾಡಿ ಬಳಲಿ ಕೃತಾರ್ಥನಾದೆನು ಎಂಬ ಘನತೆ ಸರಿಯಲ್ಲ. ಋತುಚಕ್ರದ ಸಮಯದಲ್ಲಿ ಸ್ತ್ರೀಯರ ಸಹವಾಸ ವೈಜ್ಞಾನಿಕವಾಗಿ ತರವಲ್ಲ; ಮನುಷ್ಯನಿಗೆ ಕಷ್ಟ ಬಂದಾಗ ಸಹಾಯಕರಾಗುತ್ತಾರೆಂದು ನಂಬಿರುವವರೇ ಕೈಕೊಡುವುದೇ ಹೆಚ್ಚು. ಇಂತಹ ಕಷ್ಟ ಕಾಲದಲ್ಲಿ ಧೈರ್ಯ ತಾಳಬೇಕು. ಎದೆಗುಂದಬಾರದು, ಧೈರ್ಯದಿಂದ ಪರಿಸ್ಥಿತಿಯನ್ನು ನಿಭಾಯಿಸಬೇಕು ಎನ್ನುವ ಆತ್ಮಸ್ಥೈರ್ಯವನ್ನು ಕೀರ್ತನೆಯು ಬಿತ್ತರಿಸುತ್ತದೆ.

ಹಸಿದು ಬಂದವರಿಗೆ ಆಸನವೀಯಲು ಬೇಕು
ಶಿಶುಗಳಿಗೆ ಪಾಲ್ಬೆಣ್ಣೆಗಳನುಣಿಸಬೇಕು
ಹಸನಾದ ಭೂಮಿಯನ್ನು ಧಾರೆಯಲುಬೇಕು
ಪುಸಿಯಾಡದ ಭಾಷೆ ನಡೆಸಲೇಬೇಕು.

ಮಾನವನ ಸಾಮರಸ್ಯ ಬದುಕಿಗೆ ನೈತಿಕ ಮೌಲ್ಯಗಳು ಅಗತ್ಯ. "ಈ ಮೌಲ್ಯಗಳು ಬದುಕಿನ ಜೀವಂತಿಕೆಗೆ ಸೌಹಾರ್ದ ನೆಮ್ಮದಿ ನಿರುಮ್ಮಳಗಳಿಗೆ ನಿರಸೂಯೆ ನಿರ್ಮಲತೆಗಳಿಗೆ ಅರ್ಥಪೂರ್ಣ ಧ್ಯೇಯ ಸಾಧನೆಗೆ ಅತ್ಯಗತ್ಯ"[೨]. ಆದ್ದರಿಂದ ಮನುಷ್ಯ ತನ್ನ ಜೀವನ ಸಾರ್ಥಕತೆಗಾಗಿ ಮೈಗೂಡಿಸಿಕೊಳ್ಳಬೇಕಾದ ಕೆಲವು ಮೌಲ್ಯಗಳನ್ನು ದಾಸರು ಸರಳವಾಗಿ ನೇರವಾಗಿ ಮನಮುಟ್ಟುವಂತೆ ಪ್ರತಿಪಾದಿಸಿದ್ದಾರೆ.

ನೀತಿವಂತ ಮಾನವನಿಗೆ ನೈತಿಕತೆಯು ಬದುಕಿನ ಅವಿಭಾಜ್ಯ ಮೌಲ್ಯ. ಆ ಮೌಲ್ಯ ಸಮಾಜದಲ್ಲಿ ರೂಢಿಗತವಾಗಿದ್ದರೆ ಆದರ್ಶ ಸಮಾಜ ನಿರ್ಮಾಣವಾಗಿರುತ್ತದೆ. ಆ ಆದರ್ಶಮೌಲ್ಯಗಳು ಹಸಿದು ಬಂದವರಿಗೆ ಆಶನ, ಅನ್ನ ನೀಡುವಂತಿರಬೇಕು. ಮಗುವಿಗೆ ಹಾಲು ಬೆಣ್ಣೆಗಳನ್ನು ಕೊಡಬೇಕು. ದಾನಕೊಡುವಲ್ಲಿ ಉಪಯೋಗಕ್ಕೆ ಬರುವಂತಹ ಹಸನಾದ ಭೂಮಿಯನ್ನು ಕೊಡಬೇಕು. ಆಗ ಮಾತ್ರ ಆ ದಾನಗುಣ ಸಾರ್ಥಕವಾಗುತ್ತದೆ. ನುಡಿದಂತೆ

ನಡೆಯುವುದು ಕೂಡ ನೈತಿಕ ಮೌಲ್ಯ.

ಇಂಥ ಮೌಲ್ಯಗಳನ್ನು ಹೇಳಿದವರಲ್ಲಿ ಕನಕರೇ ಮೊದಲಿಗರಲ್ಲ, ಕೊನೆಯವರೂ ಅಲ್ಲ, ಆದರೆ "ಮಕ್ಕಳಿಗೆಂದು ದಾನವಾಗಿ ಬಂದ ಹಾಲು ತುಪ್ಪ ರವೆಗಳನ್ನು ಮಾರಿಕೊಳ್ಳುವ ಭೂದಾನದ ಹೆಸರಿನಲ್ಲಿ ನಿರುಪಯುಕ್ತವಾದ ಕಲ್ಲುಭೂಮಿಗಳನ್ನು ನೀಡುವ ಕ್ಷಣಕ್ಕೊಂದು ಆಶ್ವಾಸನೆ ನೀಡಿ ಒಂದನ್ನು ಕೂಡ ಈಡೇರಿಸದ ಪ್ರಾಮಾಣಿಕತೆಯಿಲ್ಲದ ವಚನ ಶೂರರಿರುವ"[೩] ಈ ದಿನಗಳಲ್ಲಿ ದಾಸರ ಈ ವಾಣಿ ಸಂಗತವಾಗಿ ಅರ್ಥಪೂರ್ಣವಾಗಿದೆ.

ಒಳ್ಳೆಯವನೆಂದು ಬಲು ಹೆಮ್ಮೆ ಬೇಡ
ಬಾಳ್ವೆ ಸ್ಥಿರವೆಂದು ನೀ ನಂಬಿ ಕೆಡಬೇಡ
ಕಾಯವನ್ನು ನಂಬದಿರು ಮಾಯಕೆ ಮರುಳಾಗದಿರು

ಪರಿಸ್ಥಿತಿ ಸಂದರ್ಭಗಳು ಒಳ್ಳೆಯ ಮನುಷ್ಯನನ್ನು ಕೆಟ್ಟವನಂತೆ ಮಾಡುತ್ತದೆ. ಪುರಾಣದ ರಾವಣ ಉದಾಹರಣೆಯಾಗಿದ್ದಾನೆ. ಹಾಗೆಯೇ ಕಾಲಚಕ್ರದಂತೆ ಬಾಳುವೆಯು ಸ್ಥಿರವಲ್ಲ. ಬಾಳಿನಲ್ಲಿ ಕಷ್ಟ ಸುಖ, ಸಾವು ನೋವು ಎಂಬ ಪ್ರಕ್ರಿಯೆಗಳು ಬಂದು ಹೋಗುವ ದಿಸೆಯಲ್ಲಿ ಬಾಳುವೆಯಲ್ಲಿಯೂ ಕೂಡ ಹಲವಾರು ಬದಲಾವಣೆಗಳಾಗುತ್ತಿರುತ್ತವೆ. ಆದುದರಿಂದ ಬಾಳುವೆಯು ಸ್ಥಿರವಲ್ಲ, ಸಿರಿ ಬಂದ ಕಾಲದಲ್ಲಿ ಮೆರೆಯುವುದು ತರವಲ್ಲ, ಸಿರಿ ನಮ್ಮ ಪತನಕ್ಕೆ ಬಹುಮುಖ್ಯ ಕಾರಣವಾಗಿರುವುದರಿಂದ ಅದನ್ನು ಏನೇ ಆದರೂ ನಂಬಬಾರದು. ಹಾಗೆಯೇ ನಮ್ಮ ಕಾಯವು ಸ್ಥಿರವಲ್ಲ. ಕಾಯದ ರೂಪು ಲಾವಣ್ಯ ಕೂಡ ಶಾಶ್ವತವಲ್ಲ. ಹಾಗಾಗಿ ರೂಪ ಲಾವಣ್ಯ ಮೋಹಪಾಶಕ್ಕೆ ಮರುಳಾಗಿ ಮನ ನೆಮ್ಮದಿ ಹಾಳು ಮಾಡಿಕೊಳ್ಳದಿರಿ ಎಂಬ ತಾತ್ವಿಕತೆ ಈ ಕೀರ್ತನೆಯ ಆಶಯವಾಗಿದೆ.

ಕೆಲವು ಸಾಮಾಜಿಕ ಸಂಗತಿಗಳನ್ನು, ಅವು ಇರಬೇಕಾದ ಪರಿಯನ್ನು ಆದರೆ ಈಗಿರುವ ರೀತಿಯನ್ನು ಅತ್ಯಂತ ಸರಳವಾಗಿ ಸ್ಪಷ್ಟವಾಗಿ ಪ್ರಾಸಾನು ಪ್ರಾಸಗಳ ಮೋಹಕ ಮೋಡಿಯ ಮೂಲಕ ದಾಸರು ಚಿತ್ರಿಸಿದ್ದಾರೆ. ಕೇಳುವವರ ಮನದಲ್ಲಿ ನೆಲೆ ನಿಲ್ಲುವಂತೆ ಚಿತ್ರಿಸಿದ್ದಾರೆ.

ದೇವರಿಲ್ಲದ ಗುಡಿಯು ಪಾಳುಬಿದ್ದಂಗಡಿಯು

ಭಾವವಿಲ್ಲದ ಭಕುತಿ ಅದು ಕುಹಕ ಯುಕುತಿ
ಹೇವವಿಲ್ಲದ ಹೆಣ್ಣು ಗಜುಗ ಬೆಳೆದ ಕಣ್ಣು
ಸೇವೆಯರಿಯದ ಧಣಿಯು ಕಲ್ಲಿನಾ ಕಣಿಯು
ಧರ್ಮವಿಲ್ಲದ ಅರಸು ಮುರಿದ ಕಾಲಿನ ಗೊರಸು
ನಿರ್ಮಲವಿಲ್ಲದ ಮನಸ್ಸು ತಾ ಕೊಳಚೆ ಹೊಲಸು

ಕರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು
ಮರ್ಮವಿಲ್ಲದ ಮಾತು ಒಡಕು ಮಡಕೆಯ ತೂತು
ಕಂಡು ಕರೆಯದ ನಂಟ ಮೊನೆಯ ಕೆಟ್ಟಿಹ ಕಂಟಿ
ಉಂಡು ನಗದಿಹ ಮೋರೆ ಅದು ಕಹಿಯ ಸೋರೆ
ಗಂಡಗಂಜದ ನಾರಿ ಅವಳೆ ಹೆಮ್ಮಾರಿ.

ವಾಸ್ತವ ಬದುಕಿನಲ್ಲಿ ಅಸಂಗತ ವಿಚಾರಗಳೇ ಅಧಿಕ. ಅದು ಸಾಮಾಜಿಕವಾಗಿರಲಿ, ಆರ್ಥಿಕವಾಗಿರಲಿ, ಧಾರ್ಮಿಕವಾಗಿರಲಿ, ಆಧ್ಯಾತ್ಮಿಕವಾಗಿರಲಿ ಸಂಗತವಲ್ಲದ ಪ್ರಕ್ರಿಯೆಗಳೇ ಅಧಿಕ. ಈ ಹಿನ್ನೆಲೆಯಲ್ಲಿ ದಾಸರ ಕೀರ್ತನೆ ಈ ಎಲ್ಲ ವಲಯಗಳ ಮೇಲೆ ಪ್ರಭಾವ ಬೀರುತ್ತದೆ.

ದೇವಸ್ಥಾನದಲ್ಲಿ ದೇವರ ಇರುವಿಕೆಯನ್ನು ನಂಬಿದ್ದೇವೆ. ಆ ದೇವರ ಅಸ್ತಿತ್ವವೆ ಅಲ್ಲಿರದಿದ್ದರೆ ದೇವಸ್ಥಾನ ವ್ಯರ್ಥವಾಗುತ್ತದೆ. ಇಂದು ದೇವಾಲಯಗಳ ಸ್ಥಿತಿಯೂ ಹಾಗೆ ಆಗಿರುವುದು ಶೋಚನೀಯ. ಇಂದು ದೇವಸ್ಥಾನಕ್ಕೆ ಹೋಗುವುದು ತೋರಿಕೆಯ ಸಂಕೇತವಾಗಿದೆ. ಪೂಜಾರಿಗಳ ಸುಲಿಗೆಯ ತಾಣವಾಗಿದೆ. ಪ್ರೇಮಿಗಳನ್ನು ಒಟ್ಟಿಗೆ ಸೇರಿಸುವ ಸ್ಥಳವಾಗಿದೆ. ಈ ಹಿನ್ನೆಲೆಯಲ್ಲಿ ದೇವರ ಅಸ್ತಿತ್ವವನ್ನು ಗುರುತಿಸುವುದು ಕಷ್ಟಕರವಾಗಿದೆ.

ಕನಕದಾಸರು ರಾಜಪ್ರಭುತ್ವವಿದ್ದ ಕಾಲಘಟ್ಟ. ಹಾಗಾಗಿ ರಾಜನಾದವನಲ್ಲಿ ನಿರ್ಮಲವಾದ ಧರ್ಮವಿರಬೇಕು ಎಂಬುದು ಮೌಲ್ಯ. ಆ ಮೌಲ್ಯವೇ ಇಲ್ಲದೇ ಆಳ್ವಿಕೆ ನಡೆಸಿದರೆ ಅದು ಮುರಿದ ಕಾಲಿನ ಗೊರಸಿಗೆ ಸಮ ಎಂಬುದು ದಾಸರ ತಾತ್ವಿಕತೆಯಾಗಿದೆ. ದಣಿಯು ದುಡಿಯುವ ಆಳಿನಲ್ಲಿ ಸೇವಾ ಮನೋಭಾವ ಹೊಂದಬೇಕು. ಮನಸ್ಸಿನಲ್ಲಿ ನಿರ್ಮಲಭಾವವಿರಬೇಕು. ಗಂಡಸಾಗಿ ಹುಟ್ಟಿದ ಮೇಲೆ ದುಡಿಮೆಯೇ ಆತನಿಗೆ ಶೋಭೆ. ಇಲ್ಲದಿದ್ದರೆ ಮೂಲೆಯಲ್ಲಿರುವ ಒನಕೆಗೆ ಸಮನಂತೆ. ಸತಿಯಲ್ಲಿ ಪತಿಯ ಬಗ್ಗೆ ಪೂಜ್ಯಭಾವನೆ, ಗೌರವಭಾವನೆ ಇದ್ದರೇನೆ ಹೆಣ್ಣಿಗೆ ಶ್ರೇಯಸ್ಸು, ಇಲ್ಲದಿದರೆ ಹೆಮ್ಮಾರಿಗೆ ಸಮ. ಸಮಾಜದಲ್ಲಿ ಒಪ್ಪಿತ ಮೌಲ್ಯಗಳು ಅಸಂಗತವೆನಿಸಿದಾಗ ಅದು ಅರ್ಥಪೂರ್ಣವಾದ ತಾತ್ವಿಕತೆಯನ್ನು ಹೊಂದಲಾಗದು. ಹೀಗೆ ಸಾಮಾಜಿಕವಾದ ವಸ್ತು ಸಂಗತಿಗಳ ಮೇಲೆ ದಾಸರು ಪರೀಕ್ಷಕ ನೋಟವನ್ನು ಬೀರಿದ್ದಾರೆ. ಇವುಗಳ ಒಂದೊಂದು ಆಂತರಿಕ ಸ್ವರೂಪವನ್ನು ಬಿಚ್ಚಿ ತೋರಿಸುವುದು ಈ ಕೀರ್ತನೆಯಿಂದ ಸುವ್ಯಕ್ತವಾಗುತ್ತದೆ. ಗುಡಿಯಲ್ಲಿ ದೇವರಿದ್ದರೆ, ಭಕ್ತಿಯಲ್ಲಿ ಭಾವವಿದ್ದರೆ, ಹೆಣ್ಣಿಗೆ ಶಾಲೀನತೆ ಇದ್ದರೆ ಧಣಿಗೆ ಸೇವಾ ಪ್ರಜ್ಞೆ ಇದ್ದರೆ, ಅರಸು ಧರ್ಮವಂತನಾಗಿದ್ದರೆ, ಶ್ರೀಮಂತಿಕೆಯೊಡನೆ ಮಕ್ಕಳು ಇದ್ದರೆ, ಊಟದಲ್ಲಿ ಸೌಖ್ಯವಿದ್ದರೆ, ಮಾತು ಮಾರ್ಮಿಕವಾಗಿದ್ದರೆ, ಭೃತ್ಯನಿಗೆ ವಿನಯವಿದ್ದರೆ ಮಾತ್ರ ಸಾರ್ಥಕ. ಆಗ ಬದುಕು ಸಂತೋಷಮಯ, ಪ್ರಗತಿಮಯವಾಗಿ ಕಂಗೊಳಿಸುತ್ತದೆ. ಇಲ್ಲದಿದ್ದರೆ ವಿರುದ್ಧ ಪರಿಣಾಮ ಉಂಟಾಗಿ ವ್ಯಕ್ತಿಯ ಬದುಕು ಟೊಳ್ಳಾಗಿ ಸಮಾಜ ಕುಟ್ಟೆ ಹುಳು ಹಿಡದ ಮರವಾಗುತ್ತದೆ.

ಹೀಗೆಯೆ ನೆಂಟರೆಂದರೆ ಆದರಣೆಯ ಆಗರವಾಗಿರಬೇಕು. ಉಂಡರೆ ಆ ಊಟದ ತೃಪ್ತಿ ಮುಖದ ಮೇಲೆ ಅರಳಬೇಕು. ಭಂಟನೆಂದರೆ ಸದಾ ಎದ್ದ ಮನಸ್ಸಿನಿಂದ ಯುದ್ಧಕ್ಕೆ ಸಿದ್ದರಿರಬೇಕು. ಹೆಂಡತಿಯೆಂದರೆ ಗಂಡನನ್ನ ಪ್ರೀತಿ ವಿನಯುಗಳಿಂದ ಅನುಸರಿಸುವಂಥವಳಾಗಿರಬೇಕು. ಇವೆಲ್ಲ ಸಮಾಜದ ಸುಸ್ಥಿತಿಗೆ, ಪೂರ್ಣ ಆರೋಗ್ಯಕ್ಕೆ ಅಗತ್ಯವಾದ ಅಂಶಗಳು ಎಂಬ ಸತ್ಯವನ್ನು ತುಂಬ ಉಚಿತವಾದ ಉಪಮೆಗಳ ಮೂಲಕ ಇಲ್ಲಿ ಮೂರ್ತಿಕರಿಸಿದ್ದಾರೆ. ಇದು ಕನಕದಾಸರ ಸಮಾಜ ದರ್ಶನದ ಸೂಕ್ಷ್ಮತೆಗೆ ಸಾಕ್ಷಿಯಾಗಿರುವಂತೆ ಮಾರ್ಗದರ್ಶಕವೂ ಆಗಿದೆ.

ಈ ಸಂಸಾರ ಎಂಬುದು ಸುಲಭವಲ್ಲವೆಂಬುದು ನಿಜ. ಆದರೆ ಇದಕ್ಕೆ ಹೆದರಿ ಹೇಡಿಯಾಗಿ ಓಡಿ ಹೋಗಿ ಯಾವು ಯಾವುದೋ ಸೋಗು ಹಾಕಿ ಜಪತಪ, ಯಾತ್ರೆಗಳ ಹೆಸರಿನಲ್ಲಿ ಕರ್ತವ್ಯ ಭ್ರಷ್ಟನಾಗುವುದು ಸಲ್ಲದು ಎಂಬುದು ದಾಸರ ವಾದ.

ಯತಿಯಾಗಬೇಡ ನೀ ವೈರಾಗ್ಯವನೆ ಪಿಡಿದು
ಸತತ ವ್ರತವ ಮಾಡಿದನೆಂಬ ಹಮ್ಮು ಬೇಡ
ಶೃತಿ ಸ್ಮೃತಿಯನ್ನು ನೋಡಿದನೆಂಬ ಚೇಷ್ಟೆಯು ಬೇಡ
ತನುವ ದಂಡಿಸಿ ತುದಿಯ ಕೋಡುಗಲ್ಲಿನ ಮೇಲೆ
ವನಿತೆಯನ್ನು ಬಿಟ್ಟು ತಪವಿರಲು ಬೇಡ
ಅನುದಿನವು ನೀರೊಳಗೆ ಮುಳುಗಿ ನಡಗಲು ಬೇಡ

ಎಂದು ಬುದ್ಧಿವಾದ ಹೇಳುತ್ತಾ "ಭಗವಂತನನ್ನು ನೆನೆಯುತ್ತ ತನ್ನ ಸಾಂಸಾರಿಕ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಪಾಲಿಸಿದರೆ ಸಂಸಾರವೆಂಬುದು ಹಾವಿನ ಹುತ್ತವಾಗದೆ ಹೂವಿನಂತೆ ಅಪ್ಯಾಯ ಮಾನವಾಗುತ್ತದೆಂದು"[೪] ವಿವರಿಸಿದ್ದಾರೆ. ಯತಿಯಾಗುವವರು, ವ್ರತ ಮಾಡುವವರು, ತಪಸ್ಸು ಮಾಡುವವರು, ತಮ್ಮ ಸಹಜ ವೈರಾಗ್ಯದಿಂದ ಆತ್ಮ ಸಹಜ ಪ್ರೇರಣೆಯಿಂದ ಹಾಗೆ ಮಾಡದೆ, ಕರ್ತವ್ಯದಿಂದ ನುಣುಚಿಕೊಳ್ಳುವುದಾಗಿ ಈ ಎಲ್ಲಾ ಮುಸುಕುಗಳನ್ನು ಹಾಕುತ್ತಾರೆ ಎಂಬುದನ್ನು ತಮ್ಮ ಸುದೀರ್ಘ ಜೀವನ ದರ್ಶನದಿಂದ ಕಂಡುಕೊಂಡ ದಾಸರು ಈ ಭ್ರಮೆಯನ್ನು ಈ ಮೂಲಕ ಹರಿದೊಗೆದಿದ್ದಾರೆ.

ಮಡದಿ ಮಕ್ಕಳು ಎಂಬ ಮಾಯಾ ಸಂಸಾರಕ್ಕೆ
ಸಡಗರವು ತಾಗೊಂಡು ಭ್ರಮಿಸಲೇಕೆ
ಬಿಡದೆ ಯಮನಾಳುಗಳು ಬಾರೆಂದು ಎಳೆವಾಗ
ಮಡದಿ ಮಕ್ಕಳು ತೊಲಗುವರೊ ಮನವೇ

ಮನುಷ್ಯ ಹುಟ್ಟುವಾಗ ಏಕಾಂಗಿ ಸಾಯುವಾಗ ಏಕಾಂಗಿ ಈ ನಡುವೆ ಸಂಸಾರಿಕ ಜೀವನದಲ್ಲಿ ಸಂಬಂಧಗಳನ್ನು ಬೆಸೆದುಕೊಂಡು ಮಾಯದ ಬಲೆಗೆ ಸಿಲುಕುತ್ತಾನೆ. ಈ

ಮೂರೊತ್ತಿನ ಸಾಂಸಾರಿಕ ಸುಖದಲ್ಲಿ ಸಡಗರಗೊಂಡು ಭ್ರಮಿಸಬೇಡ ಸಾವು ಬಂದು ಕರೆಯುವಾಗ ನಿನ್ನ ಸಂಭ್ರಮದಲ್ಲಿ ಪಾಲ್ಗೊಳ್ಳುವ ಕುಟುಂಬದ ಸದಸ್ಯರು ಯಾರು ಬರುವುದಿಲ್ಲ. ಆದ್ದರಿಂದ ಈ "ಸಿರಿಯ ನಂಬಿ ಹಿಗ್ಗಲು ಬೇಡ ಮನವೇ ಭಗವಂತನಲ್ಲಿ ಭಕ್ತಿಯನ್ನು ರೂಢಿಸುಕೋ ಒರಟು ಮನವೇ"[೫] ಎಂದಿದ್ದಾರೆ.

ಡಿಂಬರಲದಲಿರುವ ಜೀವ ಕಂಭ ಸೂತ್ರ ಗೊಂಬೆಯಂತೆ
ಎಂದಿಗಿದುಕೊಂದು ದಿನ ಸಾವು ತಪ್ಪದು,
ಎಂದು ಹೇಳಿ

ಹತ್ತು ಎಂಟು ಲಕ್ಷಗಳಿಸಿ ಮತ್ತೆ ಮತ್ತೆ ಸಾಲದೆಂದು ಪರ
ರರ್ಥಕವಾಗಿ ಆಸೆಪಟ್ಟು ನ್ಯಾಯ ಮಾಡ್ವರು
ಬಿತ್ತಿ ಬೆಳೆಸೊ ತನ್ನದೆಂಬೊ ವ್ಯರ್ಥ ಚಿಂತನೆಯನ್ನು ಮಾಡೆ
ಸತ್ತು ಹೋದ ಮೇಲೆ ಅರ್ಥ ಯಾರಿಗಾಹುದೋ

ಮಾನವನಿಗೆ ಸಾವು ಎಂಬುದು ಯಾವಾಗ ಬಂದೆರಗುತ್ತದೋ ಹೇಳಲಾಗದು. ಆದರೆ ಈ ನಡುವೆ ಮನುಷ್ಯ ತಾನು ಸಂಪಾದಿಸುವುದರ ಜೊತೆಗೆ ಮತ್ತು ಸಾಲದೆಂಬಂತೆ ಪರರ ಧನ, ಆಸ್ತಿಗಾಗಿ ಆಸೆ ಪಟ್ಟು ನ್ಯಾಯ ಅನ್ಯಾಯದ ವ್ಯರ್ಥ ಚರ್ಚೆ ಮಾಡಿ ಆಸ್ತಿ, ಅಂತಸ್ತು, ಭಂಗಲೆ ಎಲ್ಲವನ್ನು ನಿರ್ಮಿಸುತ್ತಾರೆ. ಆದರೆ ಸಾವು ಬಂದೆರಗಿದಾಗ ಎಲ್ಲವನ್ನು ತೊರೆದು ಹೋಗಬೇಕಾಗುತ್ತದೆ. ತಾನು ಅನುಭವಿಸದೆ ಪರರಿಗೆ ಬಿಟ್ಟು ಹೋಗಬೇಕಾಗುತ್ತದೆ. ಹೀಗಿದ್ದರೂ ಸಹ ಹೀನ ಮಾನವನ ದುರಾಸೆಗೆ ಮಿತಿಯೆಂಬುದೆ ಇಲ್ಲವಾಗಿದೆ.

ಧನ, ಜ್ಞಾನ, ಮಾನ, ಮಾನಿನಿ ಇವು ಬದುಕಿಗೆ ಅಗತ್ಯ. ಆದರೆ ಅವುಗಳನ್ನು ಸದುಪಯೋಗ ಮಾಡಿಕೊಳ್ಳದ ಜೀವನ ವ್ಯರ್ಥ ಎಂಬ ತತ್ವವನ್ನು ಸಾರುವ ಈ ಕೀರ್ತನೆಯಲ್ಲಿ

ತಾನು ಉಣ್ಣದೆ ಪರರಿಗಿಕ್ಕದ ಧನವಿದೇತಕೆ
ಮಾನಹೀನವಾಗಿ ಬಾಳ್ವೆ ಮನುಜಗೇತಕೆ
ಜ್ಞಾನವಿಲ್ಲದೆ ನೂರುಕಾಲ ಬದುಕಲೇತಕೆ
ಮಾನಿನಿಯ ತೊರೆದ ಮೇಲೆ ಭೂಗತವೇತಕೆ

ಸಾಮಾಜಿಕ ಜೀವನದಲ್ಲಿ ಸಾಂಘಿಕ ಜೀವನ ನಡೆಸುವ ಮನುಷ್ಯ ಲೋಭಿಯಾಗಿರದೆ ಉದಾರತ್ವವನ್ನು ರೂಢಿಸಿಕೊಳ್ಳಬೇಕು. ತಾನು ಗಳಿಸಿದ್ದನ್ನು ಸ್ವಂತಕ್ಕೂ ಬಳಸದೆ ಪರರಿಗೂ ನೀಡದೆ ಇದ್ದರೆ ಅದರಿಂದ ಏನೂ ಪ್ರಯೋಜನಕ್ಕೆ ಬರದು. ವಚನಕಾರರು ಹೇಳುವಂತೆ 'ನಿಧಾನವ ಕಾಯ್ದ ಬೆಂತರನಂತೆ' ಎಂಬ ಉಕ್ತಿಯಂತೆ ನಿಷ್ಪಲವಾಗುತ್ತದೆ. ಆದ್ದರಿಂದ ಮಾನವ ದಾನಗುಣ ಬೆಳೆಸಿಕೊಳ್ಳಬೇಕೆಂಬ ನಿಲುವಿದೆ. ಮನುಷ್ಯ ಹುಟ್ಟಿದ ದಿನದಿಂದ

ಸಾಯುವ ತನಕ ಮಾನವಂತನಾಗಿರಬೇಕು. ಒಮ್ಮೆ ಮಾನ ಹೋದರೆ 'ಅಡಕೆಗೆ ಹೋದ ಮಾನ ಆನೆ ಕೊಟ್ಟರು ಬರದು' ಎಂಬ ಗಾದೆಯಂತೆ ಮರಳಿ ಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಮಾನವಂತನಾಗಿದ್ದರೆ ಸಮಾಜದಲ್ಲಿ ಗೌರವ ಪ್ರತಿಷ್ಠೆ ಸಿಗುತ್ತದೆ. ಹಾಗೆಯೇ ಜ್ಞಾನ ಎಂಬುದು ಬೌದ್ಧಿಕ ಕ್ರಿಯೆ. ಆ ಬೌದ್ಧಿಕ ಕ್ರಿಯೆಯ ನೆರಳಲ್ಲಿ ಮಾನವನ ಬದುಕು ಸಾಗುತ್ತದೆ. ಆ ಜ್ಞಾನವೇ ಇಲ್ಲದ ಮೇಲೆ ಬದುಕಿನ ಚುಕ್ಕಾಣಿ ನಡೆಸುವುದು ಕಷ್ಟ. ಹಾಗಾಗಿ ನೂರ್ಕಾಲ ಜ್ಞಾನವಿಲ್ಲದೆ ಬದುಕು ಸಾಗಿಸುವುದಕ್ಕಿಂತ ಬದುಕಿನಿಂದ ವಿಮುಕ್ತಿ ಹೊಂದುವುದೇ ಲೇಸು ಎಂಬುದು ತಾತ್ವಿಕತೆ.

ಸಮಾಜದ ಸ್ವಾಸ್ಥ್ಯಕ್ಕೆ, ಜೀವನದ ನಲಿವು ನೆಮ್ಮದಿಗಳಿಗೆ ದೈವಭಕ್ತಿ ಅತ್ಯಂತ ಅಗತ್ಯ ಎಂಬುದು ಕನಕದಾಸರ ಅಚಲ ನಿಲುವು. ಆದ್ದರಿಂದ ಎಂಥ ಸಂದಿಗ್ಧ ಕಾಲದಲ್ಲೂ ಭಗವಂತನ ಮೇಲಿನ ನಂಬಿಕೆಯನ್ನು ಬಿಡದೆ ಅವರ ಪಾದಮೂಲದಲ್ಲಿ ಅನನ್ಯ ಶರಣಾಗಬೇಕು ಎಂಬುದು ಅವರ ಕೀರ್ತನೆಗಳ ಅನುರಣಿತ.

ಹಸಿದು ಬಳಲಿದಾಗ ಹಗೆಯ ಕೈಗೆ ಸಿಕ್ಕಿದಾಗ
ದೆಸೆಗೆಟ್ಟು ಓಡುವಾಗ ವ್ಯಾಧಿಯೊಳಗಿದ್ದಾಗ
ಅಸಮಾನ ಬಂದಾಗ ಅತಿಭೀತಿಗೊಂಡಾಗ
ಬಿಸಜಾಕ್ಷನ ನಾಮವ ನೆನೆ ಮನವೆ

ಕೋಟ್ಯಾಂತರ ಜೀವನ ಸಂಕುಲವನ್ನು ರಕ್ಷಿಸಿ ಸಲಹುವವನು ಆ ಪರಮಾತ್ಮ ಎಂಬುದು ಆಧ್ಯಾತ್ಮಿಕ ತತ್ವ, ಇದರಡಿಯಲ್ಲಿ 'ಮನುಷ್ಯ ಸಂಕಟ ಬಂದಾಗ ವೆಂಕಟರಮಣ' ಎಂಬ ನುಡಿಯಂತೆ ಅಸಹಾಯಕನಾದಾಗ, ಹಸಿದು ಬಳಲಿದಾಗ, ಹಗೆಯ ಕೈಗೆ ಸಿಕ್ಕಿ ಪ್ರಾಣ ಹರಣವಾಗುತ್ತದೆ ಎನ್ನುವಾಗ, ರೋಗ-ರುಜಿನ ಬಂದು ವೈದ್ಯರು ಕೈ ಚೆಲ್ಲಿದ್ದಾಗ ಅತಿಭೀತಿಯಿಂದ ಪ್ರಾಣಕ್ಕೆ ಸಂಚಕಾರ ಬಂದಾಗ, ದೇವರನ್ನು ನೆನೆಯುತ್ತಾನೆ. ಅಂತಹ ಸಂದರ್ಭದಲ್ಲಿ ದೇವರನ್ನು ನೆನೆದರೆ ಮನೋಸ್ಥೈರ್ಯ ಬರುತ್ತದೆ ಹಾಗೂ ಕಷ್ಟ ಕಾರ್ಪಣ್ಯಗಳು ದೂರಾಗುತ್ತದೆ ಎಂಬುದು ಕೀರ್ತನೆಗಳ ಆಶಯವಾಗಿದೆ ಇದಕ್ಕೆ ಪೂರಕವೆಂಬಂತೆ.

ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವವನು ಇದಕೆ ಸಂಶಯವಿಲ್ಲ
ಹುಟ್ಟಿಸಿದ ದೇವ ತಾ ಹೊಣೆಗಾರನಾಗಿರಲು
ಗುಟ್ಟಾಗಿ ರಕ್ಷಿಪನು ಇದಕ್ಕೆ ಸಂಶಯವಿಲ್ಲ

ಎಂಬುದರಲ್ಲಿ ಜಗತ್ತು ದಿನನಿತ್ಯ ಪರಿವರ್ತನೆಯಾಗುತ್ತಿದೆ. ಬದಲಾದ ಕಾಲಘಟ್ಟದಲ್ಲಿ ಮನುಷ್ಯತನದ ಮಾನವೀಯ ಮೌಲ್ಯಗಳು ಸಡಿಲಗೊಳ್ಳುತ್ತಿವೆ. ಭ್ರಷ್ಟಾಚಾರ, ಡಂಬಾಚಾರ ಮೌಢ್ಯ, ಕೊಲೆ ಸುಲಿಗೆ, ದರೋಡೆ, ಮಾನಹರಣ, ಪ್ರಾಣಹರಣ, ಶೋಷಣೆಯ ವ್ಯಾಪ್ತ

ಮುಖ, ಇತ್ಯಾದಿ ದುಷ್ಕಾಂತ್ಯಗಳಿಗೆ ಬಲಿಯಾಗಿ ಅಸಯಾಕನಾದ ಮಾನವನಿಗೆ ಕನಕರವಾಗಿ ಈ ಕೀರ್ತನೆ ತಂಪೆನೆರೆಯುವ ಮಳೆಯಂತೆ ಸಾಂತ್ವಾನದ ನುಡಿಗಳಾಗಿವೆ. ಬೆಟ್ಟದ ಮೇಲಿನ ವೃಕ್ಷಕ್ಕೆ, ಕಲ್ಲಿನ ಕಪ್ಪೆಗೆ, ಕಾಡಿನ ಮೃಗ ಜಂತುಗಳಿಗೆ ಹೇಗೆ ಆಹಾರ ನೀಡುವನೋ ಹಾಗೆಯೇ ಭಗವಂತನು ಅಸಹಾಯಕನಾಗಿರುವ ಮಾನವನ ಮೇಲೂ ಕಾರುಣ್ಯ ನೋಟವನ್ನು ಬೀರುತ್ತಾನೆ ಎನ್ನುವ ಮೂಲಕ ನೆಮ್ಮದಿ ಒದಗಿಸಿದ್ದಾನೆ.

ಸ್ನಾನ ಮಾಡಿರೋ ಜ್ಞಾನ ತೀರ್ಥದಲ್ಲಿ
ಮಾನವರೆಲ್ಲ ಮೌನದೊಳಗೆ ನಿಂದು
ತನ್ನ ತಾನರಿತುಕೊಂಬುದೆ ಒಂದು ಸ್ನಾನ
ಅನ್ಯಾಯ ಮಾಡದಿರುವುದೊಂದು ಸ್ನಾನ
ಅನ್ನದಾನವ ಮಾಡುವುದೊಂದು ಸ್ನಾನ.
ಪರಸತಿಯ ಭ್ರಮಿಸದಿದ್ದರೆ ಒಂದು ಸ್ನಾನ
ಪರನಿಂದೆಯ ಮಾಡದಿದ್ದರೊಂದು ಸ್ನಾನ
ಪರೋಪಕಾರ ಮಾಡುವುದೊಂದು ಸ್ನಾನ
ಪರತತ್ವ ಅರಿತುಕೊಂಬುದೆ ಒಂದು ಸ್ನಾನ
ಸಾದು ಸಜ್ಜನರ ಸಂಗವೆ ಒಂದು ಸ್ನಾನ
ಬೇದಾಭೇದವಳಿದೊಡೆ ಒಂದು ಸ್ನಾನ
ಆದಿಕೇಶವನ ಪಾದ ಧ್ಯಾನವೆ ನಿತ್ಯಾ ಗಂಗಾ ಸ್ನಾನ.

ಕನಕದಾಸರು ಈ ಕೀರ್ತನೆಯಲ್ಲಿ ಮನುಷ್ಯ ಜ್ಞಾನಿಯಾಗಿರಬೇಕು. ಬದುಕಿನಲ್ಲಿ ಯಾವುದು ಸರಿ ಯಾವುದು ತಪ್ಪು ಎಂದು ವಿಮರ್ಶಿಸುವ ಜಾಣ್ಮೆ ಬರುತ್ತದೆ. ಈ ವಿಮರ್ಶಿತ ಬುದ್ಧಿ ಬಲದಿಂದ ಸಮಾಜದಲ್ಲಿ ಯಾವ ರೀತಿ ಬದುಕು ಸಾಗಿಸಬೇಕು ಯಾವ ರೀತಿಯಲ್ಲಿ ಸಮಾಜಕ್ಕೆ ಸತ್ಪ್ರಜೆಯಾಗಬೇಕು ಎಂಬ ತಾತ್ವಿಕ ನಿಲುವು ಬರುತ್ತದೆ. ಹಾಗಾಗಿ ದೇಹಶುದ್ಧಿಗಾಗಿ ಮಾಡುವ ಸ್ನಾನಕ್ಕಿಂತ ಜ್ಞಾನ ತೀರ್ಥದಲ್ಲಿ ಮಾಡಿದ ಸ್ನಾನ ವಿಚಾರವಂತಿಕೆ, ವಿನಯವಂತಿಕೆಯನ್ನು ಲಭಿಸಿಕೊಡುತ್ತದೆ. ಆದ್ದರಿಂದ ತನ್ನನ್ನು ತಾನು ಅರಿಯಲು, ಇತರರಿಗೆ ಅನ್ಯಾಯವಾಗದಿರುವಂತೆ ನಡೆಯಲು ದಾನಧರ್ಮಗಳನ್ನು ರೂಢಿಸಿಕೊಳ್ಳಲು ಪರಸತಿಯ ಬಗ್ಗೆ ಮೋಹ ಭಾವನೆ ಹೊಂದದೆ ಇರಲು, ಪರನಿಂದೆ ಮಾಡದಿರಲು ಪರೋಪಕಾರ ಗುಣ ರೂಢಿಸಿಕೊಳ್ಳಲು ಇತರರೆಡೆಯಲ್ಲಿ ಬೇದ ಭಾವ ಮಾಡದಿರಲು, ಜ್ಞಾನವೆಂಬ ಸ್ನಾನ ಮಾಡಬೇಕು ಎಂದು ವಿಚಾರಪೂರ್ಣವಾಗಿ ತಿಳಿಸಿದ್ದಾರೆ.

ಕಷ್ಟಪಟ್ಟರು ಇಲ್ಲ, ಕಳವಳೀಸಿದರಿಲ್ಲ
ಭ್ರಷ್ಟ ಮಾನವನಾ ಹಣೆಬರಹವಿದೆಲ್ಲಾ

ಸಿರಿವಂತನ ಸ್ನೇಹ ಮಾಡಿ ನಡೆದರಿಲ್ಲ
ಪರಿಪರಿಯಲಿ ವಿದ್ಯೆ ಕಲಿತರಿಲ್ಲ
ನರಿಯ ಬುದ್ಧಿಯಲಿ ನಡೆದುಕೊಂಡರಿಲ್ಲ
ಅರಿಯದೆ ಹಲವ ಹಂಬಲಿಸಿದರಿಲ್ಲ

ಮಾನವರ ಗುಣ ಸ್ವಭಾವ ಕುರಿತಂತೆ ಕನಕದಾಸರು ಈ ಕೀರ್ತನೆಯಲ್ಲಿ ತಾತ್ವಿಕವಾದ ವಿಚಾರಧಾರೆಯನ್ನು ತಿಳಿಸಿದ್ದಾರೆ. ಇಂದು ಮಾನವ ಸೋಮಾರಿತನ ರೂಢಿಸಿಕೊಂಡು ಮೈಗಳ್ಳನಾಗಿ ಆಲಸಿಯಾಗಿದ್ದಾನೆ. ಕಷ್ಟಪಟ್ಟು ದುಡಿಯಬೇಕೆನ್ನುವ ಮನೋಧೋರಣೆ ಇಂದು ಇಲ್ಲವಾಗಿದೆ. ಹಣ ದಾಸೆಗಾಗಿ ಸಿರಿವಂತರ ಬಳಿ ಕೈಚಾಚುವ ಗುಣ ರೂಢಿಸಿಕೊಂಡಿದ್ದಾನೆ. ಬದಲಾಗಿ ವಿದ್ಯೆಯ ಬಲದಿಂದ ಜ್ಞಾನ, ಜ್ಞಾನಬಲದಿಂದ ಸನ್ಮಾರ್ಗ ಲಭಿಸುತ್ತದೆ. ಆದರೆ ಇಂದು ಯಾರು ಸಹ ಜ್ಞಾನಕ್ಕೋಸ್ಕರ ವಿದ್ಯೆ ಕಲಿತವರಲ್ಲ. ಸಮಾಜಕ್ಕೆ ಕೇಡನ್ನು ಬಗೆಯುವ ನರಿಬುದ್ಧಿಯ ಜನರೆ ಹೆಚ್ಚಾಗಿದ್ದಾರೆ ಎಂದು ಮಾನವ ಗುಣ ಸ್ವಭಾವವನ್ನು ಚಿತ್ರಿಸಿದ್ದಾರೆ.

ದಾಸರು ಸಮಾಜದಲ್ಲಿರುವ ಜನರ ದುರ್ಗುಣಗಳನ್ನು ಕಂಡವರು. ಅವರ ನಡವಳಿಕೆ ಅನೀತಿಯ ಮೌಲ್ಯಗಳ ಕುರಿತು ....

ದ್ರೋಹಿಗಳ ವಿವರವನು ನಾ ಪೇಳ್ವನಯ್ಯ
ಕೂಡಿದೆಡೆಯಲ್ಲಿ ಕಪಟವೆನಿಸುವನ ದ್ರೋಹಿ
ಮಾಡಿದುಪಕಾರವನು ಮರೆವ ದ್ರೋಹಿ
ಚಾಡಿ ಕೊಂಡೆಗಳಾಗಿ ತಿರುಗುವನೆ ದ್ರೋಹಿ
....
....
ತನ್ನೊಳಗೆ ತಾ ತಿಳಿದು ಸುಖಿಸದವ ದ್ರೋಹಿ

ಈ ಕೀರ್ತನೆಯಲ್ಲಿ ಮಾನವ ಹೀನ ಗುಣಗಳನ್ನು ಎತ್ತಿ ತೋರಿಸಿದ್ದಾರೆ. ಸಮಾಜದಲ್ಲಿನ ಮನುಷ್ಯ ಕೆಟ್ಟಗುಣಗಳ ಆಗರ. ಅವನ ಗುಣ ಸ್ವಭಾವಗಳು ಸಮಾಜಕ್ಕೆ ಮಾರಕವೆನಿಸುವಂತಹವುಗಳು. ಹಾಗಾಗಿ ಎಲ್ಲರೂ ಒಟ್ಟಾಗಿ ಸೇರಿರುವ ಸಂದರ್ಭದಲ್ಲಿ ಹಣವನ್ನೋ, ಒಡವೆಯನ್ನೋ ಕಳ್ಳತನಮಾಡುವ ಮೋಸಮಾಡುವ ಪ್ರವೃತ್ತಿ ಹೊಂದಿರುವ ಮಾನವ ಹೀನಸ್ವಭಾವವನ್ನು ತಿಳಿಸಿದ್ದಾರೆ. ಮನುಷ್ಯನಿಗೆ ಉಪಕಾರ ಮನೋಭಾವವಿರಬೇಕು. ಆ ಉಪಕಾರ ಮನೋಭಾವನೆಯನ್ನು ನೆನೆಯುವ ಕೃತಜ್ಞತಾ ಮನೋಭಾವವಿರಬೇಕು. ಚಾಡಿ ಮಾತುಗಳನ್ನು ಹೇಳುತ್ತಾ, ಉತ್ತಮವಾಗಿ ಸಮಾಜದಲ್ಲಿ ಬಾಳುವವರ ಏಳ್ಗೆಯನ್ನು ಕಂಡು ಸಹಿಸಲಾಗದೆ ಅವರನ್ನು ಹೇಗಾದರೂ ಸರಿ ತೊಂದರೆಕೊಟ್ಟು ಹಾಳು ಮಾಡುವ ಸ್ವಭಾವ ಬಿಡಬೇಕು ಎಂದು ನೈತಿಕ ಮೌಲ್ಯವನ್ನು ತಿಳಿಸಿದ್ದಾರೆ.

ಇಂದ್ರಿಯಗಳ ಅತಿಯಾದ ವ್ಯಾಮೋಹದಿಂದ ಕಾಮತೃಷೆಗಾಗಿ ಕೈಹಿಡಿದ ಹೆಂಡತಿಯಿದ್ದರೂ, ಲಂಪಟತನದಿಂದ ಬೇರೊಬ್ಬ ಸ್ತ್ರೀಯನ್ನು ಬಯಸಬಾರದು. ತಂದೆ ತಾಯಿಯರೇ ನಿಜ ದೈವರು. ಹುಟ್ಟಿನಿಂದ ಬೆಳೆದು ದೊಡ್ಡವನಾಗುವ ತನಕ ಸಾಕಿ ಸಲಹಿದವರು. ಅವರಿಗೆ ದ್ರೋಹ ಮಾಡುವವನು ಸಮಾಜಕ್ಕೆ ಕಂಟಕನಾಗುತ್ತಾನೆ. ಮತ್ತು ಸ್ವಾರ್ಥ ಪರವಾದ ಮನುಷ್ಯ ಇಂದು ಅತಿಯಾದ ಲೋಭಿತನದಿಂದ ಅದೋಗತಿಗೆ ಇಳಿದಿದ್ದಾನೆ. ಕೈ ಹಿಡಿದ ಹೆಂಡತಿಯನ್ನು ತಲೆಯಿಡಿಯುವ ಮೂಲಕ ತನ್ನ ಕಾರ್ಯಸಾಧನೆ ಈಡೇರಿಸಿಕೊಳ್ಳುವ ಹೀನ ಪ್ರವೃತ್ತಿ ಇವನಲ್ಲಿದೆ ಹಾಗೂ ವಿದ್ಯೆ ಕಲಿಸಿದ ಗುರು, ದೇವರಿಗೆ ಸಮ. ಆ ಗುರುವಿನ ಹೆಂಡತಿಯನ್ನು ಬಯಸುವವನು ಪರಮ ದ್ರೋಹಿ. ಹಾಗಾಗಿ ಸಮಾಜದಲ್ಲಿ ಇಂತಹ ಕೆಟ್ಟ ಜನರು ಇರುವುದರಿಂದ ಇಂತಹವರ ಸಹವಾಸದಿಂದ ದೂರವಿರಬೇಕೆಂಬ ನೀತಿಯನ್ನು ತಿಳಿಸಿದ್ದಾರೆ.

ಮನುಷ್ಯ ಹುಟ್ಟುವಾಗ ಏಕಾಂಗಿ, ಸಾಯುವಾಗ ಏಕಾಂಗಿ, ಈ ಹುಟ್ಟು ಸಾವಿನ ನಡುವೆ ನಡೆಯುವ ಮೂರು ದಿನದ ವ್ಯಾಪಾರದಲ್ಲಿ ಹಲವಾರು ಬಾಂಧವ್ಯದ ಬಂಧನಗಳು ಬೆಸೆಯುತ್ತವೆ. ಈ ಬಾಂಧವ್ಯಗಳು ನಂಬಿಕೆಯ ಮೇಲೆ ವಿಶ್ವಾಸವನ್ನಿಟ್ಟುಕೊಂಡತಹವು ಆ ವಿಶ್ವಾಸಕ್ಕೆ ಘಾಸಿಯಾದಾಗ ಬಂಧನ ಕಳಚಿ ಶತೃತ್ವ ಬೆಳೆಯುವ ಪರಿಯನ್ನು ಈ ಕೀರ್ತನೆಯು ಬಿಂಬಿಸುತ್ತವೆ.

ಆರು ಹಿತವರು ಎಂದು ನಂಬಬೇಡ
ಯಾರಿಗ್ಯಾರಿಲ್ಲ ಆಪತ್ತು ಬಂದೊದಗಿದೊಡೆ
ಜನಕ ಹಿತವನು ಎಂದು ನಂಬಬಹುದೆ ಹಿಂದೆ
ತನಯ ಪ್ರಹ್ಲಾದನಿಗೆ ಪಿತ ಮುನಿದನು
ಜನನಿಯೇ ರಕ್ಷಿತಂಬೆನೆ ಆ ಕುಂತಿ
ತನಯ ರಾಧೇಯನಿಗೆ ಎರೆಡೆನಿಣಿಸಿದಾ ಮೇಲೆ
ಮಗನು ತೆತ್ತಿಗನೆನಲು ಕಂಸ ತನ್ನಯ ಪಿತನ
ವಿಗಡ ಬಂಧನದಿಂದ ಬಂಧಿಸಿದನು
ಜಗವರಿಯೆ ಸೊದರನು ಮಮತೆ ಉಳ್ಳವನೆನಲು
ಹಗೆವೆರಿಸಿ ವಾಲಿಯನು ಅನುಜ ಕೊಲಿಸಿದನೈ
ತನಗೆ ದೇಹಾನು ಬಂಧನಗಳೆ ಬಂಧುಗಳೆಂದು
ಮನದಿ ನಿಶ್ಚಯವಾಗಿ ನಂಬಬೇಡ
ಘನ ಕೃಪಾನಿಧಿ ಕಾಗಿನೆಲೆ ಆದಿಕೇಶವನ
ಅನುದಿನವು ನಂಬಿದವಗಿಹಪರದಿ ಸುಖವು.

ಇಲ್ಲಿ ಬಾಂಧವ್ಯಗಳ ಬಂಧನವನ್ನು ಪ್ರಶ್ನೆಮಾಡುವ ದಿಸೆಯಲ್ಲಿ ರಚಿತವಾದ ಕೀರ್ತನೆ. ಸಾಂಸಾರಿಕ ಕುಟುಂಬದಲ್ಲಿ ತಂದೆ ತಾಯಿ ಅಣ್ಣ ತಮ್ಮ ಇತ್ಯಾದಿ ಸದಸ್ಯರ ನಡುವೆ ಒಂದು ಬಾಂಧವ್ಯ ಏರ್ಪಟ್ಟಿರುತ್ತದೆ. ಈ ಬೆಸುಗೆಗೆ ಪೆಟ್ಟು ಬಿದ್ದಾಗ ರಕ್ತ ಸಂಬಂಧ ಬೇರ್ಪಡುವುದನ್ನು ಹಿರಣ್ಯಕಶಿಪು, ಕುಂತಿ, ಕಂಸ, ವಾಲಿ, ಇತ್ಯಾದಿ ಪೌರಾಣಿಕ ಪಾತ್ರಗಳಡಿಯಲ್ಲಿ ಉದಾಹರಿಸಿ ಯಾರನ್ನು ನಂಬುವುದು ಎಂಬ ಗೊಂದಲ ಉಂಟು ಮಾಡಿದ್ದರೂ, ಇದರ ನಿವಾರಣೆಗೆ ದಾಸರು ಬಾಂಧವ್ಯಗಳನ್ನು ನಂಬದೆ ದೇವರಲ್ಲಿ ನಂಬಿಕೆಯಿಡಿ. ಆ ದೇವರನ್ನು ನಂಬಿದರೆ ಬಾಂಧವ್ಯದಲ್ಲಿ ಸಿಗುವ ಸುಖಕ್ಕಿಂತ ಅನುದಿನವು ಇಹದಲ್ಲಿ ಮತ್ತು ಪರದಲ್ಲಿ ಸುಖವು ಲಭಿಸುತ್ತದೆ ಎಂದಿದ್ದಾರೆ.

ಇಲ್ಲಿ ದಾಸರು ಪುರಾಣ ಪಾತ್ರಗಳ ನಿದರ್ಶನ ನೀಡಿದರೂ, ಇದು ವಾಸ್ತವ ಸಂಗತಿಯಾಗಿದೆ. ನಮ್ಮ ಸುತ್ತಲ ಮುತ್ತಲ ಸಮಾಜದಲ್ಲಿ ನಡೆಯುವ ತಾಯಿ ಮಕ್ಕಳ ದೂರಾದ ಸಂಬಂಧ, ಮಗನು ತಾಯಿಯನ್ನು ವೃದ್ಧಾಶ್ರಮಕ್ಕೆ ಕಳುಹಿಸುವುದು, ಮದುವೆಗೆ ಮುನ್ನ ಆಗ ತಾನೆ ಜನಿಸಿದ ಕೂಸನ್ನು ಲೋಕದ ಅಪವಾದಕ್ಕೆ ಹೆದರಿ ಬೀದಿಗೆ ಬಿಸುಡುವ ತಾಯಂದಿರು, ಆಸ್ತಿಗಾಗಿ ಅಣ್ಣ ತಮ್ಮಂದಿರ ಹತ್ಯೆಗಳು, ಅಪ್ಪ ಮಗನೊಡನೆ ವಿರಸ ಏರ್ಪಟ್ಟು ಬೇರೆ ವಾಸಿಸುವ ಸಾಮಾಜಿಕ ಕೌಟುಂಬದ ಚಿತ್ರಣಗಳ ವಿವರ ಈ ಕೀರ್ತನೆಗಳಲ್ಲಿ ಪ್ರತಿಪಾದಿಸಿವೆ.

ಸಮಾಜದ ಒಪ್ಪಿತ ಮೌಲ್ಯಗಳಲ್ಲಿ ಭಕ್ತಿಯು ಒಂದು. ಈ ಪರಿಕಲ್ಪನೆ ಆಧ್ಯಾತ್ಮಿಕ ನೆಲೆಯಲ್ಲಿ ವಿಹರಿಸಿದರೂ, ಅದು ತನ್ನ ಅಸ್ತಿತ್ವ ಮತ್ತು ನೆಲೆಯನ್ನು ಪಡೆದುಕೊಳ್ಳುವುದು ಸಾಮಾಜಿಕ ನೆಲೆಯಲ್ಲಿಯೇ ಆಗಿದೆ. ಹಾಗಾಗಿ ಕನಕದಾಸರು ಸದಾ ಬದುಕಿನ ಜಂಜಾಟದಲ್ಲಿ ಸಿಲುಕಿರುವ ಮನುಷ್ಯನಿಗೆ ಮಾನಸಿಕ ನೆಮ್ಮದಿಯನ್ನು ತಂದು ಕೊಡುವ ಮೌಲ್ಯವಾದ ಭಕ್ತಿಯನ್ನು ಸಾಮಾಜಿಕ ಚಿಂತನೆಯಡಿಯಲ್ಲಿ ವಿವರಿಸಿದ್ದಾರೆ.

ಪ್ರಾಚೀನ ಕಾಲದಿಂದಲೂ ಎಲ್ಲಾ ಜನಾಂಗಗಳನ್ನು ಸಮಾನವಾಗಿ ಆಳಿರುವ ಒಂದು ಚಿರಂತನ ನಿತ್ಯನೂತನ ಸಾರ್ವತ್ರಿಕ ಮೌಲ್ಯ ಭಕ್ತಿ. ಅಂತೆಯೇ ಎಲ್ಲಾ ಲಿಖಿತ ಮತ್ತು ಮೌಖಿಕ ಸಾಹಿತ್ಯದಲ್ಲೂ ಇದು ಮತ್ತೆ ಮತ್ತೆ ಪ್ರತಿನಿಧಿಸುವ ಶಕ್ತಿಯಾಗಿದೆ. ಮಾನವನ ಬದುಕಿನ ಯಾತನೆಯ ಕ್ಷಣಗಳಲ್ಲಿ ಅವನಿಗೆ ಸಾಂತ್ವಾನ ನೀಡುವ, ಸುಖ ಸಂತೋಷದ ಸಂದರ್ಭಗಳಲ್ಲಿ ಭಯದಲ್ಲಿ, ವಿನಯದಲ್ಲಿ, ಅಹಂಕಾರದಲ್ಲಿ, ಅತಿರೇಕದಲ್ಲಿ ಎಚ್ಚರಿಕೆಯ ಗಂಟೆಯಾಗಿ ಅವನ ಪರಿಮಿತಿಗಳಿಗೆ ಕನ್ನಡಿ ಹಿಡಿದು ಅದರಾಚೆಗೆ ತುಡಿಯುವ ಬಯಕೆಯನ್ನು ಬದಲಿಸುವ ಚೈತನ್ಯವಾಗಿದೆ. ಇದು ಸಾಮಾನ್ಯನನ್ನು ಅಸಮಾನ್ಯತೆಗೆ ಸಾಗಿಸಿದೆ. ಸಮಾಜದ ಕೆಳಸ್ತರದಲ್ಲಿ ಜನ್ಮವೆತ್ತ ಕನಕದಾಸರು ತಮ್ಮ ಇಂಥ ಅಖಂಡ ಮತ್ತು ಪ್ರಾಮಾಣಿಕ ಭಕ್ತಿಯಿಂದಲೇ ಸಂತರಾದವರು. ತಮಗೆ ಸಾಮಾಜಿಕ ಮನ್ನಣೆಯನ್ನು ದೊರಕಿಸಿಕೊಡುವಲ್ಲಿ ಕಾರಣವಾದ ಭಕ್ತಿಯನ್ನು ತಮ್ಮ ಎಲ್ಲಾ ಕೀರ್ತನೆಗಳ ಬುನಾದಿಯನ್ನಾಗಿ ಮಾಡಿಕೊಂಡಿದ್ದಾರೆ.

'ಭಜಿಸಿ ಬದುಕಲೊ ಮನುಜ ಮನಮುಟ್ಟಿ ಹರಿಯ' ಇಂಥ ಕೀರ್ತನೆಯಲ್ಲಿ ಇಹದ ಬದುಕಿನಾಚೆ ನಿಂತು, ಇಹದ ಬದುಕನ್ನು ನಿಯಂತ್ರಿಸುವ ಭಗವಂತನನ್ನು ನೆನೆದಲ್ಲದೆ ಮನುಜನಿಗೆ ಅನ್ಯಮಾರ್ಗವಿಲ್ಲ. ಹಾಗೆ ನೆನೆದಾಗ ಅವನು ತನ್ನನ್ನು ಸುತ್ತಿರುವ ಕಷ್ಟಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಬಲ್ಲ ಎಂದಿದ್ದಾರೆ. ದೇಹದಂಡನೆಯಿಂದ, ಸಂಸಾರ ಸುಖ ತ್ಯಾಗದಿಂದ ಹಲವು ಬಗೆಯ ಕ್ಲೇಶಗಳಿಗೆ ತನ್ನನ್ನು ಒಡ್ಡಿಕೊಳ್ಳುವುದರಿಂದ ಮಾತ್ರ ಸಾಧ್ಯ ಎಂದು ಭಾವಿಸಿ ಹೆದರುವ ಜನರಿಗೆ ಸರಳವೆಂದು ಮನದಟ್ಟು ಮಾಡಿದ್ದಾರೆ.

ಯತಿಯಾಗಬೇಡ ನೀಡ ವೈರಾಗ್ಯವನೆ ಪಿಡಿದು.

ಈ ಕೀರ್ತನೆಯಲ್ಲಿ ನೂರಾರು ಬಗೆಯ ಬಹಿರಂಗದ ಪ್ರಯತ್ನಗಳಿಂದ ತಾವು ಕೃತಾರ್ಥರಾದವೆಂದು ಭಾವಿಸಿ ಆತ್ಮವಂಚನೆ ಮಾಡಿಕೊಳ್ಳುವ, ಅದರಿಂದ ಸಂತೃಪ್ತಿ ಸಿಕ್ಕಿತೆಂದು ಅಂದುಕೊಳ್ಳುವ ವ್ಯರ್ಥಕಾರ್ಯವನ್ನು ಕೈಬಿಟ್ಟು ಕೇವಲ ನಿರ್ಮಲ ಮನಸ್ಸಿನಿಂದ ಆದಿಕೇಶವನನ್ನು ನೆನೆಯುವುದರಿಂದ ಆತ್ಮ ಸುಖವನ್ನು ಪಡೆಯಬಹುದೆಂದು ದಾಸರು ಒತ್ತಿ ಹೇಳಿದ್ದಾರೆ. ಇದೇ ರೀತಿ 'ಶ್ರೀರಾಮ ಎನ್ನಿ ಮುಜಗದವರೆಲ್ಲ ಶ್ರೀ ರಾಮ ಎನ್ನಿರೇ ಈ ನರಿಯ ನಂಬಿ ಹಿಗ್ಗಲು ಬೇಡ ಮನವೇ ವಾಸುದೇವನ ಭಜಿಸೊ ಒರಟು ಜೀವನವೇ ಮರೆಯದಿರು ಮರೆಯದಿರು ಎಲೆ ಮಾನವಾ' ಎಂಬಂಥ ಕೀರ್ತನೆಗಳಲ್ಲಿ ಭಕ್ತರಾಗಲು ಜನಸ್ತೋಮಕ್ಕೆ ಕಳಕಳಿಯ ಕರೆ ಕೊಡುತ್ತಾರೆ. ಹೀಗೆ ಕರೆಕೊಡುವಾಗ ಭಕ್ತರ ಮೊರೆಗೆ ಸ್ಪಂದಿಸುತ್ತಾನೆ ಎಂದು "ಪ್ರಹ್ಲಾದ ಅಜಮಿಳರ ನಿದರ್ಶನವನ್ನು ಕೊಡುತ್ತಾರೆ. ಅಪನಂಬಿಕೆಯು ತಾಂಡವವಾಡುತ್ತಾ ಜನರ ಬದುಕು ಮೂರಾಬಟ್ಟೆಯಾಗುತ್ತಿರುವುದನ್ನು ಕಂಡು ಸಹಿಸದ ದಾಸರು ಜನರ ಅಂತರಂಗ ಶುದ್ದಿಯೇ ಭಕ್ತಿಗೆ ಪೂರಕ ಗತಿ ಮಿತಿ ಎಂಬುದನ್ನು"[೬] ಸರಳವಾದ ಅರ್ಥಪೂರ್ಣವಾದ ಪರಿಣಾಮಕಾರಿಯಾದ ಮಾತುಗಳಲ್ಲಿ ಸಾಮಾನ್ಯ ಜನರಿಗೂ ಮುಟ್ಟುವಂತೆ ನಿರೂಪಿಸಿದ್ದಾರೆ. ಕನಕದಾಸರ ಭಕ್ತಿಗೆ ಆ ದೇವ ಈ ದೇವ ಎಂಬ ಭೇದವಿಲ್ಲ ಅವರ ದೃಷ್ಟಿಯಲ್ಲಿ ಹರಿಹರೆಲ್ಲ ಒಂದೇ, ಎಲ್ಲಿರಿಗೂ ಭಕ್ತಿಯೇ ಮುಖ್ಯ. ಆ ಭಕ್ತಿಗೆ ಗುರಿಯಾಗುವ ದೇವ ಯಾರಾದರೂ ಸರಿ ಎಂಬುದೇ ಅವರ ನಿಲುವು. ಬಹುಪಾಲು ಕೀರ್ತನೆಗಳು ಹರಿ ಸರ್ವೋತ್ತಮನೆಂದೇ ಸಾರಿದರೂ ಅವರದು ಉದಾರವಾದ ಭಾಗವತ ಮನೋಧರ್ಮ. ಆದ್ದರಿಂದ ಅವರ ಈ ಭಕ್ತಿ ಮತಚಾರದ ಕೇವಲವೆನಿಸದೆ ಉತ್ತಮ ಸಂಸ್ಕೃತಿಯ ಅಂಗವಾಗಿದೆ.

ಭಕ್ತನಿಗೆ ಮುಖ್ಯವಾಗಿ ಇರಬೇಕಾದುದು ಆತ್ಮಶೋಧನೆ ಮತ್ತು ಆತ್ಮ ನಿವೇದನೆಗಳು. ಇವು ಮಾನವನ ಬಳಿ ಬದುಕನ್ನು ರೂಪಿಸುವ "ಸಂಸ್ಕೃತಿಯ ಪ್ರೇರಕಗಳು ಸಂಸ್ಕೃತಿ ತಮ್ಮ ಪರಂಪರಾಗತ ಸ್ವತ್ತೆಂದು ಭಾವಿಸಿ ಅದಕ್ಕಾಗಿ ಸ್ವತಃ ಪರಿಶ್ರಮ ಪಡೆದ ಕಾರಣದಿಂದ ಅದರ ತಿರುಳು ಸಾರವನ್ನೇ ಸವಿಯದೆ ಬಹಿರ್ಮುಖ ಬದುಕಿಗೆ ಹೆಚ್ಚು ವಾಲುವ ಮೇಲು ವರ್ಗದವರಿಗಿಂತ ತಾನು ಹಿಂದುಳಿದವನು ಕೀಳು ಎಂಬ ಧೈನ್ಯತೆಯನ್ನು ಹೊಂದಿದ್ದು"[೭] ದಾಸರು ತಮ್ಮನ್ನು ತಾವು ಶೋಧಿಸಿಕೊಂಡಿದ್ದಾರೆ. ಈ 'ಈರೇಳು ಜನ್ಮದಿಂ ದಾಸನಾಗಿಹೆ ನಾನು' ಎಂಬ ಕೀರ್ತನೆಗಳ ಪದಗಳಲ್ಲಿನ ದಾಸ ಹೃದಯದೊಳಗಿನ ನೋವು

ಪರಿಣಾಮಕಾರಿಯಾಗಿ ಮಿಡಿಯುವುದನ್ನು ಗಮನಿಸಬಹುದು. ಇಂಥ "ಆತ್ಮ ನಿವೇದನೆಯಿಲ್ಲದೆ ಮನಸ್ಸು ಶುದ್ಧವಾಗದು, ಮನಸ್ಸು ಶುದ್ಧವಾಗದೆ ಭಕ್ತಿ ತುಂಬದು, ಬದುಕು ಸಾರ್ಥಕವಾಗದು ಇದು ಅವರ ಅಚಲ ನಿಲುವು."[೮]

ವಿನಯ ಭಕ್ತಿ ಕಲ್ಪನೆಯ ಮತ್ತೊಂದು ಮೂಲಾಂಶ. ಇದು ಆತ್ಮ ವಿಕಾಸದ ಅಹಂಕಾರವಿಲ್ಲದ ಪ್ರೀತಿ, ಸ್ನೇಹ ಬಲಪಡಿಸುವ ಮುಖ್ಯ ಮಾಧ್ಯಮ, ಮನಸ್ಸಿನ ಕ್ರೌರ್ಯ ಒರಟು ಹೋಗಿ, ಅಹಂಕಾರ ಇದರ ಸ್ಪರ್ಶದಿಂದ ಕರಿಗಿ ಹೋಗುತ್ತದೆ. ಸರಳತೆ, ವಿಶಾಲತೆ ಪ್ರೀತಿ ಪ್ರೇಮ ಭಾವಗಳು ಮೂಡುತ್ತವೆ. ಹಾಗಾಗಿ ಭಕ್ತನಿಗೆ ಇರಬೇಕಾದ ಮೊದಲ ಗುಣ ವಿನಯ. ಬಸವಾದಿ ಶರಣರಂತೆ ದಾಸರಲ್ಲಿ ವಿನಯಶೀಲತೆ ಪ್ರತಿಪಾದನೆ ದಟ್ಟವಾಗಿ ತುಂಬಿದೆ. ಹಾಗಾಗಿ 'ದಾಸರ ದಾಸ ನಾನು ದಾಸರ ಮನೆಯ ದಾಸಿಯ ಮಗ ನಾನು' ಎಂದಿದ್ದಾರೆ.

ನಂಬಿಕೆಯಿಂದ ಬದುಕು, ನಂಬಿಕೆಯಿಂದ ಜಗತ್ತು ಈ ನಂಬಿಕೆಯಿಲ್ಲದೆ ಯಾವ ವ್ಯವಹಾರವೂ ಸುಗಮವಾಗದು. ನಮ್ಮ ಎಲ್ಲಾ ಶಾಂತಿ ಸಮಾಧಾನ ಭರವಸೆ ನಿರೀಕ್ಷೆ ಸುಖ ಸಂತೃಪ್ತಿಗಳಿಗೆ ಇದು ಬುನಾದಿ. ಉತ್ತಮ ಸಂಸ್ಕೃತಿಯ ಲಕ್ಷಣಗಳಲ್ಲಿ ಇದು ಮಹತ್ವವಾದುದು. ಆದ್ದರಿಂದ ದಾಸರು ಜನಮನದಲ್ಲಿ ಬಲವಾಗಿ ಬೇರೂರಲು ಪ್ರಯತ್ನಿಸಿದ್ದಾರೆ. ಈ ನಂಬಿಕೆಯೇ ಬಲವಾದುದು ಭಗವಂತನಲ್ಲಿ ವಿಶ್ವಾಸ ಹೊಂದಲು ಏಕೆಂದರೆ ಆತ ನಂಬಿಕೆಯ ನೆಲೆ. ಆತನನ್ನು ನಂಬಿದವರಿಗೆ ಯಾವ ಭಯವೂ ಇಲ್ಲ. 'ತಲ್ಲಣಿಸಿದರು ಕಂಡ್ಯ ತಾಳು ಮನವೆ' ಎಂಬ ಕೀರ್ತನೆಯಲ್ಲಿ ಇದನ್ನು ವಿವರವಾಗಿ ನಿರೂಪಿಸಿದ್ದಾರೆ. ಇಲ್ಲಿ ಸೃಷ್ಟಿಯ ನಿಗೂಢ ಶಕ್ತಿಯ ವಿವೇಚನೆ ವಿವರಿಸಿದ್ದಾರೆ. "ಸತ್ಯಶೋಧಕನ ತಿಳುವಳಿಕೆಗೆ ಮೂಡಿಬರುವ ಸತ್ಯದ ತಿರುಳೇ ಅದರಲ್ಲಿದ್ದು, ಸಾಧಕನ ದಾರಿಯನ್ನು ನಿಚ್ಚಳಗೊಳಿಸದೆ ಭಕ್ತಿಯ ಅಂಶದಲ್ಲಿ ಬದುಕಿನ ನೆರಳು ಬೆಳಕನ್ನು ಮೀರಿದ ಆನಂದ ತುಂಬಿದೆ. ಇಂತಹ ಜಟಿಲ ವಿಷಯಗಳನ್ನು ಸುಂದರ ದೃಷ್ಟಾಂತಗಳಿಂದ ಸ್ಪಷ್ಟಪಡಿಸುವ ಕಲೆ ದಾಸರಿಗಿದೆ."[೯] ಅಂತೆಯೇ ಭಕ್ತಿ ಮಾರ್ಗದಲ್ಲಿ ನಡೆಯಬೇಕಾದವನ ಮಾರ್ಗದ ಸ್ವರೂಪವನ್ನು ಬದುಕಿನಲ್ಲಿ ಸಾಕ್ಷಾತ್‌ಗೊಳಿಸಿದ್ದಾರೆ.

'ತಾನಾರು ದೇಹವಾರು' ಕೀರ್ತನೆಯಲ್ಲಿ ಪರಮಾತ್ಮನಲ್ಲಿ ನಂಬಿಕೆ ಮೂಡಿ ಪರಿಮಯೋಗಿಯಾಗಲು ಮುಂದಾದಾಗ ಮುಂದಿನ ನಡಿಗೆ ಸುಲಭ, ಏಕೆಂದರೆ ಎಲ್ಲ ಕಡೆಗೂ ಪರಮಾತ್ಮನ ಸೃಷ್ಟಿ ಚೈತನ್ಯ ಕಾಣುತ್ತದೆ. ಸುಖ ದುಃಖಗಳನ್ನು ಮೀರಿದ ಚೆಲವು ಒಳ ಹೊರಗೂ ಕೋರೈಸುತ್ತದೆ. ಪರಿಸರದಲ್ಲಿ ಭೋಗದಿಂದ ದೂರವಾದಾಗ ಮುಕ್ತಿಯ ದಾರಿ ಕಾಣುತ್ತದೆ. "ದೇಹದಲ್ಲಿಯೇ ವೈಕುಂಠ ನೆಲಸುತ್ತದೆ. ಭಗವಂತನ ದಿವ್ಯಜ್ಞಾನ ಸಾಕಾರವಾಗುತ್ತೆ. ಮನದ ಕತ್ತಲೆ ದೂರವಾಗುತ್ತದೆ"[೧೦] ಈ ದಾರಿಯಲ್ಲಿ ಸಾಗುವಾಗ ಭಕ್ತಿಯ ಹೆಸರಲ್ಲಿ ನಾಡಾಡಿ ದೈವಗಳ ನಂಬಬೇಡ ಎಂಬ ಎಚ್ಚರಿಕೆ ಇದೆ. ಈ ಎಚ್ಚರಿಕೆ ಸಾತ್ವಿಕ ರೀತಿಯಲ್ಲಿದೆ. ಈ ಸಾತ್ವಿಕತೆಯಲ್ಲಿ ಪ್ರೀತಿ ಇದೆ. ಪ್ರೀತಿಯೇ ವಿಶ್ವಾಸಕ್ಕೆ ಮೂಲ, ವಿಶ್ವಾಸವೇ ಭಕ್ತಿ. ಅದೇ ಆ ಕಣ್ಣಿಗೆ ಒಂದೇ ದೈವ. ಆದರೆ ದೇವರ ನಾಮ ಹಲವು, ಆ ದೇವರ

ಇರುವು ಒಂದೇ ಎಂದಿದ್ದಾರೆ.

ಕನಕದಾಸರು ಸಂತರೂ ಹೌದು, ಕವಿಯೂ ಹೌದು. ಅವರಲ್ಲಿ ಸ್ವತಂತ್ರ ನಿರಂಕುಶಮತಿ, ವೈಚಾರಿಕ ಮನೋಭಾವ, ವಿಮರ್ಶನ ಬುದ್ಧಿ, ಪ್ರಶ್ನಿಸುವ ರೀತಿಯಿಂದ ಭಕ್ತಿ ಸ್ವರೂಪಕ್ಕೊಂದು ತಾತ್ವಿಕತೆಯನ್ನು ನೀಡಿದ್ದಾರೆ. ಎಲ್ಲ ಸಂಪ್ರದಾಯಗಳ ಸಾರವನ್ನು ಹೀರಿಕೊಂಡು ಭಕ್ತಿಯ ನೆಲೆಯನ್ನು ತೋರಿಸಿದ್ದಾರೆ. ಭಗವಂತ ಎಲ್ಲ ಕಡೆ ಇದ್ದಾನೆ ಎಂದು ಅವನ ಶಕ್ತಿಯ ಬಗ್ಗೆ ಅಪಾರ ನಂಬಿಕೆ ಹೊಂದಿದ್ದರು. ಭಕ್ತನನ್ನು ಎಂಥ ಪರಿಸ್ಥಿತಿಯಲ್ಲೂ ಕೈಬಿಡುವುದಿಲ್ಲ ಎಂಬ ವಿಶ್ವಾಸವನ್ನು ಹೊಂದಿದ್ದರು. ಇಂಥ ನಂಬಿಕೆಯ ಅಡಿಯಲ್ಲಿ ಅವರ ಭಕ್ತಿಗೆ ಸಂಬಂಧಿಸಿದ ಕೀರ್ತನೆಗಳು ಮೈದಾಳುತ್ತವೆ. ಭಗವದ್ ಭಕ್ತಿಯ ಶ್ರೇಷ್ಟತೆಯನ್ನು ಪ್ರಶ್ನಿಸದೆ, ಒಪ್ಪಿಕೊಂಡ ಸಂಪ್ರದಾಯ ಶೀಲತೆ ಇವರಲ್ಲಿ ಕಂಡು ಬರುತ್ತದೆ.

ಮಾನವನ ಸಂಸಾರ ಸಾಗರ ಸಾಗಲು ಭಕ್ತಿಯೇ ಮುಖ್ಯ. ದೇವರ ನಾಮ ಸ್ಮರಣೆಯೊಂದಿದ್ದರೆ ಸಾಕು ಎಂದಿದ್ದಾರೆ. ಸಂಸಾರ ಶಾಶ್ವತವಲ್ಲ ಅದು ನೀರ ಮೇಲಿನ ಗುಳ್ಳೆ. ಆದ್ದರಿಂದ ಸಂಸಾರದಲ್ಲಿದ್ದಷ್ಟು ದಿನ ಭಕ್ತಿ ಪಥದಲ್ಲಿ ಸಾಗಬೇಕು ಎಂದಿದ್ದಾರೆ. ಸಾವನ್ನು ಪ್ರತಿಯೊಬ್ಬರು ಒಂಟಿಯಾಗಿಯೇ ಎದುರಿಸಬೇಕು. ಬಂಧು-ಬಳಗ, ಪುತ್ರ ಪತ್ನಿ ಯಾರಿದ್ದರೂ ಸಹಾಯಕ್ಕೆ ಬರುವುದಿಲ್ಲ ಎಲ್ಲಾ ಕಾರ್ಯಗಳನ್ನು ದೇವರ ಮೇಲೆ ಭಾರ ಹಾಕಿ ಭಕ್ತಿಯಿಂದ ಆದಿಕೇಶವನನ್ನು ನಂಬಿದರೆ ಮಾತ್ರ ಇಹಪರ ಸುಖ. ಆದ್ದರಿಂದ 'ಭಜಿಸಿ ಬದುಕಲೊ ಮನುಜ' ಎಂಬ ನಿಲುವು ಅವರದು. 'ಆರು ಬಾಳಿದರೇನು? ಆರು ಬದುಕಿದರೇನು?' 'ನಾರಾಯಣನ ಸ್ಮರಣೆಯಿಲ್ಲದ ಬದುಕು' ಎಂದು ಹಾಡುವುದರ ಮೂಲಕ ಭಗವಂತನ ಸ್ಮರಣೆಯಿಲ್ಲದ ಬದುಕು ವ್ಯರ್ಥವೆಂದು ಸಾರಿದ್ದಾರೆ. "ಜ್ಞಾನಸಾಧನೆ ಮಾಡಿ ದೈವ ಸಾಕ್ಷಾತ್ಕಾರವನ್ನು ಪಡೆಯಬೇಕೆಂಬ ಹಂಬಲ ತೋರಿದ್ದಾರೆ. ಬದುಕಿಗಾಧಾರವಾದ ಸಮಸ್ತವೂ ಭಗವಂತನ ಸೃಷ್ಟಿ. ಮನುಷ್ಯ ಒಂದು ತೊಗಲು ಗೊಂಬೆಯಂತೆ. ದೇವರಿಂದ ಆಡಿಸಲ್ಪಡುವವನು"[೧೧] ಆದ್ದರಿಂದ ಲೋಕದ ಸರ್ವವೂ ಭಗವಂತನ ಅಧೀನ 'ತನು ನಿನ್ನದು ಜೀವನ ನಿನ್ನದು, ಅನುದಿನದಲ್ಲಿ ಬಾಳೋ ಸುಖದುಃಖ ನಿನ್ನದಯ್ಯ' ಪ್ರತಿ ವ್ಯಕ್ತಿಯ ಕರ್ಮ ಅವನನ್ನು ನಿಯಂತ್ರಿಸುತ್ತದೆ. 'ಬಡತನವು ಸಾಕೆಂದು, ಸಿರಿತನವ ಬಯಸಿದರೆ ಪಡೆದದ್ದು ಪೂರ್ವದಲ್ಲಿ ಬೆನ್ನ ಬಿಡದು' ಬರೆದ ಅಕ್ಷರವ ತೊಡೆಯಲಾರೆಯ ರಂಗ ಎಂದು ವಿಧಿ ಅಥವಾ ಹಣೆ ಬರಹಕ್ಕೆ ಕೈಚೆಲ್ಲುತ್ತಾರೆ. ಅಂತಿಮವಾಗಿ ವೈಕುಂಠ ದರ್ಶನವಾದಾಗ ಧನ್ಯತಾ ಭಾವ ಹೊಂದಿದ್ದಾರೆ.

ಹೀಗೆ ಕನಕರ ಭಕ್ತಿ ಕಲ್ಪನೆ ಮಾನವನ ಕಲ್ಯಾಣಕ್ಕಾಗಿ ಬಾಳಿಗೊಂದು ನಂಬಿಕೆಯನ್ನು ನೀಡಿದೆ. ಆದರೆ ಭಕ್ತಿ ಮಾರ್ಗ ಸುಲಭವಲ್ಲ, ಅದು ಗರಗಸವಿದ್ದಂತೆ ಹೋದಾಗಲೂ ಕುಯ್ಯುತ್ತದೆ ಬರುವಾಗಲೂ ಕುಯ್ಯುತ್ತದೆ. ಆದ್ದರಿಂದ ನಿರ್ಮಲ ಮನಸ್ಸಿನ ತಳಹದಿಯ ಮೇಲೆ ಸರ್ವ ಸಮರ್ಪಣಾ ಭಾವದಿಂದ ಕರ್ತವ್ಯ ನಿರ್ವಹಿಸಿದಾಗ ಮಾತ್ರ ಭಗವಂತನ

ಕೃಪೆ ಸಿಗುತ್ತದೆ. ಸೋಮಾರಿಗಳಿಗೆ ಇಲ್ಲಿ ಅವಕಾಶವಿಲ್ಲ. ಆದರೆ ಸೋಮಾರಿಗಳಲ್ಲಿಯೂ ವಿವೇಕ ಬರಲು ಪರಿಸರವೇ ಭಕ್ತಿಯನ್ನು ಒದಗಿಸುತ್ತದೆ. ಕೆಲಸಕ್ಕೆ ಬಾರದ ತೃಣವೂ ದೈವ ಬಲದಿಂದ ಶಕ್ತಿಯಾಗಿ ಪರಿಣಮಿಸುತ್ತದೆ. ಈ ಹಿನ್ನೆಲೆಯಲ್ಲಿ ಕನಕರು ತಮ್ಮ ಕೀರ್ತನೆಯಲ್ಲಿ ಭಕ್ತಿ ಸ್ವರೂಪದ ಬಲವನ್ನು ಪ್ರತಿಪಾದಿಸಿದ್ದಾರೆ. ಆತ್ಮಬಲ ಹೆಚ್ಚಿಸಿ ಸ್ವಾಭಿಮಾನವನ್ನು ಶ್ರೀಮಂತಗೊಳಸಿದ್ದಾರೆ. ಬದುಕನ್ನು ನೋಡುವ ಕ್ರಿಯಾ ಶೀಲತೆಯನ್ನು ಆತ್ಮೀಯತೆಯನ್ನು ಮೆರೆದಿದ್ದಾರೆ. "ನಾನು ಹೋಗಿಸಿ ವಾಸುದೇವನನ್ನ ಅಂಗೈನೆಲಿಯಾಗಿಸಿ ಭೂಮಿಯನ್ನು ವೈಕುಂಠವಾಗಿಸಿದೆ"[೨] ಎಂದು ಹೇಳುವ ಪರಿ ಕನಕರ ಸಾಹಿತ್ಯದ ಭಕ್ತಿ ಸ್ವರೂಪವು ಜೀವವಾಹಿನಿಯಾಗಿದ್ದು ಕನಕ ಮೌಲ್ಯವನ್ನು ಹೆಚ್ಚಿಸಿದೆ.

ಕವಿಯೊಬ್ಬ ಸಮಾಜಜೀವಿ. ಅವನ ಮನಸಿನಾಳದಿಂದ ಮೂಡಿ ಬರುವ ಪ್ರತಿಯೊಂದು ಅನಿಸಿಕೆಗಳು, ಸಾಮಾಜಿಕ ಭಾಷೆಯ ವಲಯದಲ್ಲಿಯೇ ವಿಹರಿಸುತ್ತವೆ. ಭಾಷಿಕ ನೆಲೆಯಲ್ಲಿ ಮೂಡಿ ಬರುವ ಕಾವ್ಯ ಮೌಲ್ಯಗಳು ಸಾಮಾಜಿಕ ಪರಿಧಿಯಲ್ಲೇ ತನ್ನ ಅಸ್ತಿತ್ವ ಪಡೆಯುತ್ತದೆ. ಹಾಗಾಗಿ ಕವಿ–ಕಾವ್ಯ ಮತ್ತು ಸಮಾಜಕ್ಕೆ ಒಂದಕ್ಕೊಂದು ಅವಿನಾಭಾವ ಸಂಬಂಧವಿರುತ್ತದೆ. ಕವಿಯಾದವನು ಸಮಾಜಮುಖಿ ಧೋರಣೆ ಹೊಂದಿರುವುದರಿಂದ ಆತನ ಅಭಿವ್ಯಕ್ತಿ ಕಾವ್ಯಮಯವಾಗಿ ಮೂಡಿ ಬಂದರೆ ಅದು ಜನಮನವನ್ನು ಬೇಗ ಆಕರ್ಷಿಸುತ್ತದೆ. ಹಾಗಾಗಿ ಸಾಮಾಜಿಕ ಚಿಂತನೆಯಡಿಯಲ್ಲಿ ಅವರ ಕಾವ್ಯ ಮೌಲ್ಯವನ್ನು ವಿಶ್ಲೇಷಿಸುವುದು ಪ್ರಸ್ತುತವೆನಿಸುತ್ತದೆ.

ಕನಕದಾಸರು ಭಗವಂತನ ಸದಾ ಧ್ಯಾನದಲ್ಲಿದ್ದವರು. ಶ್ರೇಷ್ಠ ಭಕ್ತರಾಗಿದ್ದವರು. ಆದ್ದರಿಂದಲೇ ಅವರನ್ನು ಭಕ್ತ ಕನಕದಾಸ ಎಂದೇ ಕರೆಯುತ್ತಾರೆ. ಮಾತ್ರವಲ್ಲದೆ ಪ್ರಾಚೀನ ಕಾವ್ಯ ಪುರಾಣಶಾಸ್ತ್ರಗಳನ್ನು ಆಳವಾಗಿ ಅಧ್ಯಯನ ಮಾಡಿದ ವಿದ್ವಾಂಸರೂ ಆಗಿದ್ದರು. ಈ ಪುರಾಣ ಪ್ರಜ್ಞೆ ಅವರ ಕೀರ್ತನೆಗಳಲ್ಲಿ ದಟ್ಟವಾಗಿ ಹರಡಿಕೊಂಡಿದೆ.

ಪವಡಿಸಿರುವ ಪಶ್ಚಿಮ ರಂಗನಾಥನನ್ನು ಕಂಡು ಕನಕದಾಸರು ಸಂಭೋದಿಸಿರುವ ರೀತಿ ಅನನ್ಯವಾದುದು.

ಯಾಕೆ ನೀನಿಲ್ಲಿ ಪವಡಿಸಿದೆ ಹರಿಯೇ
ಜಗದೇಕ ವಿಖ್ಯಾತ ಪಶ್ಚಿಮ ರಂಗನಾಥ
ತಮನೊಡನೆ ಹೋರಿ ಬೆಟ್ಟವನು ಬೆನ್ನಲಿ ಹೊತ್ತು
ರಮಣ ಭೂಮಿಯನು ತಂದಾಲಸ್ಯವೋ
ಅಮರ ವೈರಿಯ ಕರುಳ ಕಿತ್ತ ಕಡು ಧಾವತಿಯೋ
ಕ್ಷಮೆಯನಳೆದೀ ಪಾದಕಮಲ ನೊಂದವೋ

ಹೀಗೆ ತೀರಾ ಸರಳವಾದ ಮಾತುಗಳಲ್ಲಿ ವಿಷ್ಣುವಿನ ದಶಾವತಾರದ ಲೀಲೆಗಳನ್ನು

[illegible]

ವರ್ಣಿಸುತ್ತಾ ಕೀರ್ತನೆ ವಿವರಿಸುತ್ತದೆ. ಈ ವರ್ಣನೆಯಲ್ಲಿ ವಿಶೇಷತೆಯೇನೂ ಇಲ್ಲದಿದರೂ ಕೇವಲ ವರದಿಯಂತೆ ಕಂಡರೂ ವಿಶೇಷತೆ ಪ್ರಾಪ್ತವಾಗುವುದು. ಈ ಹತ್ತು ಅವತಾರಗಳನೆತ್ತಿ ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಉದ್ಧರಿಸಿದ ಕಾರಣದಿಂದ ಉಂಟಾದ ಆಯಾಸ, ಆಲಸ್ಯ ನೋವು ದಣಿವುಗಳಿಂದಾಗಿ ರಂಗನಾಥ ಪವಡಿಸಿರುವನೆ ಎಂದು ಕೇಳುವ ಭಕ್ತನ ಹೃದಯದ ಅಕ್ಕರೆ, ಆತಂಕ, ಕಾಳಜಿಗಳು ಪ್ರತಿ ಸಾಲಿನ ಕೊನೆಯ ಸಂಭೋದನೆಯಲ್ಲಿ ಸ್ಪಂದಿಸುವ ಗುಣ, ಆಸಕ್ತಿ, ವಾತ್ಸಲ್ಯದಿಂದ ತುಂಬಿ ಹಿತವಾದ ನೋವು ಇಡೀ ಕೀರ್ತನೆಯನ್ನು ವ್ಯಾಪಿಸಿ ದೇವರಿಗೂ ಭಕ್ತನಿಗೂ ಆತ್ಮೀಯವಾದ ಸಂಬಂಧ ಕಲ್ಪಿಸುತ್ತದೆ. ತಾಯೊಬ್ಬಳು ತನ್ನ ಮಗುವಿನ ಬವಣೆಯ ಬಗೆಗೆ ಅಂತಃಕರಣಪೂರ್ವಕವಾಗಿ ತಾಳುವ ಕರುಣೆ ಅನುಕಂಪಗಳು ಇಲ್ಲಿ ಕಾಣುತ್ತವೆ.

'ಭಜಿಸಿ ಬದುಕಲೊ ಮನುಜ' ಎಂಬ ಮತ್ತೊಂದು ಕೀರ್ತನೆಯಲ್ಲೂ ದಶವತಾರದ ವಿವರವೇ ಇದ್ದರೂ, ಭಗವಂತನ ಪಾದ ಮಹಿಮೆಯನ್ನು ಕೀರ್ತಿಸುವ ಮೂಲಕ ಆ ಅವತಾರಗಳ ಮಹತ್ವವನ್ನು ಮೆರೆಸಲಾಗಿದೆ.

ಶಿಲೆಯ ಸತಿಯೊಳಮಾಡಿ ಕುಲವ ಸಲಹಿದ ಪಾದ
ಒಲಿದು ಪಾರ್ಥನ ರಥವನೊತ್ತಿದ ಪಾದ
ಕಲಿ ಸುಯೋಧನನ ಓಲಗದಿ ಕೆಡಹಿದ ಪಾದ
ಖಳ ಕಾಳಿಂಗನ ತುಳಿದೆಸೆವ ಪಾದ
ಗರುಡ ಶೇಷಾದಿಗಳು ಬಿಡದೆ ಹೊತ್ತಿಹ ಪಾದ
ಧರೆಯ ಈರಡಿ ಮೂಡಿ ಅಳೆದ ಪಾದ
ಸಿರಿ ತನ್ನ ತೊಡೆಯ ಮೇಲಿಟ್ಟು ಒತ್ತುವ ಪಾದ
ವರ ಕಾಗಿನೆಲೆಯಾದಿಕೇಶವನ ಪಾದ

ಹೀಗೆ ಅಂತ್ಯ ಪ್ರಾಸವನ್ನು ಒಳಗೊಂಡಿರುವ ಈ ಕೀರ್ತನೆಯು ಪಾದಗಳ ಪಾವಿತ್ರ್ಯತೆಯ ಹಿರಿಮೆಗೆ ಒತ್ತು ಕೊಡಲಾಗಿದೆ. ಹಿಂದಿನ ಕೀರ್ತನೆಯಲ್ಲಿ ತನ್ನ ಅವತಾರಗಳ ಕಾರಣದಿಂದ ದೇವನಿಗೆ ಉಂಟಾದ ನೋವು, ಆಯಾಸಗಳ ಕಡೆಗೆ ಗಮನ ಸೆಳೆದರೆ ಈ ಕೀರ್ತನೆಯು ಕವಿಯ ಚಾತುರ್ಯಕ್ಕೆ ಸಮಯ ಪ್ರಜ್ಞೆಗೆ ಸಾಕ್ಷಿಯಾಗಿದೆ. ಇಲ್ಲಿ ಪ್ರಾಸ, ಸಂಭ್ರಮದ ಲಯ, ಪಾದ ಎಂಬ ಪುನರುಕ್ತಿಗಳ ವರ್ಣನೆಗೆ ತೀವ್ರತೆಯನ್ನು ಉಂಟು ಮಾಡುತ್ತದೆ.

ಶ್ರೀ ರಂಗನ ಹಿರಿಮೆಯನ್ನು ನಿರೂಪಿಸುವ ಮತ್ತೊಂದು ಕೀರ್ತನೆ ಅಕ್ಕ ತಂಗಿಯರ ಸಂವಾದ ರೀತಿಯಲ್ಲಿ ತಿಳಿಯಾದ ಸರಳ ಕನ್ನಡ ಪದಗಳ ಬಳಕೆಯಿದೆ. ಇಲ್ಲಿ ನಾಲ್ಕು ಐದು ಮಾತ್ರೆಗಳ ಬಂಧದಲ್ಲಿ ಜಾನಪದದ ಮಧುರ ದಾಟಿಯಲ್ಲಿ ಚಿತ್ರಣಗೊಂಡಿದೆ.

'ರಂಗನಾಥನೆಂಥವ ತಂಗಿ' ಎನ್ನುವ ಕೀರ್ತನೆಯಲ್ಲಿ ನಾದ ಭಾವಗಳು ಸಮರಸವಾಗಿ

ಸಮ್ಮಿಲನಗೊಂಡು ಸನ್ನಿವೇಶವನ್ನು ಜೀವಂತವಾಗಿ ಕಡೆದು ನಿಲ್ಲಿಸುವ ಮೂಲಕ ನಮ್ಮ ಮನಸ್ಸನ್ನು ಸೂರೆಗೊಂಡಿದೆ. "ಪದಗಳ ಸಂಯೋಜನೆ, ಅನುಕರಣ ಶಬ್ದಗಳ ಯಥೋಚಿತ ಬಳಕೆ ಚಂಡ ಮಾರುತದ ವೇಗದಲ್ಲಿ ಸಾಗುವ ಪ್ರಾಸಾನು ಪ್ರಾಸಗಳ ಸಂದರ್ಭದ ಅಟ್ಟಹಾಸ, ಅದಕ್ಕನುಗುಣವಾಗಿ ಸನ್ನಿವೇಶದ ತೀವ್ರತೆಯನ್ನು ಲಯ ವಿನ್ಯಾಸ ಹೊಂದಿದೆ."[೧೩]

ನಿಂದಾಸ್ತುತಿಯ ಮೂಲಕ ಹರಿಯನ್ನು ಕೀರ್ತಿಸುವ 'ಯಾರು ಬದುಕಿದರಯ್ಯಾ ಹರಿ ನಿನ್ನ ನಂಬಿ' ಎಂಬ ಕೀರ್ತನೆಯು ಅವರ ಕಾವ್ಯ ಮೌಲ್ಯಕ್ಕೆ ಯಶಸ್ವಿ ಉದಾಹರಣೆಯಾಗಿದೆ. ಭಗವಂತನ ಮಹಿಮೆಯನ್ನು ವೈಭವೀಸುವ ಮೂಲಕ ಆತನನ್ನು ಸ್ತುತಿಸುವ ನೇರ ಸಾಂಪ್ರದಾಯಿಕ ಮಾರ್ಗವನ್ನು ತೊರೆದು, ಆತನು ಮಾಡಿದ ಕೆಡಕುಗಳನ್ನು ಬಣ್ಣಿಸುವ ಮೂಲಕ ದೇವರ ವ್ಯಕ್ತಿತ್ವದ ಮತ್ತೊಂದು ಮಗ್ಗಲನ್ನು ಅನಾವರಣಗೊಳಿಸುತ್ತದೆ ಮತ್ತು ಅದಕ್ಕೆ ಕಾರಣವಾದ ಸಂದರ್ಭ, ಕ್ರಿಯೆಯನ್ನು ನಮ್ಮ ಮನಸ್ಸಿನಲ್ಲಿ ಮೂಡಿಸಿ ಅವರ ಅಸಾಧಾರಣ ಶಕ್ತಿ ಸಾಮರ್ಥ್ಯದ ಅನಾವರಣವಿದೆ.

ಇಡೀ ಮಹಾಭಾರತವನ್ನು ಒಂದು ಬೊಂಬೆಯಾಟದ ಪ್ರತಿಮೆಯ ಮೂಲಕ ಚಿತ್ರಿಸಿರುವ ಕನಕದಾಸರ ಪ್ರತಿಭೆಗೆ ಮತ್ತೊಂದು ಉದಾಹರಣೆಯ ಕೀರ್ತನೆಯಾಗಿದೆ.

ಬೊಂಬೆಯಾಟವನಾಡಿಸಿದೆ ಮಹಾಭಾರತದ
ಅಂಬುಜಭವಾದಿ ಅಮರರು ನೋಡಿತಿರಲು
ಕುರುಭೂಮಿಯೆಂಬ ಪುರವೀದಿಯನ್ನು ರಚಿಸಿ
ಮರೆಯ ಮಾಯದ ಐದು ತೆರೆಯ ಹಾಕಿ
ದಾಸಾನುದಾಸರಿಗೆ ದಾಸರಾದವರ

ಹೀಗೆ ಮುಂದುವರಿಯುವ ಕೀರ್ತನೆಯಲ್ಲಿ ಭಾರತವೇ ಒಂದು ಬೊಂಬೆಯಾಟ, ಕುರುಭೂಮಿಯೇ ಬೀದಿ, ಅದೇ ಆಟದ ವೇದಿಕೆ ಕೂಡ, ಅಲ್ಲಿ ನಡೆಯುವ ಮರ ಮಾಯೆಗಳೇ ತೆರೆಗಳು, ರಾಜರೇ ಬೊಂಬೆಗಳು, ಅರ್ಜುನನ ಕಥೆಯ ಕುದುರೆಯ ಕಡಿವಾಣವೇ ಸೂತ್ರ, ಭಗವಂತನೇ ಆಟವಾಡಿಸುವ ಸೂತ್ರದಾರಿ, ಅವನು ಹೇಳಿದಂತೆ ಆಡಿಸಿದಂತೆ ಆಟ."[೧೪] ಮಹಾಭಾರತದ ವೈವಿಧ್ಯಮಯ ಚಟುವಟಿಕೆಗಳ ಹಿನ್ನೆಲೆಯಲ್ಲೂ, ಅದನ್ನು ನಿಯಂತ್ರಿಸುವ ಸೂತ್ರಧಾರಕ ಶಕ್ತಿ, ದೇವರೆಂಬುದನ್ನು ಧ್ವನಿಸಲು ಜನಪದ ಆಟವನ್ನು ಬಳಸಿಕೊಂಡಿರುವ ಕಾವ್ಯ ಮೌಲ್ಯ ತುಂಬ ಶಕ್ತಿಯುತವಾಗಿದೆ.

'ನಾರಾಯಣನೆಂಬ ನಾಮದ ಬೀಜ' ಎಂಬ ಕೀರ್ತನೆಯು ಸಹ ಅದ್ಭುತ ಕಲ್ಪನಾ ಶಕ್ತಿಗೆ ಉತ್ತಮ ನಿದರ್ಶನ. ಬೇಸಾಯದ ರೂಪದಲ್ಲಿ ನಾರಾಯಣನ ಭಕ್ತಿಯನು ಕ್ರಮ ಕ್ರಮೇಣವಾಗಿ ಹೇಗೆ ಬೆಳೆಸಿಕೊಂಡು ಆತ್ಮ ಕಲ್ಯಾಣವನ್ನು ಸಾಧಿಸಿಕೊಳ್ಳಬಹುದೆಂಬುದನ್ನು ತುಂಬಾ ಅರ್ಥವತ್ತಾಗಿ ತಿಳಿಸಿದ್ದಾರೆ. ಸಾಲುಸಾಲಿಗೆ ಕವಿತೆ ಬೆಳೆಯುತ್ತಾ ತನ್ನ ಅರ್ಥಗಳನ್ನು

ಹಿಗ್ಗಿಸಿಕೊಳ್ಳುತ್ತಾ ಭವ್ಯ ರೂಪಕದೊಡನೆ ಪರಿಪೂರ್ಣವಾಗಿ ಅರಳಿ ನಿಲ್ಲುವ ಪರಿ ವಿಸ್ಮಯಕಾರಿಯಾಗಿದೆ. ಅರಿಷಡ್ವರ್ಗಗಳು, ಪಂಚೇಂದ್ರಿಯಗಳ ಆಸೆಯನ್ನು ತೊರೆದು ಕೇಶವನ ಚರಣಕಮಲಗಳಲ್ಲಿ ನಿತ್ಯವಾಸಿಯಾಗಬೇಕೆಂಬುದನ್ನು ಒತ್ತಿ ಹೇಳುತ್ತದೆ. 'ಢಿಂಭದಲ್ಲಿರುವ ಜೀವಕಂಬ ಸೂತ್ರದ ಗೊಂಬೆಯಂತೆ' ಎಂಬ ಕೀರ್ತನೆಯಲ್ಲಿ ತಾವು ವ್ಯಕ್ತಪಡಿಸುವ ಭಾವಕ್ಕೆ, ಅರ್ಥ ಸಂಪನ್ನವಾದ ಧ್ವನಿ ರಮ್ಯವಾದ ಮತ್ತು ಚಿತ್ರವತ್ತಾದ ಉಪಮೆಗಳನ್ನು ಬಳಸಿಕೊಂಡು ನಮ್ಮ ಮನಸ್ಸಿನಲ್ಲಿ ಭದ್ರವಾಗಿ ತಮ್ಮ ಉದ್ದೇಶವನ್ನು ಸಾರುವ ಕಲೆ ದಾಸರಲ್ಲಿದೆ. ಇಲ್ಲಿ ಲೋಕಾನುಭವದ ಸೂಕ್ತ ಚಿಂತನೆಯ ಭಾವಾಭಿವ್ಯಕ್ತಿಯ ಕವಿ ನಿರೂಪಣೆಯಿದೆ.

ಭಗವಂತನ ಸರ್ವವ್ಯಾಪಕತ್ವವನ್ನು ನಿರೂಪಿಸುವ 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೊ' ಎಂಬ ಕೀರ್ತನೆ ಕನಕದಾಸರ ಶ್ರೇಷ್ಠ ಕೀರ್ತನೆ. ಇಲ್ಲಿ "ಜಗತ್ತೆಂಬುದು ಒಂದು ಮಾಯೆ ಇದು ಮರ್ತ್ಯ ಕಣ್ಣಿಗೆ ಒಂದಕ್ಕೆ ಎರಡಾಗಿ ಎರಡಕ್ಕೆ ನಾಲ್ಕಾಗಿ ಕೊನೆಗೆ ಈ ಎರಡೂ ಅಥವಾ ನಾಲ್ಕು ಒಂದರೊಳಗೊಂದರಂತೆ ಇರುವಂತೆ ಭಾಸವಾಗುತ್ತದೆ. ಮೇಲು ನೋಟಕ್ಕೆ ಒಂದರಿಂದ ಮತ್ತೊಂದು ಹುಟ್ಟಿದಂತೆ ಕಂಡರೂ ವಾಸ್ತವಾಗಿ ಇವೆಲ್ಲಕ್ಕೂ ಮೂಲ ಸೆಲೆಯೊಂದು ಇರುವಂತಿದೆ. ಅದೇ ಭಗವಂತ"[೧೫] ಹೀಗೆ ಎರಡಲ್ಲಿ ಒಂದಾಗಿ ಕಾಣುವುದು ಮಾಯೆ. ಈ ಮಾಯೆ ಕೂಡ ನಮ್ಮ ಪಂಚೇಂದ್ರಿಯಗಳಿಂದಲೇ ಹುಟ್ಟಿ ಆವರಿಸಿಕೊಳ್ಳುವಂತದು. ಆದ್ದರಿಂದ ನಮ್ಮ ಸರ್ವೇಂದ್ರಿಯಗಳನ್ನು ಅದರಿಂದ ಉಂಟಾಗುವ ಸರ್ವಶಕ್ತಿಗಳನ್ನು ದೇವರಿಗೆ ಅರ್ಪಿಸುವ ಮೂಲಕ, ಆ ಮಾಯೆಯನ್ನು ಗೆಲ್ಲಬಹುದು ಎಂದಿದ್ದಾರೆ. ಇಲ್ಲಿ ಸರಳವಾದ ಹದವರಿತ ಪದ ಪ್ರಯೋಗ, ಲಲಿತವಾದ ಲಯ, ಆಳವಾದ ಚಿಂತನೆಗಳಿಂದ ಮತ್ತು ಸಾಮಾನ್ಯರ ಅನುಭವದ ಎಲ್ಲೆಯೊಳಗೂ ಬರುವ ಚಿರಪರಿಚಿತ ಉದಾಹರಣೆಗಳಿಂದ ಚಿಂತನಾ ತತ್ವವನ್ನು ಸರಳವಾಗಿ ಹೊಮ್ಮಿಸುವ, ಆ ಮೂಲಕ ಮನಸ್ಸಿನಲ್ಲಿ ಬೇರು ಬಿಡುವ ವಿಶಿಷ್ಟತೆಯಿಂದ ಗೀತೆ ಅನನ್ಯವಾಗಿದೆ.

'ಮುತ್ತು ಕೇರಿಗೆಗೆ ಬಂದಿದೆ' ಎಂಬ ಕೀರ್ತನೆಯಲ್ಲಿ ದೇವರನ್ನು ಮುತ್ತಿಗೆ ಹೋಲಿಸಿ ಆ ಮುತ್ತನ್ನು ಭಕ್ತಿಯುಳ್ಳವರಲ್ಲಿ ಸೆರಗಿಗೆ ಕಟ್ಟಿಕೊಳ್ಳಬೇಕೆಂದು ಸಾರುವ ಮೂಲಕ ದೇವರ ಮಹತ್ವವನ್ನು ಕೊಂಡಾಡಿದೆ. ಇಲ್ಲಿ ಮುತ್ತಿನ ಪರಿಶುದ್ದತೆ ಮೌಲ್ಯ, ಬಿಳುಪು ಹೊಳಪುಗಳ ಮತ್ತು ಅದನ್ನು ಧರಿಸುವುದರಿಂದ ಆಗುವ ಸೌಂದರ್ಯ ಸಂತೋಷಗಳು, ಹರಿಯನ್ನು ಒಲಿಸಿಕೊಳ್ಳುವುದರಿಂದ ಆಗುವ ಅನನ್ಯ ಪ್ರಯೋಜನವನ್ನು ಸಂಕೇತಿಸುತ್ತವೆ. ಜ್ಞಾನವೆಂಬ ದಾರದಲ್ಲಿ ಪೋಣಿಸಿ ನೋಡುವ ಮುತ್ತು ಜ್ಞಾನಿಗಳ ಮನದಲ್ಲಿ ಮೆರವ ಮುತ್ತು ಈ ಸಾಲುಗಳು ಜ್ಞಾನ ಮಾರ್ಗದಿಂದ ದೈವ ಸಾಕ್ಷಾತ್ಕಾರವನ್ನು ಪಡೆಯುವ ಸಾಧ್ಯತೆಯನ್ನು ಸ್ಪಷ್ಟಪಡಿಸುತ್ತದೆ. ಇಲ್ಲಿ ಕವಿಯ ಸಾದಶ್ಯ ಜ್ಞಾನ ಮತ್ತು ಚಾತುರ್ಯದ ಮೆಚ್ಚುಗೆಗಳು ಅಡಕವಾಗಿವೆ.

ಕೃಷ್ಣನ ಬಾಲ್ಯದ ಮೇಲೆ ಬೆಳಕು ಚೆಲುವ ಕೀರ್ತನೆ 'ಇಂದು ಸೈರಿಸಿರಿ ಶ್ರೀಕೃಷ್ಣನ' ಎನ್ನುವ ಕೀರ್ತನೆಯಲ್ಲಿ ಬೆಣ್ಣೆ ಕದ್ದನೆಂದು ಕಾಲುಕಟ್ಟಿ ಹಾಕಿ ಗೋಪಿಯರು ಯಶೋಧೆಯ

ಬಳಿಗೆ ದೂರು ಕೊಂಡೊಯ್ದಾಗ, ಆ ವಾತ್ಸಲ್ಯಮಯಿ ತಾಯಿ ಹೇಳುವ ಮಾತಿನಲ್ಲಿ "ಮಗನ ಬಗ್ಗೆ ಮೋಹ, ಅವನಿಗಾದ ಶಿಕ್ಷೆಯ ಬಗ್ಗೆ ಅನುಕಂಪ, ಅವನನ್ನು ಶಿಕ್ಷಿಸುವ ಗೋಪಿಯರ ಬಗ್ಗೆ ನಸುಗೋಪ ಮತ್ತು ಮೃದು ಆಕ್ಷೇಪ ತುಂಬ ಚಿತ್ತಾಕರ್ಷಣೆಯಾಗಿ"[೧೬] ಮೂಡಿ ಬಂದಿದೆ. ಇಂಥ ಸರಳವಾದ ನುಡಿಗಳಲ್ಲಿ ಆಪ್ತ ಚಿತ್ರಣವನ್ನು ಕಟ್ಟಲಾಗಿದೆ. ಹಾಗೆಯೆ ತುಂಟತನದ ಸಜೀವ ಚಿತ್ರಣವನ್ನು ಕೊಡುವ 'ಹೊತ್ತರೆದ್ದು ಮನೆಗೆ ಬಂದನೆ' ಎಂಬ ಕೀರ್ತನೆಯಲ್ಲಿ ಕೃಷ್ಣನ ಬಾಲಲೀಲೆಯ ಪರಿಸರವೇ ತನ್ನಲ್ಲಿ ಜೀವಂತಿಕೆ ರಸಿಕತೆ ಮೋಹಕತೆಗಳೊಡನೆ ನಮ್ಮ ಕಣ್ಣು ಮುಂದೆ ಪ್ರತ್ಯಕ್ಷವಾದಂಥ ವರ್ಣನೆಯಿದೆ. ನಾದಮಯವಾದ ಚಿಕ್ಕ ಚಿಕ್ಕ ಪದಗಳು, ಲಯ ಮಾದುರ್ಯವಾದ ಪ್ರಾಸಗಳು, ಅವುಗಳಲ್ಲಿ ಅಡಕವಾಗಿರುವ ಸಂಗೀತ, ಜಾನಪದ ಗತ್ತು, ಕಾವ್ಯ ಶೈಲಿಯನ್ನು ಚಿತ್ರಿಸುತ್ತಿವೆ.

ತನ್ನ ನಾಟಕೀಯತೆಯಿಂದ ಮುಗ್ಧ ಚತುರತೆಯಿಂದ ಮನಸೆಳೆಯುವ ಇನ್ನೊಂದು ಕೀರ್ತನೆ 'ನೆರೆದು ಗೋಪಿಯರೆಲ್ಲರು' ತಮ್ಮ ಮನೆಗೆ ಬಂದು ತುಂಟಾಟ ಮಾಡಿದ ಕೃಷ್ಣನನ್ನು ಕೈ ಹಿಡಿದು ಎಳೆದುಕೊಂಡು ಯಶೋಧೆಯ ಬಳಿಗೆ ಬಂದು ದೂರುತ್ತಾರೆ. ಗೋಪಿಯರು ತೊಲೆಗೆ ಏಣಿಯನ್ನೇ ಹಾಕದೆ ಏರಿ ನೆಲವನ್ನಲ್ಲಿಟ್ಟಿದ ಹಾಲು ಮೊಸರನ್ನು ಕುಡಿದವನೆಂದು ದೂರಿದರೆ "ಆಟ್ಟಕ್ಕೆ ನೆಗೆಯಲು ನಾನೇನು ಬೊಮ್ಮ ಜಟ್ಟಿಗನೆ? ಇವಳು ಸುಮ್ಮ ಸುಮ್ಮನೆ ದೂರುತ್ತಾಳೆ, ಅಮ್ಮಯ್ಯಾ"[೧೭] ಎಂದು ತನ್ನ ಅಮಾಯಕತೆ ಪ್ರದರ್ಶಿಸುವ ಕೃಷ್ಣನ ಜಾಣ್ಮೆ ಹಾಗೆಯೇ ಗವಾಕ್ಷದಿಂದ ಹತ್ತಿ ಬಚ್ಚಿಟ್ಟ ಬೆಣ್ಣೆಯನ್ನೆಲ್ಲಾ ಮಕ್ಕಳಿಗೂ ಇಲ್ಲದಂತೆ ತಿಂದು ಹಾಕಿದ ಎಂದು ಮತ್ತೊಬ್ಬಾಕೆ ದೂರಿದರೆ, "ಗಡಿಗೆ ಬೆಣ್ಣೆ ಮೆಲ್ಲಲ್ಲಿಕ್ಕೆ ನನ್ನ ಹೊಟ್ಟೆ ಮಡುವೆಂದು ಭಾವಿಸಿದೆಯೇನೆ?"[೧೮] ಎಂದು ಸವಾಲು ಹಾಕುವ ಸರಸ ಮುಗ್ಧ ಮಧುರ ಭಾವಗಳು ಕಾವ್ಯ ಮೌಲ್ಯದಿಂದ ನಮ್ಮ ಮನಸ್ಸನ್ನು ಆವರಿಸುತ್ತವೆ.

ಜಾನಪದ ಧಾಟಿಯಿಂದ ಮಣ್ಣಿನ ಭಾಷೆಯಿಂದ ಸೊಗಡುಕ್ಕಿಸಿ ರಂಜಿಸುವ ಕೆಲವು ಕೀರ್ತನೆಗಳನ್ನು ದಾಸರು ರಚಿಸಿದ್ದಾರೆ. ಗ್ರಾಮೀಣ ಪರಿಸರದಲ್ಲಿ ಅಕ್ಷರಸ್ಥರ ಮಧ್ಯೆ ಬದುಕಿದ ಅವರ ಭಾಷೆ ಆ ನೆಲದ ಕಸವನ್ನು ಹೀರಿ ಸಮೃದ್ಧವಾಗಿದೆ. 'ದೇವಿ ನಮ್ಮ ದ್ಯಾವರು ಬಂದರು' ಎಂಬ ಕೀರ್ತನೆಯಲ್ಲಿ ವಿಷ್ಣುವಿನ ಅವತಾರಗಳನ್ನು ಮಹೋನ್ನತವಾದ ಹಾಗೂ ಭವ್ಯವಾದ ಸಾಧನೆಗಳ ಚಿತ್ರವನ್ನು ಆಡುನುಡಿಯಲ್ಲಿ ನಿರಾಯಾಸವಾಗಿ ಮೂಡಿಸುವ ಶೈಲಿಯಿದೆ. ಅಚ್ಚಗನ್ನಡದ ಶಕ್ತಿ ಜಾನಪದ ಶೈಲಿಯ ರಮಣಿಯತೆಯೊಡಗೂಡಿ ಪುರಾಣದ ವಸ್ತುವನ್ನು ಜೀವಂತವಾಗಿ ಪುನರ್ ಕಟ್ಟಿಕೊಡುವಲ್ಲಿ ಪೂರ್ಣ ಯಶಸ್ವಿಯಾಗಿದೆ.

ಸಹಜ ಪ್ರತಿಭೆಯ ಹೊಳಪಿನಿಂದ ಅಂತರಂಗದ ಅನುಭವದಿಂದ ದೈವ ಪ್ರೀತಿಯಿಂದ ಹೊಮ್ಮಿದ ಇಂಥ ರಚನೆಗಳ ಜೊತೆಗೆ ಪರಿಶ್ರಮಪೂರ್ವಕವಾಗಿ ರಚಿಸಿದ ಕೆಲವು ಚತುರ ನಿರ್ಮಿತಿಗಳೂ ಇವೆ. ಒಂದು ಪದಕ್ಕಿರುವ ವಿವಾದಾರ್ಥಗಳ ಜೊತೆ ಸಾಗುವ ಈ ಸಾಲುಗಳು ದಾಸರ ಪಾಂಡಿತ್ಯದ ಚಾತುರ್ಯದ ಪದರಚನಾ ಕೌಶಲ್ಯದ ನೈಪುಣ್ಯವಾಗಿವೆ. 'ಕಮಲವನು

ಈರಡಿಯ ಮಾಡಿದೆ' ಎನ್ನುವ ಕೀರ್ತನೆಯಲ್ಲಿ ಸಂಬಂಧ ವಾಚಕ ಶಬ್ದಗಳ ಪ್ರಯೋಗ ಬಳಸುತ್ತಾ, ಹರಿಯ ಹೆಸರಿಗೆ ಸಂಬಂಧ ಕಲ್ಪಿಸುವ ಜಾಣತನವಿದೆ. 'ದನುಜೆಯೊಳ್ದನಣ್ಣನಣ್ಣನ' ಕೀರ್ತನೆಯಲ್ಲಿ ಶಬ್ದ ಚಮತ್ಕಾರಗಳ ಬಳಕೆಯಿದೆ. ಅವುಗಳನ್ನು ತಿರುಗಿಸಿ ಮುರುಗಿಸಿ ಬಾಗಿಸಿ ಬಳುಕಿಸಿ ಕುಣಿಸಿ ಆನಂದಿಸುವುದು ಕಂಡು ಬರುತ್ತದೆ.

ಹೀಗೆ ಯಾವ ವಿಷಯವನ್ನು ಮಂಡಿಸಲಿ ಕನಕದಾಸರ ಕವಿ ಹೃದಯ ಅದಕ್ಕೆ ವಿಶಿಷ್ಟವಾದ ಕಾವ್ಯ ಶೈಲಿಯಲ್ಲಿ ಮೂಡಿಸಿದೆ. ಅವರ ಕೀರ್ತನೆಯಲ್ಲಿ ಎಲ್ಲೆಡೆಯಲ್ಲಿಯೂ ಅರ್ಥಪೂರ್ಣವಾದ ಮನಮೋಹಕವಾದ, ಉಪಮ, ರೂಪಕಗಳು ಕಂಡು ಬರುತ್ತವೆ. 'ದಂತಿಯಿಲ್ಲದ ಅರಸು, ಮುರಿದ ಕಾಲಿನ ಗೊರಸು', 'ತುಟಿ ಮೀರಿದ ಹಲ್ಲಿನಂತೆ, ಬಾಳೆಹಣ್ಣಿಗೆ ಕೊಡಲಿ ಬೇಕೆ?' ಪಾವಕನ ಉರಿಯೊಳಗೆ ಹೊಕ್ಕು ಹೊರಡಲುಬಹುದು ಈ ಮುಂತಾದ ನಿದರ್ಶನಗಳು ಈ ಮಾತಿಗೆ ಸಮರ್ಥವಾಗಿ ಸಾಕ್ಷಿಯಾಗಿ ನಿಲ್ಲುತ್ತವೆ.

ಕನಕದಾಸರ ಬೆಡಗಿನ ವಚನಗಳಂತು ಅವರ ಬುದ್ಧಿಮತ್ತೆಯ ಚಿಂತನೆಯಾಗಿದೆ. ಭಾಷಾ ಶ್ರೀಮಂತಿಕೆಯಿಂದ ಕೂಡಿದೆ. ಅವರ ಬಹುಪಾಲು ಕೀರ್ತನೆಗಳು ಪ್ರಾಸ ಅನುಪ್ರಾಸಗಳ ಸೊಬಗಿನಿಂದ, ಭಾವಾನು ಸಾರಿಯಾದ ಲಯ ವಿನ್ಯಾಸದ ಆಕರ್ಷಕ ಅಭಿನಯದಿಂದ, ಅವುಗಳ ಅಂತರಾಳದಿಂದ ಸಹಜವಾಗಿ ಹೊಮ್ಮುವ ಮಧುರನಾದದಿಂದ ಮನಸೆಳೆಯುತ್ತವೆ. ಒಟ್ಟಿನಲ್ಲಿ ಕನಕದಾಸರ ಕೀರ್ತನೆಗಳಲ್ಲಿ ಉತ್ತಮ ಕಾವ್ಯದಿಂದ ನಿರೀಕ್ಷಿಸುವ ಮೌಲ್ಯಗಳು ಅಧಿಕ ಪ್ರಮಾಣದಲ್ಲಿ ದೊರೆಯುತ್ತವೆ.

ಕನ್ನಡ ಸಾಹಿತ್ಯದಲ್ಲಿ ಜನಸಾಮಾನ್ಯರ ಆಶೋತ್ತರಗಳಿಗೆ ಸ್ಪಂದಿಸಿದ್ದು ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯ. ಈ ಎರಡು ಸಾಹಿತ್ಯ ಘಟ್ಟಗಳ ದೃಷ್ಟಿ ಧೋರಣೆ ಮತ್ತು ಪ್ರೇರಣೆಗಳ ಮೂಲ ಸೆಲೆ ಭಕ್ತಿ, ಜ್ಞಾನ, ವೈರಾಗ್ಯವನ್ನು ಬಿತ್ತಿ, ಸಮಾಜದ ಅಂಕುಡೊಂಕುಗಳನ್ನು ವಿಡಂಬಿಸುತ್ತ ತಮ್ಮ ಉದ್ದೇಶ ಸಾಧನೆಗೆ ಪೂರಕವಾಗುವ ಸಾಹಿತ್ಯ ಸೃಷ್ಟಿ ಮಾಡಿರುವುದು. ಬಹುಪಾಲು ಸಾಮಾನ್ಯ ವರ್ಗದಿಂದಲೆ ಬಂದ ಇವರು ಸಾಹಿತ್ಯದಲ್ಲಿ ಸರಳತೆಯನ್ನು ಸಾಧಿಸಿ ಜನಸಾಮಾನ್ಯರ ಬಳಿಗೆ ತಲುಪುವಂತೆ ಮಾಡಿದರು. ಬದುಕಿನ ನಿಗೂಢ ಸತ್ಯಗಳನ್ನು ಕೀರ್ತನಾ ಮಾರ್ಗಗಳಿಂದ ಭೇದಿಸಿ ಜನತೆಗೆ ಉನ್ನತಿಯ ಮಾರ್ಗವನ್ನು ತೋರಿದರು. ಹೀಗೆ ಮಾಡುವಾಗ ಅವರ ಸಾಹಿತ್ಯ ನಿರ್ಮಿತಿಗೆ ಮೂಲ ಪರಿಕರವಾದದ್ದು ಜನಸಾಮಾನ್ಯರ ಬದುಕು. ಜನಜೀವನವನ್ನು ಹತ್ತಿರದಿಂದ ನೋಡಿ ಅದನ್ನು ತಮ್ಮ ಸಾಹಿತ್ಯದಲ್ಲಿ ಸೂರೆ ಮಾಡಿದರು. ಹಾಗಾಗಿ ಇವರ ಸಾಹಿತ್ಯದಲ್ಲಿ ಸೊಗಸು ಇಮ್ಮಡಿಸಿದೆ ಇವರ ಚಿಂತನೆಯು ಸಾಹಿತ್ಯದಡಿಯಲ್ಲಿ ಪಸರಿಸಿದೆ.

ದಾಸ ಪರಂಪರೆಯ ಪ್ರಮುಖ ಕೀರ್ತನಕಾರರಾದ ಕನಕದಾಸರು ಜನಸಾಮಾನ್ಯ ವರ್ಗದಿಂದ ಬಂದ ಸಂತ ಕವಿ. ಇವರ ಬದುಕಿನ ಹಿನ್ನಲೆ, ಬಾಳಿ ಬದುಕಿದ ವಾತಾವರಣ, ಇವರ ಸಾಹಿತ್ಯಕ್ಕೆ ಹೊಸ ಶಕ್ತಿಯನ್ನು ಹೊಸ ನೆಲೆಯನ್ನು ಒದಗಿಸಿದೆ. ಜನಪದ ಜೀವನದ

ಸಮೃದ್ಧ ಅನುಭವಗಳ ಚಿಂತನೆಯನ್ನು ಅವರಾಡುವ ಭಾಷೆಯಲ್ಲಿಯೇ ರಚಿಸಿರುವುದರಿಂದ ಇವರ ಸಾಹಿತ್ಯ ಸತ್ವಪೂರ್ಣವೂ, ವೈಶಿಷ್ಟ್ಯವೂ ಆಗಿದೆ.

ಕನಕದಾಸರ ಕೀರ್ತನೆಗಳು ಭಾಗವತ ಪಂಥದ ದೃಷ್ಟಿ ಧೋರಣೆಗಳನ್ನು ಹೆಚ್ಚಾಗಿ ಮೈಗೂಡಿಸಿಕೊಂಡು ರಚಿತವಾದ ಸಾಹಿತ್ಯವೆನಿಸಿ ಭಕ್ತಿ, ಜ್ಞಾನ, ವೈರಾಗ್ಯ ಭೋದಿಸುತ್ತವೆ. ಪರಮ ಭಾಗವತರಾದ ದಾಸರ ಕೃತಿಗಳಲ್ಲಿ "ವಿಷ್ಣು ಪಾರಮ್ಯದ ದೃಷ್ಟಿಯೇ ಪ್ರಧಾನವಾದರೂ ಅದು ಕೇವಲ ಪ್ರಚಾರ ಸಾಹಿತ್ಯವಾಗದೆ, ಕಲೆಯಾಗಿ ಮೈವೆತ್ತಿರುವುದರಿಂದ"[೧೯] ಅವರು ಕೀರ್ತನಕಾರರಲ್ಲಿ ಒಂದು ಪ್ರಮುಖ ಸ್ಥಾನವನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಅವರ ಕಾವ್ಯಗಳು ದಟ್ಟವಾದ ಜೀವನಾನುಭವ, ಕೌಶಲಪೂರ್ಣವಾದ ಕತೆಗಾರಿಕೆ, ಮನೋಜ್ಞವಾದ ವರ್ಣನೆಗಳು ಸರಳವೂ, ಸುಲಭವೂ ಆದ ಶೈಲಿ ಒಂದು ವೈಶಿಷ್ಟ್ಯವಾದರೆ, ಇನ್ನೊಂದು ಕಡೆ ಅವರ ಕೀರ್ತನೆಗಳಲ್ಲಿ ಹಾಸು ಹೊಕ್ಕಾಗಿರುವ ಜನಪದ ಜೀವನದ ಬಗೆ ಬಗೆಯ ಅನುಭವಗಳು ಕನಕರ ಹಿರಿಮೆಯನ್ನು ಸಾರುತ್ತವೆ. ಕೀರ್ತನೆಗಳಲ್ಲಿ ಬರುವ ಜನಪದ ಸಂಸ್ಕೃತಿಯ ನೈಜ ಚಿತ್ರಣ ಅವರ ಕೀರ್ತನೆಗಳ ಸತ್ವವನ್ನು ವೈವಿಧ್ಯವನ್ನು ಹೆಚ್ಚಿಸಿವೆ.

ಕನಕದಾಸರು ಸಾಮಾನ್ಯ ವರ್ಗದಿಂದ ಬಂದವರು. ಜನರ ಕಲೆಗಳನ್ನು ಹಾಡುಗಳನ್ನು ಹತ್ತಿರದಿಂದ ಕಂಡವರು, ಕೇಳಿ ನಲಿದವರು, ಜನಪದ ಗೀತೆಯ ಪ್ರಮುಖ ಪ್ರಕಾರಗಳಾದ ಕೋಲಾಟದ ಪದಗಳು, ಡೊಳ್ಳು ಪದಗಳೂ, ತತ್ವಪದಗಳು ಅವರನ್ನು ವಿಶೇಷವಾಗಿ ಆಕರ್ಷಿಸಿವೆ. ಅವುಗಳ ಅರ್ಥ ಸೌಂದರ್ಯಕ್ಕೆ ಲಯ ಮಾಧುರ್ಯಕ್ಕೆ ಅವರು ಮಾರು ಹೋಗಿದ್ದಾರೆ. ಅವರು ವಿರಾಗಿಯಾಗಿ ಭಕ್ತಿ ನೆಲೆಯಲ್ಲಿ ಹಾಡಿದ್ದಾರೆ, ಕುಣಿದ್ದಾರೆ. ಆದುದರಿಂದ ಅವರ ಎಲ್ಲ ಕೀರ್ತನೆಗಳಲ್ಲೂ ಇಂಥ ಜಾನಪದೀಯ ರಚನೆಗಳ ಪ್ರಭಾವ ದಟ್ಟವಾಗಿ ಮೈಗೂಡಿಸಿಕೊಂಡಿದೆ. ವಿವಿಧ ಸಂಪ್ರದಾಯದ ಜನಪದ ಕಲಾಮೇಳಗಳನ್ನು ಹಾಡುಗಾರಿಕೆಯ ಸಂಪ್ರದಾಯಗಳನ್ನು ಅವರು ಬಲ್ಲವರಾಗಿದ್ದರು.

ದಾಸರು ನೀಲಗಾರರ ಸಂಪ್ರದಾಯವನ್ನು ಕಂಡವರು. ಈ ಸಂಪ್ರದಾಯ ಮೈಸೂರು, ಬೆಂಗಳೂರು ಮತ್ತು ಮಂಡ್ಯ ಜಿಲ್ಲೆಯಲ್ಲಿ ಪ್ರಚಲಿತವಾಗಿವೆ. ಮಂಟೇಸ್ವಾಮಿ ಕಾವ್ಯ ಜನಪದ ಕಾವ್ಯವಾಗಿದೆ. 'ನಮ್ಮಮ್ಮ ಶಾರದೆ ಉಮಾಮಹೇಶ್ವರಿ ನಿಮ್ಮೊಳಗಿಹನ್ಯಾರಮ್ಮ' ಎಂದು ಆರಂಭವಾಗುವ ಕೀರ್ತನೆ, ನೀಲಗಾರರ ಸಂಪ್ರದಾಯದಲ್ಲಿದೆ. ಹಾಗಾಗಿ ಮೌಖಿಕ ಮೂಲದ ಜನಪದ ಸಾಹಿತ್ಯದಿಂದ ಬಂದು ಹೆಚ್ಚು ಜನಪ್ರಿಯತೆ ಪಡೆಯಲು ಕಾರಣ ಜನಪದ ಸಂಗೀತದ ಲಯ ಮತ್ತು ಭಾಷೆಯ ಸೊಗಡು ಇಲ್ಲಿನ ಆಕರ್ಷಣೆಗೆ ಕಾರಣವಾಗಿದೆ.

ಕನ್ನಡ ಜನಪದ ಗೀತ ಸಾಹಿತ್ಯದಲ್ಲಿ ಡೊಳ್ಳಿನ ಹಾಡುಗಳಿಗೆ ಒಂದು ಪ್ರಮುಖ ಸ್ಥಾನವಿದೆ. ಡೊಳ್ಳನ್ನು ತಾಳಲಯಬದ್ಧವಾಗಿ ಬಡಿಯುತ್ತ ವೈವಿಧ್ಯಮಯವಾದ ಗೀತೆಗಳನ್ನು ಡೊಳ್ಳು ಮೇಳದಲ್ಲಿ ಹಾಡಲಾಗುತ್ತದೆ. ಸ್ವಾರಸ್ಯಕರವಾದ ಕಥನಗೀತೆಗಳೂ, ಬಿಡಿ ಹಾಡುಗಳೂ ಈ ಮೇಳದಲ್ಲಿ ಉಳಿದು ಬಂದಿವೆ. ಕನಕದಾಸರು ಪ್ರಸಿದ್ಧ ಡೊಳ್ಳಿನ ಪಲ್ಲವಿಯಾದ 'ದೇವಿ

ನಮ್ಮ ದ್ಯಾವರು ಬಂದರು ಬನ್ನಿರೆ ನೋಡ ಬನ್ನಿರೇ' ಎಂಬ ಕೀರ್ತನೆಯಲ್ಲಿ ಬಳಸಿದ್ದಾರೆ. ಈ ಹಾಡನ್ನು ದೀವಳಿಗೆಯಲ್ಲಿ ದೇವರೊಡನೆ ಊರಾಡಲು ಹೋಗುವ ಸಂಪ್ರದಾಯವಿದೆ. ಆಯಾ ದೈವಗಳಿಗೆ ಹೊಂದಿಸಿಕೊಂಡು ಮುಂದೆ ಅನುಕೂಲಕ್ಕೆ ತಕ್ಕಂತೆ ಹಾಡನ್ನು ಬೆಳೆಸಿಕೊಂಡು ಹೋಗುತ್ತಾರೆ. ಕುರುಬರು ಬೀರಪ್ಪನನ್ನು ಕುರಿತಂತೆ ಹಾಡಿದರೆ "ವೈಷ್ಣವ ಮೂಲದ ಭಾಗವಂತಿಕೆ ಮೇಳದವರು ರಂಗನಾಥ, ಗರುಡಾಳ, ಬೇಟೆರಾಯ, ಹನುಮಂತ ಮೊದಲಾದ ದೈವಗಳ ಮಹಿಮೆಯನ್ನು ಕೊಂಡಾಡುತ್ತಾರೆ"[೨೦] ದಾಸರು ತಮ್ಮ ಕೀರ್ತನೆಯಲ್ಲಿ ವಿಷ್ಣುವಿನ ಅವತಾರಗಳನ್ನು ಚಿತ್ರಿಸುವ ಕೊನೆಯ ಪದ್ಯದಲ್ಲಿ ಡೊಳ್ಳು ಪದ ಎಂಬಂತೆ 'ಡೊಳ್ಳು' 'ತಾಳ' ಮತ್ತು ಹಾಡುಗಾರರನ್ನು ಪ್ರಸ್ತಾಪಿಸಿದ್ದಾರೆ.

ಕನಕದಾಸರ ಮೇಲೆ ಡೊಳ್ಳಿನ ಪ್ರಭಾವ ಆದಂತೆಯೇ ಕುರುಬ ಜನಾಂಗದ ಪ್ರಭಾವವೂ ಆಗಿರುವುದು ಅವರ ಕೀರ್ತನೆಗಳಿಂದ ಸ್ಪಷ್ಟವಾಗುತ್ತದೆ.

ನಾವು ಕುರುಬರು ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜ ನರಕುರಿಯ ಹಿಂಡುಗಳ

ಎಂದು ಪಲ್ಲವಿಯೊಡನೆ ಆರಂಭವಾಗುವ ಕೀರ್ತನೆ ಸ್ಪಷ್ಟವಾಗಿ ಕುರಿ ಸಾಕುವ ವೃತ್ತಿಯ ನೇರ ಅನುಭವವನ್ನು ತಂದುಕೊಡುತ್ತದೆ. ಕುರಿ ಸಾಕುವ ಕುರುಬ ತನ್ನ ಕುರಿಗಳ ಜೊತೆ ಮೇಕೆಗಳನ್ನು ಹೊಂದಿರುತ್ತಾನೆ. ಕುರಿಗಳಿಗೆ ತೊಂದರೆ ಕೊಡುವ ತೋಳ ನರಿಗಳಿಂದ ರಕ್ಷಿಸುವವನು ಆದಿಕೇಶವನೆಂಬ ನಮ್ಮಜ್ಜ. ಇಲ್ಲಿ ಕುರಿ ಹಿಂಡಿನ ಪ್ರತಿಮೆ ಆ ವೃತ್ತಿಯ ಸಮಗ್ರ ವಿವರಗಳ ದಟ್ಟ ಅನುಭವವೂ ಇದೆ.

ದಾಸರಿಗೆ ಜೀವನದ ವಿವಿಧ ಕ್ಷೇತ್ರಗಳ ಅನುಭವ ದಟ್ಟವಾಗಿರುವುದು ಅವರ ಕೀರ್ತನೆಗಳಲ್ಲಿ ಕಂಡು ಬರುತ್ತದೆ. 'ಎಲ್ಲಾರು ಮಾಡುವುದು ಹೊಟ್ಟೆಗಾಗಿ' ಎಂಬ ಕೀರ್ತನೆ ಹೊಟ್ಟೆಯ ಪಾಡಿನ ವಿವಿಧ ವೃತ್ತಿಗಳನ್ನು ಸುರುಳಿ ಸುರುಳಿಯಾಗಿ ಬಿಚ್ಚಿ ತೋರಿಸುತ್ತವೆ. ಆಯಾ ಕಸುಬುಗಳ ವೈಶಿಷ್ಟ್ಯವನ್ನು ಕುಂಟೆ, ರಂಟೆ, ಹೆಂಟೆ ಮೊದಲಾದ ವ್ಯವಸಾಯ ಸಂಬಂಧವಾದ ಶಬ್ದಗಳನ್ನು ಬಳಸುವಲ್ಲಿ ಇತರ ದಾಸರಿಗಿಂತ ಭಿನ್ನವಾದ ಅನುಭವ ತಂದು ಕೊಡುತ್ತಾರೆ.

ಇವರ ಕೀರ್ತನೆಗಳಲ್ಲಿ ಜನಪದೀಯ ನೆಲೆಯಲ್ಲಿ ಬರುವ 'ಅಹುದಾದರಹುದೆನ್ನಿ ಅಲ್ಲವಾದರಲ್ಲವೆನ್ನಿ' ಎಂಬ ಪಲ್ಲವಿಯ ಜನಪದ ಗೀತೆಯ ಮಟ್ಟನ್ನು, ಎಲ್ಲಿ ನೋಡಿದರಲ್ಲಿ ರಾಮ ಇದ ಬಲ್ಲ ಜಾಣರ ದೇಹದಲ್ಲಿ ನೋಡಣ್ಣ ಎಂಬ ಪಲ್ಲವಿಯಲ್ಲಿ ತತ್ವ ಪದದ ಬಳಕೆಯಿದೆ. ಹಾಗೆ ಇವರ ಕೀರ್ತನೆಯಲ್ಲಿ ಜನಪದ ಕಲೆಗಳಾದ ಕೋಲಾಟದ ಹಾಡಿನ 'ಕೇರಿ ಕೇರಿ ತಿರುಗುತ್ತಾನೆ ನಮ್ಮ ಕೇರಿಗೇಕೆ ಬರವಲ್ಯೋ' ಎಂಬ ಕೋಲಾಟದ ಪದದ ಭಾಗವನ್ನು ಅಭಿವ್ಯಕ್ತಿಸುತ್ತದೆ. 'ಬಾಯಿ ನಾರಿದ ಮೇಲೆ ಏಕಾಂತವೆ' ಎಂಬ ಕೀರ್ತನೆಯಲ್ಲಿ

ಹಾಗೂ 'ತಾಯಿ ತೀರಿದ ಮೇಲೆ ತೌರಾಸೆಯೆ' ಎಂಬ ಸಾಲಿನ ಮೂಲಕ ತೌರಪದಗಳ ಪ್ರಭಾವ ಎದ್ದು ಕಾಣುತ್ತದೆ. 'ಎಕ್ಕನಾತಿ ಎಲ್ಲಮ್ಮ ಮಾರಿ ದುರ್ಗಿ ಚೌಡಿ' ಎಂಬ ಕೀರ್ತನೆಯಲ್ಲಿ ನಾಡ ದೈವಗಳ ಪ್ರಸ್ತಾಪವನ್ನು ಮಾಡುವುದರ ಜೊತೆಗೆ ಅವುಗಳಿಗೆ ಸಂಬಂಧಿಸಿದ ಬಲಿ ತಂಬಿಟ್ಟಿನ ಆರತಿ ಬೇವಿನುಡುಗೆ ವಿವರಗಳ ಚಿತ್ರಣವಿದೆ.

ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಪ್ರಸ್ತಾಪಿಸಿರುವ ಅನೇಕ ಜಾನಪದ ಅಂಶಗಳ ಸಾಲಿನಲ್ಲಿ ಜನಪದ ಪ್ರದರ್ಶಕ ಕಲೆಯಾದ ಗೊಂಬೆಯಾಟದ ವಿಷಯ ಪ್ರಮುಖವಾದುದು. ಸೂತ್ರದ ಗೊಂಬೆಯಾಟದ ಪ್ರಭಾವ ದಾಸರ ಮೇಲೆ ಪ್ರಭಾವ ಸಾಕಷ್ಟು ಆಗಿದೆ. ದಾಸರು ಇದರ ಬಗ್ಗೆ ಹೆಚ್ಚು ಆಸಕ್ತಿಯನ್ನು ಹೊಂದಿದ್ದಂತೆ ಕಂಡು ಬರುತ್ತದೆ. ಸೂತ್ರದ ಗೊಂಬೆಯ ಒನಪು, ಒಯ್ಯಾರ, ಒಡವೆ–ವಸ್ತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಬೆಳ್ಳಿ ಬಂಗಾರ ಇಟ್ಟುಕೊಂಡು ಒಳ್ಳೆ ವಸ್ತ್ರ ಹೊದ್ದುಕೊಂಡು
ಅಳ್ಳಾಚಾರಿ ಗೊಂಬೆಯಂತೆ ಆಡಿಹೋಯಿತು.

ಇಲ್ಲಿ ಬದುಕು ಎಷ್ಟು ನಶ್ವರವಾದುದು. ಕ್ಷಣಿಕವಾದುದು ಎಂಬುದನ್ನು ವಿಸ್ತರಿಸಿ ಹೇಳಲು ಎತ್ತಿಕೊಂಡಿರುವ ಉದಾಹರಣೆ ತುಂಬ ಅರ್ಥಪೂರ್ಣವಾದುದು. ಚೆನ್ನಾಗಿ ಅಲಂಕಾರ ಮಾಡಿದ ಈ ಗೊಂಬೆ ರಂಗದ ಮೇಲೆ ಕಾಣಿಸಿಕೊಂಡು ತನ್ನ ಪಾತ್ರ ಮುಗಿದ ಕೂಡಲೇ ಮೂಲೆಯಲ್ಲಿ ಒರಗುತ್ತದೆ. ಈ ಅಲಂಕಾರವನ್ನು ಆ ವೈಭವವನ್ನು ಅನಂತರ ಯಾರು ಕೇಳಬೇಕು. ಮಾನವನ ಜೀವನ, ಎಂಬುದು ಸೂತ್ರದ ಗೊಂಬೆಯ ಕ್ಷಣಕಾಲದ ಬದುಕಿನಂತೆ ಎಂಬುದು ತಾತ್ವಿಕತೆ.

ಈ ಕೀರ್ತನೆಯಲ್ಲಿ ಗೊಂಬೆಯಾಟದ ಎಲ್ಲ ಮಜಲುಗಳನ್ನು ಕನಕದಾಸರು ವಿವರಿಸಿದ್ದಾರೆ. ಕತೆಗಾರ, ವಾದ್ಯಗಾರ, ನರಪ್ರತಿಮೆಗಳು, ಮಾಯದ ಐದು ತೆರೆಗಳು, ಅದರಲ್ಲಿ ಪುರವೀದಿಯ ಚಿತ್ರ ಮುಂತಾದ ಅಂಶಗಳು ಕನಕರು ಗೊಂಬೆಯಾಟವನ್ನು ತಮ್ಮ ಊರಿನಲ್ಲಿ ಬಾಲ್ಯದಿಂದಲೇ ನೋಡಿ ಆನಂದಿಸಿರಬೇಕು ಎಂಬ ಅಂಶ ಸ್ಪಷ್ಟಪಡಿಸುತ್ತವೆ.

ಜನಪದ ಸಂಸ್ಕೃತಿಯನ್ನು ಹೀರಿ ಬೆಳೆದ ಕನಕದಾಸರು ಸಹಜವಾಗಿ ತಮ್ಮ ಭಾಷೆಯಲ್ಲಿ ಜಾನಪದ ಮುದ್ರೆಯನ್ನು ಒತ್ತಿದ್ದಾರೆ. ಕೀರ್ತನೆಗಳಲ್ಲಿ ಬಳಕೆಯಾಗಿರುವ ಶಬ್ದಗಳನ್ನು ಅವಲೋಕಿಸಿದರೆ ಜನಪದ ಭಾಷೆಯ ಅಪೂರ್ವ ಪ್ರಯೋಗಗಳು ಗೋಚರಿಸುತ್ತವೆ. ಅಲ್ಲದೆ ಕೀರ್ತನೆಗಳಲ್ಲಿ ದಾಸರು ಗಾದೆಗಳನ್ನು ಬಳಸಿದ್ದಾರೆ. 'ಮಾಣಿಕ್ಯವು ಕೋಡಗನ ಕೈಯಲ್ಲಿ ಇದ್ದಂತೆ', 'ಕೋಣನಿದಿರಿಗೆ ಕಿನ್ನರಿಯ ಮೀಟಿದಂತೆ', 'ಕಾಣದವನಿಗೆ ಕನ್ನಡಿಯ ತೋರಿಸಿದಂತೆ' ಇತ್ಯಾದಿ ಗಾದೆಗಳು ಪ್ರಯೋಗಿಸಲ್ಪಟ್ಟಿವೆ.

ಹೀಗೆ ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಧಾರಾಳವಾಗಿ ಸೂರೆ ಮಾಡಿರುವ ಜನಪದ ಮಟ್ಟುಗಳು, ಹಾಡಿನ ಲಯಗಳು, ಗಾದೆಗಳು, ಸಂಪ್ರದಾಯಗಳು, ಜನಪದ

ಜೀವನದ ವಿವಿಧ ನೆಲೆಗಳ ಚಿತ್ರಣದಿಂದ ಅವರು ತಮ್ಮ ಪರಿಸರಕ್ಕೆ ಋಣಿ ಎಂಬುದನ್ನು ತೋರಿಸುತ್ತವೆ. ಅವರ ಕೀರ್ತನೆಗಳು ಕೇವಲ ಕೇಶವ ಭಕ್ತಿ ಪ್ರಸಾರದ ಜೊತೆಗೆ ಜನಪದ ಜೀವನದ ನಾಡಿಮಿಡಿತವನ್ನು ನಮ್ಮ ಹೃದಯಕ್ಕೆ ಮುಟ್ಟಿಸುವ ಜೀವಂತ ಗೀತೆಗಳೂ ಆಗಿವೆ. ಆ ಮೂಲಕ ಜನರ ನೈತಿಕ, ಸಾಮಾಜಿಕ, ಆಧ್ಯಾತ್ಮಿಕತೆಯ ವಿಚಾರಗಳನ್ನು ತಿಳಿಸಿದ್ದಾರೆ. ಹಾಗಾಗಿ ಅವರ ಸಾಮಾಜಿಕ ಚಿಂತನೆಯ ತತ್ವಗಳು ಜಾನಪದ ಮೌಲ್ಯಗಳಡಿಯಲ್ಲಿ ಅಸ್ತಿತ್ವ ಪಡೆದುಕೊಂಡಿದೆ.

ಹೀಗೆ ಕನಕದಾಸರು ೧೬ನೇ ಶತಮಾನದ ಆದಿಭಾಗದಲ್ಲಿದ್ದವರು. ಕನ್ನಡ ನಾಡಿನ ಸಾಮಾಜಿಕ ಜೀವನವನ್ನು ಅತ್ಯಂತ ನಿಕಟವಾಗಿ ನೋಡಿ ಕಂಡು ಅನುಭವಿಸಿ, ಅದರ ಅಂತರಾಳದಲ್ಲಿ ಜೀವಂತವಾಗಿದ್ದ ಅನಿಷ್ಟ ಮೌಲ್ಯಗಳ, ವಿಷವರ್ತುಲದ ಬಗ್ಗೆ ವಿವಿಧ ಮಜಲುಗಳಲ್ಲಿ ಜನತೆಯನ್ನು ಎಚ್ಚರಿಸಿದ್ದಾರೆ. ಪರಂಪರಾಗತವಾಗಿ ಬಂದಂತಹ ಸಮಾಜ ಒಪ್ಪಿತ ಮೌಲ್ಯಗಳಲ್ಲದ, ಸಾಮಾಜಿಕ ಪ್ರಗತಿಗೆ, ಶಾಂತಿಗೆ ಭಂಗ ತರುವ ಮೌಲ್ಯಗಳ ವಿರುದ್ಧ ಸಿಡಿದಿದ್ದಾರೆ. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಪೂರಕವಾದ ಸತ್‌ಮೌಲ್ಯಗಳನ್ನು ಎತ್ತಿ ಹಿಡಿದು, ಜನಮನದಲ್ಲಿ ಅವು ನೆಲೆಗೊಳ್ಳುವಂತೆ ಪ್ರಯತ್ನಿಸಿದ್ದಾರೆ.

ಅಂದಿನ ಕಾಲದ ವಾತಾವರಣದಲ್ಲಿ ದಾಸರ ಚಿಂತನೆಗಳು ಜನಮನದ ಮೇಲೆ ಸಂಪೂರ್ಣವಾಗಿ ಪ್ರಭಾವ ಬೀರಲು ಸಾದ್ಯವಾಗದಿದ್ದರೂ, ಅದರಲ್ಲಿನ ದೋಷಗಳನ್ನು ಕಂಡು ಪರಿಹಾರಗಳನ್ನು ಸೂಚಿಸಿದರು. ಅವರ ತಾತ್ವಿಕ ಚಿಂತನೆಯು ಒಂದು ದೇವರನ್ನು ಕುರಿತಿದ್ದರೆ, ಇನ್ನೊಂದು ಸಾಮಾಜಿಕ ನೆಲೆಯನ್ನು ಕುರಿತದ್ದಾಗಿದೆ. ಸಾಮಾಜಿಕ ನೆಲೆಯ ವ್ಯಾಪ್ತಿಯಲ್ಲಿ ಭಕ್ತಿಯೂ, ಭಗವಂತನೂ ಕೂಡ ತನ್ನ ಅಸ್ತಿತ್ವವನ್ನು ಪಡೆದುಕೊಳ್ಳುವುದರಿಂದ ದಾಸರ ಚಿಂತನೆಯ ಪರಿಧಿಯಲ್ಲಿ ಭಕ್ತಿಯೂ ಕೂಡ ಮುಖವಾಗುತ್ತದೆ. ಹೀಗೆ ಸಾಮಾಜಿಕ ನೆಲೆ ಮತ್ತು ಭಕ್ತಿ ನೆಲೆಗಳೆರಡು ಜನಮಾನಸದ ವಾತಾವರಣದಲ್ಲಿಯೇ ತಮ್ಮ ಸ್ವರೂಪವನ್ನು ವಿಕಸಿಸಿಗೊಳ್ಳುತ್ತವೆ. ಈ ಅಡಿಯಲ್ಲಿ ಜಾನಪದೀಯ ಮೌಲ್ಯಗಳು ಕೂಡ ದಾಸರ ಚಿಂತನೆಯ ನೆಲೆಯಲ್ಲಿ ಪ್ರಮುಖವಾಗುತ್ತದೆ. ಈ ಎಲ್ಲಾ ನೆಲೆಗಳು ಜನಮಾನಸದ ಸಮೀಪವನ್ನು ತಲುಪಲು ಅವರಾಡುವ ಭಾಷೆಯನ್ನೇ ಬಳಸಿಕೊಂಡು ದಾಸರು ಕೀರ್ತನೆಗಳನ್ನು ರಚಿಸಿದ್ದಾರೆ. ಈ ಕೀರ್ತನೆಗಳು ಕಾವ್ಯ ಮೌಲ್ಯವನ್ನು ಹೊಂದಿರುವುದರಿಂದ ಅವು ಸತ್ವಪೂರ್ಣವಾಗಿ, ಭಾವಭರಿತವಾಗಿ ಜನಮನ ತಣಿಸುವಲ್ಲಿ ಯಶಸ್ವಿಯಾಗಿವೆ. ಹಾಗಾಗಿ ಸಾಮಾಜಿಕ ಚಿಂತನೆಯಡಿಯಲ್ಲಿ ಭಕ್ತಿಮೌಲ್ಯ, ಜಾನಪದಮೌಲ್ಯ, ಕಾವ್ಯ ಮೌಲ್ಯ, ಸಾಮಾಜಿಕ ಮೌಲ್ಯಗಳು ತನ್ನ ನೆಲೆಯನ್ನು ಗುರುತಿಸಿಕೊಂಡಿವೆ.

ಅಡಿಟಿಪ್ಪಣಿಗಳು

೧. ಹೆಚ್.ಜೆ. ಲಕ್ಕಪ್ಪಗೌಡ – ಸಾಹಿತ್ಯ ಬಹುಮುಖಿ ಚಿಂತನೆ – ಪುಟ ಸಂ. ೪೫೯

೨. ಅದೇ.................. ಪುಟ ಸಂ. ೪೭೯

೩. ಅದೇ.................. ಪುಟ ಸಂ. ೪೭೯

೪. ಅದೇ.................. ಪುಟ ಸಂ. ೪೪೯

೫. ಅದೇ.................. ಪುಟ ಸಂ. ೪೪೯

೬. ಅದೇ.................. ಪುಟ ಸಂ. ೪೫೮

೭. ಅದೇ.................. ಪುಟ ಸಂ. ೪೫೯

೮. ಪ್ರೋ. ವಸಂತಕುಷ್ಟಗಿ – ಕನಕ ಸಾಹಿತ್ಯದಲ್ಲಿ ಭಕ್ತಿ ಸ್ವರೂಪ – ಕನಕವಾಲೋಕನ ಪುಟ ಸಂ. ೫೯

೯. ಅದೇ.................. ಪುಟ ಸಂ. ೯೦೦

೧೦. ಅದೇ.................. ಪುಟ ಸಂ. ೯೦೩

೧೧. ಅದೇ.................. ಪುಟ ಸಂ. ೯೦೫

೧೨. ಹೆಚ್.ಜೆ. ಲಕ್ಕಪ್ಪಗೌಡ – ಸಾಹಿತ್ಯ ಬಹುಮುಖಿ ಚಿಂತನೆ ಪುಟ ಸಂ. ೪೪೨

೧೩. ಅದೇ.................. ಪುಟ ಸಂ. ೪೪೩

೧೪. ಅದೇ.................. ಪುಟ ಸಂ. ೪೪೪

೧೫. ಅದೇ.................. ಪುಟ ಸಂ. ೪೪೫

೧೬. ಅದೇ.................. ಪುಟ ಸಂ. ೪೪೬

೧೭. ಅದೇ.................. ಪುಟ ಸಂ. ೪೪೬

೧೮. ಅದೇ.................. ಪುಟ ಸಂ. ೪೪೬

೧೯. ಡಾ. ಜಿ.ಶಂ. ಪರಮಶಿವಯ್ಯ – ಕನಕದಾಸರ ಕೃತಿಗಳಲ್ಲಿ ಜಾನಪದ ಅಂಶಗಳು – ಕನಕಾವಲೋಕನ – ಪುಟ ಸಂ. ೧೯೮

೨೦. ಅದೇ.................. ಪುಟ ಸಂ. ೨೦೦

ಅಧ್ಯಾಯ ೩

ಕನಕದಾಸರ ಕೀರ್ತನೆಗಳಲ್ಲಿ ಬಂಡಾಯ

ಕನ್ನಡ ಸಾಹಿತ್ಯ ಅನಾವರಣಗೊಳ್ಳುವುದೇ ಬಂಡಾಯದ ಹಿನ್ನೆಲೆಯಲ್ಲಿ ವೈದಿಕಕ್ಕೆ ಪ್ರತಿಭಟನೆಯಾಗಿ ಬಂದ ಜೈನ ಕವಿಗಳು, ಸಂಸ್ಕೃತ ಬಿಟ್ಟು ಜನಭಾಷೆಯಾದ ಕನ್ನಡವನ್ನು ಎತ್ತಿಕೊಂಡಿದ್ದು ಧಿಕ್ಕಾರ ಮನೋಭಾವದಿಂದ. ಮುಂದೆ ರಾಜರ ಅರಸೊತ್ತಿಗೆಯ ಪರಾಕಿಗೆ ಪ್ರತಿಭಟನೆಯಾಗಿ ವಚನ ಸಾಹಿತ್ಯ ಹುಟ್ಟಿತು. ಇದರ ನಂತರ ಕೀರ್ತನಕಾರರಲ್ಲಿ ಕಾಣುವ ಜನಮುಖಿ ನಿಲುವು. ಈ ಸ್ಥಿತ್ಯಂತರದಲ್ಲಿ ಕಾಣಿಸಿಕೊಂಡ ಪ್ರಮುಖ ಬಂಡಾಯಗಾರರಲ್ಲಿ ಕನಕದಾಸರು ಒಬ್ಬರು.

ಬಂಡಾಯ ಪರಿಕಲ್ಪನೆ ಚರಿತ್ರೆಯುದ್ದಕ್ಕೂ ಕಾಲತ್ರಯಗಳಲ್ಲಿ ದಾಖಲಾಗಿರುವ, ಮುಂದೆ ದಾಖಲಾಗುವ ವಾಸ್ತವ ಸತ್ಯ. "ಪ್ರಜೆಗಳು ಪ್ರಭುಗಳ ವಿರುದ್ಧ, ಕೆಳವರ್ಗದವರು ಮೇಲ್ವರ್ಗದವರ ವಿರುದ್ಧ, ಗುಲಾಮರು ಯಜಮಾನರ ವಿರುದ್ಧ, ಭಕ್ತರು ಮಠಗಳ ವಿರುದ್ಧ, ಶೋಷಿತರು ಶೋಷಕರ ವಿರುದ್ಧ ಬಂಡಾಯ ಧ್ವನಿ ಸರ್ವೆ ಸಾಮಾನ್ಯ. ಮನುಷ್ಯನಿಗೆ ಎಲ್ಲೆಲ್ಲಿ ತನ್ನ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗಿದೆಯೆನಿಸಿದೆಯೋ ಅಲ್ಲೆಲ್ಲ ಅವಕಾಶ ದೊರೆತಾಗ ಪ್ರತಿಭಟನೆ ಪ್ರಕಟವಾಗಿದೆ"[೧] ಯಾವುದೇ ಒಂದು ಮಾನವ ಸಮಾಜದ ಸೃಜನಾತ್ಮಕ ಉತ್ಪಾದನೆಯಲ್ಲಿ ಸಾಹಿತ್ಯವು ಒಂದು. ಎಲ್ಲಾ ಕಾಲದ ಎಲ್ಲಾ ಭಾಷೆಗಳ ಸಾಹಿತ್ಯದಲ್ಲೂ ಪ್ರತಿಭಟನೆಯ ದನಿಯಿರುತ್ತದೆ. "ಕವಿಯೂ ನಮ್ಮೆಲ್ಲರಂತೆ ಮೂಲಭೂತವಾಗಿ ಒಬ್ಬ ಸಮಾಜಜೀವಿ. ಅವನ ಎಲ್ಲಾ ಸಂವೇದನೆಗಳು ಭಾಷೆಯ ಮಾಧ್ಯಮದಲ್ಲಿ ಹೊರ ಬರಬೇಕೇ, ಹೊರತು ಶೂನ್ಯದಲ್ಲಿ ವ್ಯವಹಾರವಾಗುವುದಿಲ್ಲ"[೨] ತನ್ನ ಸಮಾಜದ ಸಂಬಂಧದಲ್ಲಿ ಗ್ರಹಿಸಿದ್ದನ್ನು ಕವಿ ಪ್ರಜ್ಞೆ ಅಭಿವ್ಯಕ್ತಿ ಪಡಿಸುತ್ತದೆ.

ಬಂಡಾಯ ಧೋರಣೆಯ ಹಿನ್ನೆಲೆಯಲ್ಲಿ "ಕನ್ನಡ ಸಾಹಿತ್ಯದ ಬಹುಪಾಲು ಕವಿಗಳು ಸಮಾಜದ ವ್ಯವಸ್ಥೆಯೊಡನೆ ಸಂಘರ್ಷಕ್ಕಿಳಿಯದೆ ಬೆರೆತು ರಾಜಿಯಾದವರೇ ಹೆಚ್ಚು"[೩] ತಮಗೂ ಸಮಾಜದ ಸ್ಥಿತಿಗೂ ನಡುವೆ ಕಂದಕವಿದೆಯೆಂದು ಬಹಪಾಲು ಕವಿಗಳಿಗೆ ಅನಿಸಿಲ್ಲ. ಜೀವನದ ಹಾದಿಯ ಇಕ್ಕಟ್ಟಿನಲ್ಲಿ ಸಾಗುತ್ತಿರುವಂತೆ ಅಥವಾ ತಮ್ಮ ಸುತ್ತ ಮನುಷ್ಯನನ್ನು ಕಾರುಣ್ಯರಹಿತವಾಗಿ ಹಿಂಸಿಸುವ ಮನೋವೇದನೆ ಅವರ ಪ್ರಜ್ಞೆಗೆ ಬರದೆ ಹೋಗಿರಬಹುದು. ಹೀಗಿದ್ದೂ ತನ್ನ ಸಮಾಜಕ್ಕೆ ಮುಖಾಮುಖಿಯಾಗಿ ಒಂದು ಬದ್ಧತೆಯಿಂದ ಮುಖ್ಯವಾದ ನೆಲೆಯಲ್ಲಿ ನಿಂತು ಸಂವಾದಿಸಿರುವಂತೆ ತೋರುವ ಬಂಡಾಯ ಕಿಡಿಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಪರಿಭಾವಿಸಿ ಪರಿಶೀಲಿಸಿದಾಗ ಕನಕದಾಸರು "ಹಿಂಡನಗಲಿದ ಒಂಟಿ ಸಲಗನಂತೆ"[೪] ಕಾಣುತ್ತಾರೆ. ಅವರು ತಮ್ಮ ಕಾಲದ ವಾಸ್ತವಿಕ ಬದುಕನ್ನು ಅರ್ಥ ಮಾಡಿಕೊಂಡು ಸ್ಪಂದಿಸಿರುವ ಪ್ರತಿಕ್ರಿಯಿಸಿರುವ ರೀತಿ ವಿಶ್ಲೇಷಣಾರ್ಹ ಶ್ರೇಣಿಕೃತ ವ್ಯವಸ್ಥೆಯಲ್ಲಿ

ಕೆಳಗಿನ ಸ್ತರವೆಂದು ಹೇಳುವ ಜಾತಿಯಿಂದ ಬಂದ ಕನಕದಾಸರು ೫೦೦ ವರ್ಷಗಳ ಹಿಂದೆ ಕನ್ನಡದಲ್ಲಿ ಸಾಹಿತ್ಯ ರಚಿಸಿರುವುದೇ ಒಂದು ದೊಡ್ಡ ಪವಾಡ. ಅಕ್ಷರಗಳನ್ನು ಶೂದ್ರಾದಿಗಳಿಗೆ ಬಿಟ್ಟು ಕೊಡಬೇಕಾದ ಅನಿವಾರ್ಯ ಬಂದದ್ದು, ಇತ್ತೀಚಿನ ದಿನಗಳಲ್ಲಿ ಎಂದಾದ ಮೇಲೆ ಆ ಕಾಲಘಟ್ಟದಲ್ಲಿ ಕನಕದಾಸರು ವಿದ್ಯೆಗಾಗಿ ಅದೆಷ್ಟೊ ಕಷ್ಟ ಅನುಭವಿಸಿದರೆಂಬುದನ್ನು ಊಹಿಸ ಬಹುದಾಗಿದೆ. ಹಾಗಾಗಿ ಸಾಮಾಜಿಕ ಅಸಮಾನತೆಯ ವಿರುದ್ಧ ಕನಕದಾಸರು ಕಟುವಾದ ಧೋರಣೆ ಉಳ್ಳವರಾಗಿದ್ದರು.

ಕನಕದಾಸರ ಜೀವನವೇ ಒಂದು ಬಂಡಾಯ. ಶೂದ್ರ ಪರಂಪರೆಯ ಹಿನ್ನೆಲೆಯಲ್ಲಿ ಬಂದ ಇವರು ಪರಂಪರಾಗತ ಮೌಲ್ಯಗಳ ವಿರುದ್ಧ ದನಿಯೆತ್ತಿದವರು. ಅದರಲ್ಲೂ ಜಾತಿ, ಕುಲ ವ್ಯವಸ್ಥೆಯ ಮೂಲ ನೆಲೆಯ ಬಗ್ಗೆ ಮಾರ್ಮಿಕವಾಗಿ ನುಡಿದವರು. ಕುಲದ ನೆಲೆಯ ಬಗ್ಗೆ ಈ ಹಿಂದೆ ಪಂಪ ಕರ್ಣನ ಪಾತ್ರದ ಮೂಲಕ ಕುಲಸಂಬಂಧವಾದ ಪರಿಕಲ್ಪನೆಯನ್ನು ವೈಚಾರಿಕವಾಗಿ ವಿವೇಚಿಸಿದ್ದಾನೆ. ಸಾಟಿಯಿರದಂಥ ಲೋಕವೀರರಾದ ಕರ್ಣ, ಏಕಲವ್ಯರನ್ನು ಕಾಡಿನ ಜಾತಿ ಕುಲದ ರೋಗ ಕನಕರನ್ನು ಕಾಡಿದೆ. ಕರ್ಣನಂತೆ ಕನಕರೂ ಜಾತಿವಾದಿಗಳ ಜುಟ್ಟು ಜನಿವಾರ ಹಿಡಿದು ಗೊಡ್ಡು ಸಂಪ್ರದಾಯವಾದಿಗಳು ಉತ್ತರಿಸಲಾಗದಂತೆ ಮೂಲಭೂತ ನೇರ ಪ್ರಶ್ನೆಗಳನ್ನು ಹೇಳಿದ್ದಾರೆ.

ಕುಲ ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ
ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಜನಾಭನಿಗೆ ಅರ್ಪಿಸಲಿಲ್ಲವೆ!
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು
ವಸುಧೆಯೊಳಗೆ ಭೂಸುರರುಣ್ಣಲಿಲ್ಲವೆ?
ಮೃಗಗಳ ಮೈಯಲ್ಲಿ ಪುಟ್ಟಿದ ಕಸ್ತೂರಿ
ತೆಗೆದು ಪೂಸುವರು ಭೂಸರರೆಲ್ಲರು
ಬಗೆಯಿಂದ ನಾರಾಯಣನ್ಯಾವ ಕುಲದವ
ಅಗಜವಲ್ಲಭನ್ಯಾತರ ಕುಲದವನು
ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯಾ
ಆತ್ಮಾಂತರಾತ್ಮ ನೆಲೆಯಾದಿ ಕೇಶವ
ಆತನೊಲಿದ ಮೇಲೆ ಯಾತರ ಕುಲವಯ್ಯಾ

ಕುಲವೆನ್ನುವುದು ಭಾರತೀಯ ಪರಂಪರೆಯಲ್ಲಿ ಮೈಗಂಟ್ಟಿದ ಚರ್ಮದಂತಿದೆ.

ಇದನ್ನು ಚಿನ್ನದ ಕರವಸ್ತ್ರದಲ್ಲಿ ಒರೆಸಿದರೂ ಆದು ಹೋಗಲೊಲ್ಲದು, ಕುಲವೆಂಬ ಸೀಗೆ ಮೆಳೆಯಿಂದ ಬಿಡಿಸಿಕೊಳ್ಳುವುದು ಕಷ್ಟ. ದೇವರೇ ಪ್ರತ್ಯಕ್ಷ ಬಂದರೂ, ನೀನು ಯಾವ ಜಾತಿ ದೇವರು ಎಂದು ಪ್ರಶ್ನೆ ಮಾಡುವ ಮನೋಧೋರಣೆಯುಳ್ಳ ಜನರಿದ್ದಾರೆ. ದೇವರನ್ನು ಬಿಡದ ಈ ಜಾತಿ ಕಲ್ಪನೆಯ ಸೂತಕ ಇನ್ನೂ ಸಾಮಾನ್ಯ ಜನರನ್ನು ಬಿಡದೆ ಕಾಡಿದೆ. ಕನಕದಾಸರಂಥ ಮಹಾತ್ಮರನ್ನು ಕಾಡದೆ ಬಿಟ್ಟಿಲ್ಲ. ವೈದಿಕ ಪರಂಪರೆಯ ರೀತಿ ರಿವಾಜುಗಳು ಮಹಾಸಂಯಮಿಯೂ, ಮಹಾಜ್ಞಾನಿಯೂ ಕಡೆಗೆ ರೋಸಿಹೋಗಿ ತೀಕ್ಷ್ಣವಾದ ಖಾರವಾದ ಉತ್ತರ ಕೊಡಬೇಕಾದ ಸನ್ನಿವೇಶ ನಿರ್ಮಾಣವಾಗುತ್ತದೆ. ಕನಕರು ಸಹ ತಲೆ ಬುಡವಿಲ್ಲದ ಅಪ್ರಜ್ಞಾರಹಿತವಾದ ಇಂಥ ಮೌಲ್ಯಗಳಿಗೆ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಈ ಪ್ರತಿಕ್ರಿಯೆಗಳಿಗೆ ಎಂಥ ವಿಮರ್ಶಕರು ವಿವರಣೆ ಕೊಟ್ಟರು ಸಾಕಾಗುವುದಿಲ್ಲ.

ಕುಲಕುಲವೆಂದು ಪ್ರಶ್ನಿಸುವ ಮೌಲ್ಯರಹಿತ ಜನರಿಗೆ ನೇರವಾಗಿ ಪ್ರಶ್ನೆ ಮಾಡಿದ್ದಾರೆ. ಸತ್ಯವಂತ ಜನರಿಗೆ ಕುಲದ ನೆಲೆಯಿದೆಯೆ? ಎಂದು ಪ್ರಶ್ನಿಸುವ ಮೂಲಕ ಸಂಪ್ರದಾಯ ಶರಣ ಸಮಾಜಕ್ಕೆ ಸವಾಲೆಸೆಯುತ್ತಾರೆ. “ತಾವರೆ ಕೆಸರಿನಲ್ಲಿ ಹುಟ್ಟುತ್ತದೆಯಾದರೂ ಅದನ್ನು ದೇವರಿಗೆ ಅರ್ಪಿಸುತ್ತೇವೆ. ಹಸುವಿನ ಮಾಂಸ ಮೂಲದಿಂದ ಬರುವ ಹಾಲು ಭೂಸುರರ ಉಪಯೋಗದಿಂದ ತನ್ನ ಮೂಲದ ಅಶುದ್ದಿತ್ವವನ್ನು ಕಳೆದುಕೊಳ್ಳುತ್ತದೆ. ಹಾಗೆಯೇ ಕಸ್ತೂರಿ ಮೃಗದ ಪರಿಮಳವು ಅದರ ಮೂಲ ನೆಲೆಯಿಂದ ಹೊರಬಂದು ಹೊಸದೊಂದು ಸ್ಥಾನ ಪಡೆದುಕೊಳ್ಳುತ್ತದೆ. ಹಾಗೆ ನೋಡುತ್ತಾ ಹೋದರೆ ನಾರಾಯಣ ಯಾವ ಜಾತಿ? ಈಶ್ವರ ಯಾವ ಜಾತಿ? ಜಾತಿ ಜಾತಿ ಎಂದು ಉಯಿಲೆಬ್ಬಿಸುವವರ ಆತ್ಮ ಯಾವ ಜಾತಿ? ಜೀವ ಯಾವ ಜಾತಿ ಎಲ್ಲ ಕಡೆ ಹರಿಯುವ, ಗ್ರಹಿಸುವ ಸ್ಪರ್ಶಿಸುವ ಅನುಭವಿಸುವ ಇಂದ್ರಿಯಗಳು ಯಾವ ಜಾತಿ”[೫] ಎಂದು.

ಹೀಗೆ ದಡದಡನೆ ಎರಗುವ ಸಿಡಿಲಿನ ಹೊಡೆದಂತೆ ಪುಂಖಾನುಪುಂಖವಾಗಿ ಚಿಮ್ಮುವ ದಾಸರ ಈ ಮೊನಚಾದ ತೀಕ್ಷ್ಣವಾದ ಪ್ರಶ್ನೆಗಳು ಉತ್ತರಿಸಲಾಗದಂಥ ವಾಸ್ತವ ನೈಜ ಸತ್ಯಗಳಾಗಿವೆ. ವಿವೇಕವುಳ್ಳ ಮನುಷ್ಯನಾದರೂ ಇವುಗಳ ಗಟ್ಟಿ ಸತ್ಯವನ್ನು ಅರ್ಥಮಾಡಿಕೊಂಡು ತನ್ನ ಮನದ ಮೂಲೆಯಲ್ಲಿ ಹೊಂಚು ಹಾಕುವ ಅಸಹಜವೂ, ಅನರ್ಥಕಾರಿಯೂ, ವಿಚಾರ ರಹಿತವೂ ಆದ ಜಾತಿ ಭಾವನೆಯನ್ನು ಕಿತ್ತೆಸೆಯುವಂತೆ ಪ್ರೇರೆಪಿಸುವ ಸಾಮರ್ಥ್ಯ ಈ ಕೀರ್ತನೆಗಿದೆ.

ಉತ್ತಮ ಕುಲದವರೆಂದು ಖ್ಯಾತರಾದವರ ಮೂಲವನ್ನು ಕೆದಕುವ ಮೂಲಕ ಅವರ ಅಜ್ಞಾನಕ್ಕೆ, ಭ್ರಾಂತಿಗೆ ಕೊಡಲಿಪೆಟ್ಟು ಕೊಟ್ಟು ಜಾತಿ ಮದವನ್ನು ಇಳಿಸಿದ್ದಾರೆ. ಅವರ ಮನದಲ್ಲಿ ಈ ಜಾತಿಯ ಬಗೆಗಿನ ರೊಚ್ಚು ಹೇಗೆ ಕಿಡಿಯಾಗಿ ಸಿಡಿದಿವೆ ಎಂಬುದು ಈ ಸಾಲುಗಳಿಂದ ಸಾಭೀತಾಗುತ್ತದೆ. ಸಮಾಜದಲ್ಲಿ ದಾಂಧಲೆ, ಜಗಳ, ರಕ್ತಪಾತದ ಆವೇಶದ ದಾರಿಯನ್ನು ಬಿಟ್ಟು, ಪರಸ್ಪರ ವಿಚಾರ ಅರಿವುಗಳ ಮೂಲಕ ಜಾತಿಯೆಂಬುದೆ ಹೊಲಸು ಎಂಬ ಸತ್ಯವನ್ನು ಪರಿಣಾಮಕಾರಿಯಾಗಿ ಬಿಂಬಿಸಿದ್ದಾರೆ. ಕೇವಲ ಜಾತಿಯ ಕಾರಣದಿಂದಲೇ

ಲೋಕದಲ್ಲಿ ಯಾರು ಮಹಾನುಭಾವರಾಗಿ ಬೆಳೆಯದೆ, ಅವರ ಜ್ಞಾನ ಪರಿಶ್ರಮ ಪರಿಶುದ್ಧ ಹೃದಯ ಸಾಧನೆಗಳಿಂದ ಮಾತ್ರ ವಿಭೂತಿ ಪುರುಷರಾಗಿ ಮೆರೆಯುವರೆಂಬುದನ್ನು ಬುದ್ಧಿಗಮ್ಯವಾಗಿ, ಹೃದಯವಿಹಂಗಮವಾಗಿ ಮೂಡಿಸುವ ಮೂಲಕ ಈ ಜಾತಿ ವಿನಾಶ ಮಾಡಬಹುದೆಂಬ ಭಾವನೆಯನ್ನು ಕನಕದಾಸರ ಕೀರ್ತನೆಗಳು ಸತ್ವಪೂರ್ಣವಾಗಿ ಸೂಚಿಸುತ್ತವೆ.

ಕನಕದಾಸರದು ಬಂಡಾಯದ ನೆಲೆ. ಅವರಿಗೆ ಎದುರಾದ ಅಡ್ಡಿ ಆತಂಕಗಳ ಪರಿಸ್ಥಿತಿಯಿಂದ ಅವರ ಕಠಿಣ ಪರಿಸ್ಥಿತಿ ಮತ್ತೆ ಮತ್ತೇ ಸಣ್ಣ ಪುಟ್ಟವರಿಂದ, ಮೂರ್ಖರಿಂದ ಪರೀಕ್ಷೆಗೆ ಒಳಗಾಗಿದ್ದಾರೆ. ಅದಕ್ಕೆ ಪ್ರತಿಯಾಗಿ ಸ್ಥಿತಿ ವೈದಿಕ ಪರಂಪರೆಯ ಹಿನ್ನೆಲೆಯಲ್ಲಿ "ಶೂದ್ರನೊಬ್ಬ ಗುರುಪರಂಪರೆಗೆ ತಲುಪಬೇಕಾದಲ್ಲಿ ನಿರ್ವಹಿಸಲೇ ಬೇಕಾದ ಪವಾಡ ಸದೃಶ ಜೀವನ ನಿರ್ಮಿತಿ ಪ್ರಕ್ರಿಯೆ ಇದರ ಪರಿಣಾಮವೆಂಬಂತೆ ಕನಕದಾಸರು ತಮಗೆ ಎದುರಾದ ತಾತ್ವಿಕ ಅರ್ಹತೆ ಅಥವಾ ನೆಲೆ ಆ ಅಮೂರ್ತ ಸ್ವರೂಪವನ್ನು ಒಡೆಯಲು ಕುಲದ ಮೂಲ ಎಂಬ ಸಾಮಾಗ್ರಿಯೊಡನೆ ಎದ್ದು ನಿಲ್ಲುತ್ತಾರೆ."[೬]

ಕುಲ ಕುಲವೆಂದು ಹೊಡೆದಾಡುವಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ
ಹುಟ್ಟಿದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದಾ ವಸ್ತುಗಳಿಲ್ಲ
ಗುಟ್ಟುಕಾಣಿಸೆ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞ ನೆನೆಕಂಡ್ಯ ಮನುಜಾ
ಜಲವೇ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀ ದೇಹ
ನೆಲೆಯರಿತು ನೀ ನೆನೆಕಂಡ್ಯ ಮನುಜಾ
ಹರಿಯೇ ಸರ್ವೋತ್ತಮ ಹರಿಯೇ ಸರ್ವೇಶ್ವರ
ಹರಿಮಯವಲ್ಲವೆನುತ ತಿಳಿದು
ಸಿರಿತಾನಾಗಿ ನೆಲೆಯೂರಿ ಕೇಶವರಾಯನ
ಚರಣ ಕಮಲವನೇ ಅರ್ಚಿಸುವನೇ ಕುಲಜ

ಈ ಕೀರ್ತನೆಯಲ್ಲಿ ಕುಲಕ್ಕಾಗಿ ಕಲಹವೆಬ್ಬಿಸುವ ಕಾದಾಡುವ ಜನರಿಗೆ ಕನಕದಾಸರು ಕೇಳಿದ ಪ್ರಶ್ನೆ ಒಂದೆ ಅದರ ನೆಲೆಯನೆನಾದರೂ ಬಲ್ಲಿರಾ? ಎಂದು ಕುಲದ ಮೂಲ ನೆಲೆಯನ್ನು ಶೋಧಿಸಿದ್ದಾರೆ. ಪ್ರಾಕೃತಿಕ ಸೊಬಗನಲಿ ಸಿಗದ ಕುಲದ ಕಲ್ಪನೆ, ಪ್ರಕೃತಿಯ

ಕೂಸಾದ ಮಾನವಲ್ಲಿರುವುದು ವಿಪರ್ಯಾಸ ಎಂದಿದ್ದಾರೆ. ಈ ಕುಲದ ಪರಿಕಲ್ಪನೆ ಕೆಳವರ್ಗ, ಅದರಲ್ಲೂ ಕೆಳಜಾತಿಯ ಸಾದು, ಸಂತ, ಸಾಹಿತಿ ಸಾಧಕರನ್ನು ಅಡಿಗಡಿಗೂ ಕಾಡಿದೆ. ಹಾಗಾಗಿ ವಚನ ಕಾಲದಲ್ಲಿ "ನೂರಾರು ದಲಿತರು ಬಸವಣ್ಣನವರಲ್ಲಿ ಶರಣಾದರು. ಹತ್ತಾರು ರಾಜರು ರಾಮಾನುಜರಲ್ಲಿ ವೈಷ್ಣವರಾದರು. ಏಕೆಂದರೆ ಬುದ್ದಿ ಬಲ, ಹಣಬಲ, ಅಧಿಕಾರಬಲ, ಅಂತಸ್ತಿನ ಬಲಗಳು ಕುಲದ ಮುಂದೆ ಕೀಳಾಗಿದ್ದವು"[೭] ಆದರೆ ಕನಕದಾಸರಿಗೆ ತುಂಬಾ ಕಾಡಿದ ಚಿಂತನೆ ವೃತ್ತಿಯಿಂದ ಒಡೆಯನಾದರೂ, ಪ್ರವೃತ್ತಿಯಿಂದ ಪಂಡಿತನಾದರೂ, ಎಲ್ಲಾ ತ್ಯಜಿಸಿ ದಾಸನಾದರೂ ಈ ಕುಲ ಬಿಡಲಿಲ್ಲ. ಹತ್ತಾರು ತಡೆಗೋಡೆಗಳನ್ನು ನಿರ್ಮಿಸಿ ಕಾಡಿಸಿತು. ಹಾಗಾಗಿ ಕುಲದ ಮೇಲೆ ವ್ಯಕ್ತಿಯ ಹುಟ್ಟು, ಬೆಳವಣಿಗೆ, ಬುದ್ಧಿ ಸಾಧನೆ ಸಿದ್ದಿಗಳನ್ನು ತಿಳಿಯುವುದು ಮತ್ತು ಅಳೆಯುವುದು ಅತ್ಯಂತ ಅಪಾಯಕಾರಿ. ವ್ಯಕ್ತಿ ಮತ್ತು ವಸ್ತುಗಳ ಗುಣಶೀಲತೆಗಳು ಅವುಗಳ ಸಾಮರ್ಥ್ಯದ ಮೇಲೆ ನಿಂತಿರುವುದನ್ನು ಕನಕದಾಸರು ಪ್ರಬಲವಾಗಿ ಸಮರ್ಥಿಸುತ್ತಾರೆ.

ತಾನು ಅವನು ಎಂಬ ಭೇದ ಭಾವ ಹುಟ್ಟಿದ್ದೆ ಕುಲದ ನೆಲೆಯಲ್ಲಿ. ತನ್ನ ಕುಲ ಶ್ರೇಷ್ಠ ಪರರ ಕುಲ ಕನಿಷ್ಟ ಎಂಬುದು ಸರ್ವಥಾ ಸರಿಯಲ್ಲ. ಹೊನ್ನು, ಮಣ್ಣು, ಹೆಣ್ಣು, ಕಾಮ, ದೇಹ, ಕಾಲ, ಶೀಲ, ಕರ್ಮ ಮುಂತಾದವುಗಳು ಭಗವಂತನಿಂದ ಬಂದವುಗಳು. ಇವುಗಳ ಒಡೆಯನು ಆತನೆ ಆಗಿದ್ದಾಗಲೂ 'ಮನುಷ್ಯ' ಇದೆಲ್ಲ ತನ್ನದೆಂದು ತಾನು ಶ್ರೇಷ್ಠನೆಂದು ಮೆರೆಯುವುದನ್ನು ಕಂಡ ಕನಕದಾಸರು ಕೆರಳುತ್ತಾರೆ. ಏಕೆಂದರೆ ಮನುಷ್ಯನಿಗೆ ವಾಸ್ತವವಾಗಿ ಜಾತಿ ಎಂಬುದೇ ಇಲ್ಲ. ಹುಟ್ಟಿನಿಂದ ಅದು ಬರುವಂಥದ್ದೂ ಅಲ್ಲ. ಅದು ಏನಿದ್ದರೂ ಅವರವರ ಗುಣ ದೋಷಗಳ ಮೇಲೆ ನಿರ್ಣಯ ಆಗುವಂಥದ್ದು ಎಂಬುದು ಅವರ ಚಿಂತನೆ. ಮನುಷ್ಯರೆಲ್ಲ ಹುಟ್ಟುವುದು ಯೋನಿ ಮೂಲಕವೇ, ಅವರು ಮೆಟ್ಟುವುದೆಲ್ಲ ಒಂದೇ ಭೂಮಿಯೇ, ಅವರು ಊಟಕ್ಕೆ ಬಳಸುವ ವಸ್ತುಗಳೆಲ್ಲ ಒಂದೇ. ಹೀಗಿರುವಾಗ ಕುಲದ ಬಗ್ಗೆ ವರ್ಣಬೇಧ ಹುಟ್ಟುವುದು ಎಂಥ ಅವಿಚಾರ, ಅವಿವೇಕ, ನಾವು ಕುಡಿಯುವ ಜಲವೆಲ್ಲ ಒಂದೇ. "ಈ ಜಲವೇ ಎಲ್ಲಾ ಕುಲಕ್ಕೂ ಕುಲದ ಜನನಕ್ಕೂ ತಾಯಿ ಈ ಜಲಕ್ಕೆ ಜಾತಿಯೆಂಬುದೇನಾದರೂ ಬ್ರಾಹ್ಮಣ ಜಲ, ವೈಶ್ಯಜಲ, ಕ್ಷತ್ರಿಯ ಜಲ, ಶೂದ್ರಜಲ ಎಂಬುದಿಲ್ಲ. ಈ ದೇಹಗಳಿಗೆ ಅಂಟಿಕೊಂಡದ್ದು ಜಾತಿಬೇಧ. ಈ ದೇಹಗಳ ಅಸ್ತಿತ್ವವೇ ಅಸ್ಥಿರ ಎಂದ ಮೇಲೆ ಈ ಜಾತಿಗಳಿಗೆ ಸ್ಥಿರಸ್ಥಾನವೇಕೆ. ಈ ಕಾರಣದಿಂದ ಜಾತಿ ವಸ್ತು ಸತ್ಯವಲ್ಲ. ಕೇವಲ ದುರ್ಭಾವನಾಜನ್ಯ ಇದನ್ನು ಬೆಂಕಿಯಂತೆ ಸದಾ ಜೊತೆಯಲ್ಲಿ ಕಟ್ಟಿಕೊಂಡು ತಾವೂ ಸುಟ್ಟುಕೊಂಡು ಅನ್ಯರನ್ನು ಸುಡುವ ಈ ಮೌಢ್ಯವೇಕೆ?"[೮] ಎಂದು ಖಾರವಾಗಿ ನುಡಿದಿದ್ದಾರೆ.

ಜಾತಿಯ ಮೂಲಭೂತ ಕಲ್ಪನೆಯೇ ಅವಾಸ್ತವಿಕ ಎಂದು ಕಾರ್ಯಕಾರಣಬದ್ಧವಾಗಿ ಪ್ರತಿಪಾದಿಸಿದ ಕನಕದಾಸರು ತಾವು ಕಂಡ ಭಿನ್ನ ಜಾತಿಯವರ ಕಪಟಾಚರಣೆಗಳನ್ನು ಬಯಲುಗೆಳೆದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿ ಗೇಲಿ ಮಾಡಿದ್ದಾರೆ.

ತೀರ್ಥವನ್ನು ಪಿಡಿದವರೆಲ್ಲ ತಿರುನಾಮದಾರಿಗಳೇ

ಜನ್ಮ ಸಾರ್ಥಕವಿಲ್ಲದವರೆಲ್ಲ ಭಾಗವತರೆ
ಮೂಗಿಡಿದು ನೀರೊಳಗೆ ಮುಳುಗಿ ಜಪತಪ ಮಾಡಿ
ವೇದಶಾಸ್ತ್ರ ಪುರಾಣಂಗಳನೋದಿ ತಿಳಿದು
ಬಾಗಿ ಪರಸ್ತ್ರೀಯರಿಗೆ ಭ್ರಮಿಸಿ ಕಣ್ಣಿಡುವಂಥ
ನೀತಿ ತಪ್ಪಿದವರೆಲ್ಲ ದೇವ ಬ್ರಾಹ್ಮಣರೆ

ಜಪತಪ ಕ್ರಿಯಾದಿಗಳು ಮನುಷ್ಯನ ಅಂತರಂಗವನ್ನು ಸಂಸ್ಕರಿಸುವ ಜೀವನದ ನೆಲೆಗಟ್ಟನ್ನು ನಿರ್ಮಿಸುವ ಸಾಧನಗಳು. ಅದನ್ನು ಬಿಟ್ಟು ತಮ್ಮ ಅನೀತಿ ಅನಾಚಾರಗಳನ್ನು ಮಾಡುವಲ್ಲಿ ಬಳಸಿಕೊಳ್ಳುವವರನ್ನು "ದೇವ ಬ್ರಾಹ್ಮಣರೆನ್ನಬೇಕೆ ಎಂದು ಛೇಡಿಸುತ್ತಾರೆ. ದೇವಧ್ಯಾನ ಆಧ್ಯಾತ್ಮಿಕ ಕ್ರಿಯೆಗಳು ನಡೆಯಬೇಕಾದುದು ಒಳಮನಸ್ಸಿನಲ್ಲಿ ನಡೆಯುವ ಕ್ರಿಯೆಗಳು. ಆದರೆ ಪಟ್ಟೆ ನಾಮ ಬಳಿದು ಕೈಯಲ್ಲಿ ಪಾತ್ರೆ ಹಿಡಿದು, ಕೆಟ್ಟ ದನಿಯಲ್ಲಿ ದೇವರ ಹೆಸರನ್ನು ಬಗುಳಿ ಬಾಯಾರುವ ಹೊಟ್ಟೆಬಾಕರನ್ನು ವೈಷ್ಣವರು ಎನ್ನಲಾಗುವುದೇ? ದೇವರ ಹೆಸರಿನಲ್ಲಿ ಭಂಗಿ ಸೇದುತ್ತಾ ಆತ್ಮದಲ್ಲಿ ಕೊಳಕನ್ನು ತುಂಬಿಕೊಂಡು ಮಂತ್ರ ಜಪಿಸುವ ಹಗಲು ಕಳ್ಳರಿಗೆ ಸ್ವರ್ಗವಿದೆಯೇ"[೯] ಎಂಬ ಕನಕದಾಸರ ನಿರ್ಭೀತವಾದ ಮನೋಧರ್ಮ ಆಧ್ಯಾತ್ಮಿಕ ಆಚಾರ ವಿಚಾರಗಳ ಬಗೆಗೆ ಅವರಿಗಿದ್ದ ಆಳವಾದ ಅರಿವನ್ನು ತಿಳಿಸುತ್ತದೆ. ಈ ಅರ್ಥಹೀನ ವೇಷಗಾರಿಕೆಯ ಬಗ್ಗೆ ಅವರಿಗಿದ್ದ ಕ್ರೋಧವನ್ನು ಈ ಹೊರ ದೇಹದ ಆಚರಣೆ, ಮನಸಿನಾಳದ ನಿರ್ಮಲಜ್ಞಾನ ಸ್ತೋತ್ರವಾಗಿ ಬರಬೇಕೆಂದು ಅವರ ಪ್ರಾಮಾಣಿಕ ಕಳಕಳಿ ಸೊಗಸಾಗಿ ಚಿತ್ರಿಸಿದೆ.

ತೊಲಗುವರು ತಾ ಕಡೆಕಡೆಗೆ ತಾ ಹೊಲೆ
ಹೊಲೆಯೆನುತ ಕಳಕಳಿಸಿ ಮೂತ್ರದ
ಬಿಲದೊಳಗೆ ಬಂದಿಹುದ ಕಾಣದೆ ಬಂದೆ ಮನನೊಂದು
ಜಲದೊಳಗೆ ಮುಳುಗಿದರೆ ತೊಲಗದು
ಹೊಲೆಗೆಲಸವೀ ದೇಹದೊಳು ನೀ
ನೆಲೆಸಿರಲು ಹೊಲೆಯುಂಟೇ...?

ವೈದಿಕರಲ್ಲಿ "ಕೃಷ್ಣಾಜಿನ, ಪಟ್ಟೆ, ದರ್ಭೆ ಇತ್ಯಾದಿಗಳ ಸಂಪರ್ಕದಿಂದ ಸದಾ ಮಡಿತನ ನೆಲಸಿರುವುದಾದರೆ, ಪರಮಾತ್ಮನೇ ನೆಲಸಿರುವ ಮಾನವನನ್ನು ಹುಟ್ಟಿನಿಂದ ಹೊಲೆಯನೆನಬಹುದೆ? ದುರಾಚಾರದಿಂದ ಅಂಟುವ ಹೊಲೆತನವನ್ನು ನಿತ್ಯಾ ಸ್ನಾನದಿಂದ ತೊಳೆಯಬಹುದೆ?"[೧೦] ಹೊಲೆತನ ಎಂಬುದು ಹುಟ್ಟಿನಿಂದ ಬರುವಂತದಲ್ಲ ಅದು ಅವರವರು ನಡೆದುಕೊಳ್ಳುವ ರೀತಿಯಲ್ಲಿರುತ್ತದೆ, ಮಡಿಯೆನಿಸುವ ವಿಪ್ರರು ಕೂಡ ಹೊಲೆ ಎನಿಸುವ ಮೂತ್ರದ ಸ್ಥಾನದಿಂದ ಬಂದವರು ಅದನ್ನು ಅರಿಯದೆ ಜಲದೊಳಗೆ ಮುಳುಗಿ

ಶುದ್ದಿಯಾದವೆಂಬ ಮೌಢ್ಯತನ ಸರಿಯಲ್ಲ ಎಂದು.

ಬರಿದ ಹಂಕಾರದಲಿ ತತ್ವದ
ಕುರಹ ಕಾಣದೆ ನಿನ್ನ ದಾಸರ
ಜರೆದು ವೇದ ಪುರಾಣಗಳನೊದಿ ಫಲವೇನು?
ನರರ ದುಷ್ಕರ್ಮದಲಿ ಮಾಡಿದ
ದುರಿತವಡಗಲು ನಿನ್ನ ನಾಮ
ಸ್ಮರಣೆಯೊಂದೇ ಸಾಕು...

ವಿದ್ಯೆಯಿಂದ ವಿನಯ, ವಿನಯದಿಂದ ಯೋಗ್ಯತೆ, ಯೋಗ್ಯತೆಯಿಂದ ಧನಾರ್ಜನೆ, ಧನಾರ್ಜನೆಯಿಂದ ಧರ್ಮಾಚರಣೆ, ಧರ್ಮಾಚರಣೆಯಿಂದ ಸಮಾಜದಲ್ಲಿ ಸುಖಶಾಂತಿ ಲಬಿಸಬೇಕು. ಇದು ವೇದದ ಸಾರ. ಹಾಗಿರುವಾಗ ವೇದಶಾಸ್ತ್ರಗಳನ್ನು ಓದಿದವರೆಂದು ತೋರಿಸಿಕೊಳ್ಳುವ ಜನರಲ್ಲಿ ಅದರ ಫಲವಾಗಿ ಮೂಡಬೇಕಾದ ಸೌಜನ್ಯವಿಲ್ಲದೆ ನಿಜವಾದ ಭಕ್ತಿಯ ಆಚರಣೆಯಿಂದ ದೈವಾನುಗ್ರಹಕ್ಕೆ ಪಾತ್ರರಾದವರನ್ನು ಕೀಳುಜಾತಿಯೆಂದು ದೂಷಿಸುವುದು ಸರಿಯೆ? ಎಂದು ಪ್ರಶ್ನಿಸಿದ್ದಾರೆ.

ಎಂಜಲೆಂಜಲು ಎಂಬರಾ ನುಡಿ
ಎಂಜಲಲ್ಲವೆ? ವಾರಿ ಜಲಚರ
ದೆಂಜಲಲ್ಲವೆ? ಹಾಲು ಕರುವಿನ ಎಂಜಲೆನಿಸಿರದೆ
ಎಂಜಲೆಲ್ಲಿಯದೆಲ್ಲಿಯುಂ ಪರ
ರೆಂಜಲಲ್ಲದೆ ಬೇರೆ ಭಾವಿಸ
ಲೆಂಜಲುಂಟೇ............!

ಅಂತರಂಗ ಶುದ್ಧಿಯಿಲ್ಲದೆ, ಬಹಿರಂಗ ಶುದ್ಧಿಗಾಗಿ, ಬಹಳ ಪೇಚಾಡುವ ಹಬ್ಬ ಹುಣ್ಣಿಮೆಗಳಲ್ಲಿ ಎಲ್ಲಿಯಾದರೂ ಕೀಳುವರ್ಣದವರಿಗೆ ಊಟ ಹಾಕಿದಾಗ ಅಲ್ಲಿನ ಎಂಜಲು ಶುದ್ಧಿಗಾಗಿ ಶ್ರಮ ಪಡುವ ಜನತೆಯ ಬಗ್ಗೆ ಕನಕನ ತೀಕ್ಷ್ಣವಾದ ನುಡಿಗಳಿವು. ಮೇಲ್ವರ್ಗದವರು ಸೇವಿಸಿದ ಹಾಲನ್ನು ಮೊದಲೇ ಅದರ ಕರು ಎಂಜಲು ಮಾಡಿರುತ್ತದೆ. ಕುಡಿಯುವ ನೀರನ್ನು ನೀರಲ್ಲಿರುವ ಜಲಚರಗಳು ಎಂಜಲು ಮಾಡಿರುತ್ತವೆ. ಹಾಗಾಗಿ ಪ್ರತಿಯೊಂದು ಕಡೆಯಲ್ಲಿಯೂ ಎಂಜಲಿರುವಾಗ ಕೆಳವರ್ಗದವರಲ್ಲಿ ಎಂಜಲು ಭಾವನೆ ಹುಟ್ಟು ಹಾಕಿರುವುದು ವೈದಿಕರ ಮೌಢ್ಯತನ ಎಂದಿದ್ದಾರೆ.

ಬುದ್ಧಿ ಜೀವಿಯಾದ ಮನುಷ್ಯ, ಪ್ರಾಣಿಗಳಲ್ಲಿ ಕಾಣದ ಈ ಕೀಳು ಭಾವನೆಯನ್ನು ಮನುಷ್ಯ ಮನುಷ್ಯನ ನಡುವೆ ಕಾಣುವುದು ಅರ್ಥಹೀನ. ಈ ರೀತಿಯ ಭಾವನೆಗಳನ್ನು

ಅವನು ಮಾಡುವ ನೀಚ ಕೃತ್ಯಗಳಲ್ಲಿ ಕಾಣಬೇಕೆ? ಹೊರತು, ಮಾನವ ಮಾನವರ ನಡುವೆ ಅಲ್ಲ. ಮುಟ್ಟಿದರೆ ಮೈಲಿಗೆಯಾಗುತ್ತದೆ, ನೆರಳು ಸೋಕಿದರೆ ಸಾಕು ಪಾಪ ಬರುತ್ತದೆ ಎನ್ನುವ ಮನೋಧೋರಣೆ ಅಮಾನವೀಯ ನೆಲೆಯಲ್ಲಿಯೆ ನಿಂತುಕೊಳ್ಳುತ್ತದೆ. ಇದು ಎಲ್ಲಾ ಕಾಲಘಟ್ಟದಲ್ಲಿಯೂ ಕೂಡ ತನ್ನ ಸ್ವರೂಪವನ್ನು ಮನಸಿನಾಳದಲ್ಲಿ ಬೇರು ಬಿಟ್ಟುಕೊಂಡು ಬಲವಾಗುತ್ತಾ ಬಂದಿದೆ. ಪ್ರಜ್ಞಾವಂತರನ್ನು ಕೂಡ ಇದು ದಾರಿ ತಪ್ಪಿಸುತ್ತಿದೆ. ವಿದ್ಯಾವಂತರಾದವರು ಕೂಡ ಈ ಅಸ್ಪೃಶ್ಯ ಭಾವನೆಯಿಂದ ಹೊರಬಂದಂತೆ ಕಂಡು ಬರುವುದಿಲ್ಲ. ಈ ದಿಸೆಯಲ್ಲಿ ಕನಕದಾಸರ ಈ ಚಿಂತನೆಯು ಚಿಕಿತ್ಸಕ ಮನೋಧೋರಣೆಯಿಂದ ಮಾನವನ ಮನಸ್ಸು ಬದಲಾಗಬೇಕಿದೆ. ಕುಡಿಯುವುದೊಂದೆ ಜಲ, ಉಸಿರಾಡುವ ಗಾಳಿ ಒಂದೆ ಮತ್ತು ನಡೆದಾಡುವ ಭೂಮಿ ಒಂದೆ ಹೀಗಿರುವಾಗ ಭೇದವೆಣಿಸುವ ಈ ಚಿಂತನೆ ದೂರಾಗಬೇಕಿದೆ. ಬುದ್ಧ, ಮಹಾವೀರ, ಬಸವಣ್ಣ, ಪುರಂದರ, ಸರ್ವಜ್ಞ, ದಾಸರಂಥರವರ ಚಿಂತನೆಗಳು ಕೂಡ ಭೇದವೆಣಿಸುವ ಈ ಚಿಂತನೆಯ ವಿರೋಧಿ ನೆಲೆಯಿಂದ ಕೂಡಿವೆ. ಈ ಪುಣ್ಯ ಪುರುಷರ ಆದರ್ಶಗಳ ಚಿಂತನೆಯ ನಡುವೆಯೂ ಈ ಬಗೆಯ ಅಮಾನವೀಯ ಭಾವನೆ ಹೊಂದಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ.

ಕನಕದಾಸರ ಕಾಲಕ್ಕೆ ಅನೇಕ ಧರ್ಮ ದೇವರುಗಳಿದ್ದವು. ಮೇಲ್ವರ್ಗದ ಶಿಷ್ಟ ದೇವರುಗಳ ಆಚರಣೆ ಒಂದು ವಿಧವಾದರೆ ಕೆಳವರ್ಗದವರ ದೇವರುಗಳ ಆಚರಣೆಯಲ್ಲಿ ಭಿನ್ನತೆ ಇದ್ದವು. ಈ ಆಚರಣೆಗಳು ಒಂದೇ ಧರ್ಮ ಮತ್ತು ದೇವರುಗಳಲ್ಲಿ ವೈವಿಧ್ಯತೆ ಇದೆ. ತಮಗೆ ಒದಗಿ ಬಂದ ಕಷ್ಟ ಕಾರ್ಪಣ್ಯಗಳಿಗೆ ಅಸಾಹಯಕನಾದ ಮನುಷ್ಯ ಹರಕೆ ಕಟ್ಟಿಕೊಳ್ಳುವ ಮೂಲಕ ದೈವದ ಮೊರೆ ಹೋಗುತ್ತಿದ್ದ. ಈ ಹರಕೆ ನಿವಾರಣೆಯ ಸಲುವಾಗಿ ಉಗ್ರವಾದ ಭಕ್ತಿಯ ಹೆಸರಿನಲ್ಲಿ ದೇಹ ದಂಡನೆಗೂ ಒಳಗಾಗುತ್ತಿದ್ದ, ಪ್ರಾಣಿಗಳನ್ನು ಕೂಡ ಬಲಿಕೊಡುತ್ತಿದ್ದ ಇದನ್ನ ಕಂಡ ಕನಕದಾಸರು,

ಕುರಿ ಕೋಣಗಳ ತಲೆ ಚೆಂಡನಾಡಿ
ಪ್ರಾಣಿ ಹತ್ಯೆಯ ಮಾಳ್ಪುದಾವ ಸತ್ಕರ್ಮವೋ
ಖಂಡ ಕೊಯ್ದು ಕೊಡಬೇಡ ದಳ್ಳುರಿಯಗ್ನಿ
ಕೊಂಡವನ್ನು ಹೊಕ್ಕು ಹೊರಡುವುದುಚಿತವೆ?
ಚುಚ್ಚಿಕೊಳ್ಳದಿರಿ ಬೆನ್ನಲಿ ಸಿಡಿಯನು
ಕಟ್ಟಿ ತೂಗಿಸಿಕೊಳ್ಳದಿರಿ ಕರಟಕದಂತೆ

ಎಂಬಿತ್ಯಾದಿ ಅಂಶಗಳನ್ನು ಗಮನಿಸಿದರೆ, ಆ ಕಾಲಕ್ಕೆ ಎಂಥ ಆಚರಣೆಗಳಿದ್ದವೆಂದು ತಿಳಿಯುತ್ತದೆ. ಭಾರತೀಯ ಪರಂಪರೆಯಲ್ಲಿ ಹಲವಾರು ದೈವಗಳು, ಹಲವಾರು ಧರ್ಮಗಳು, ಹಲವಾರು ಧಾರ್ಮಿಕ ಪಂಥಗಳಿವೆ. ಈ ಒಂದೊಂದು ಪಂಥದವರ ದೈವದ ಆಚರಣಾ ವಿಧಿ ವಿಧಾನದಲ್ಲಿ ವೈವಿಧ್ಯತೆ ಇರುತ್ತದೆ. ಕೆಲವು ಶಿಷ್ಟದೇವರುಗಳು ಸಸ್ಯಾಹಾರಿಗಳಾದರೆ,

ಕೆಳವರ್ಗದ ದೇವರುಗಳು ಮಾಂಸಾಹಾರಿಗಳಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಹರಕೆ ಕಟ್ಟಿಕೊಂಡ ಮನುಷ್ಯ ಹರಕೆ ನಿವಾರಣೆಗಾಗಿ ದೇಹದಂಡನೆಯಂಥ ಪ್ರಕಾರಗಳಾದ ಕೊಂಡ ಹಾಯುವುದು, ಸಿಡಿ ಚುಚ್ಚಿಸಿಕೊಳ್ಳುವುದು, ಬಾಯಿಬೀಗ ಚುಚ್ಚಿಸಿಕೊಳ್ಳುವುದು, ಉರುಳುಸೇವೆ ಮಾಡುವುದು, ಮುಳ್ಳಿನ ಮೇಲೆ ಮಲಗಿಕೊಳ್ಳುವುದು ಇತ್ಯಾದಿ ಹಿಂಸೆ ರೂಪದ ಆಚರಣೆಯನ್ನು ರೂಢಿಸಿಕೊಂಡಿದ್ದಾನೆ. ಹೀಗೆ ಮಾನವನ ದೇಹದ ದಂಡನೆ ಒಂದು ಕ್ರಿಯಾರೂಪದ ಆಚರಣೆಯಾದರೆ, ತಮ್ಮ ಅಭಿಷ್ಟಾರ್ಥ ಈಡೇರಿದಾಗ, ದೇವರನ್ನು ಸಂತೃಪ್ತಿಗೊಳಿಸಲು ಪ್ರಾಣಿ ಬಲಿಯಂತಹ ಆಚರಣೆ ರೂಢಿಸಿಕೊಂಡಿರುವುದು ಇನ್ನೊಂದು ವಿಧಾನ.

ಸಾಮಾನ್ಯವಾಗಿ ಪ್ರಾಣಿ ಬಲಿಯಂತಹ ಆಚರಣೆಗಳು, ಹರಕೆಗಳು ಕಂಡು ಬರುವುದು ಕೆಳವರ್ಗದ ಜನ ಮತ್ತು ಕೆಳವರ್ಗದ ದೇವತೆಗಳಿಗೆ ಮಾತ್ರ. ಮಾರಮ್ಮ ಚೌಡಿದುರ್ಗಿಯಂತಹ ಇತ್ಯಾದಿ ದೇವರುಗಳಿಗೆ ಪ್ರಾಣಿಬಲಿ ಹರಕೆ ನಡೆಯುತ್ತದೆ. ಇವು ಸಾಮಾನ್ಯವಾಗಿ ವಿಶೇಷ ಹಬ್ಬ ಹರಿದಿನಗಳಲ್ಲಿ ಹಾಗೂ ವಿಶೇಷ ದಿನಗಳಲ್ಲಿ ಮಾತ್ರ ನಡೆಯುವಂತ ಕ್ರಿಯಾಚರಣೆಗಳು.

ಈ ಕ್ರಿಯಾಚರಣೆಗಳ ಸ್ವರೂಪದಲ್ಲೂ ವೈವಿಧ್ಯತೆ ಇದ್ದು, ಪ್ರಾಣಿಗಳ ಬಲಿಯಲ್ಲೂ ಭಿನ್ನತೆ ಇದೆ. ಕುರಿ, ಕೋಳಿ, ಕೋಣಗಳಂತಹ ಪ್ರಾಣಿಗಳನ್ನು ಬಲಿಕೊಟ್ಟು ಅವುಗಳ ಮಾಂಸ ತುಂಡರಿಸಿ ಆ ಮಾಂಸದ ವಿವಿಧ ಅಂಗಾಂಗಗಳ ವಿಶೇಷ ಭಾಗವನ್ನು ಅಡುಗೆ ಮಾಡಿ ಹೆಡೆ ಇಡುವಂತಹ ಪದ್ಧತಿ ಇದೆ. ಈ ಕ್ರಿಯಾಚರಣೆಗಳು ಒಮ್ಮೊಮ್ಮೆ ಸಾಮೂಹಿಕವಾಗಿ ಊರಿನ ಜನರೆಲ್ಲಾ ಒಟ್ಟಿಗೆ ನಡೆಸಿದರೆ, ಕೆಲವೊಮ್ಮೆ ವಯಕ್ತಿಕ ಕುಟುಂಬದಲ್ಲಿ ನಡೆಯುತ್ತವೆ. ಈ ಆಚರಣೆಗಳು ಗ್ರಾಮದಲ್ಲಿ ವರ್ಷದಲ್ಲಿ ಒಮ್ಮೆಯಾದರೂ ನಡದೇ ತೀರಬೇಕು ಇಲ್ಲವಾದರೆ ದೇವಿಯ ಮುನಿಸಿಗೆ ಕಾರಣವಾಗಿ ಊರಿಗೆ ಕೇಡು ಬರುವುದೆಂಬ ನಂಬಿಕೆ ಮನೆ ಮಾಡಿದೆ.

ಮೇಲ್ವರ್ಗದ ಕೆಟ್ಟ ದೇವರುಗಳ ಆಚರಣಾ ವಿಧಾನವೇ ಬೇರೆ ಸ್ವರೂಪದಿಂದ ಕೂಡಿರುತ್ತವೆ. ಅವರು ಪವಿತ್ರ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸುವುದು, ಕೃಷ್ಣ, ಗಂಗೆ, ತುಂಗೆ, ಭದ್ರೆ, ಯಮುನೆಯಂತ, ಗೋಧಾವರಿ ನದಿಯಲ್ಲಿ ಮಿಂದು ಸೇವೆ ಮಾಡುವುದು ಕಂಡು ಬರುತ್ತದೆ. ಹಾಗೆ ಜಪತಪ, ಹೋಮ ಹವನಾದಿಗಳನ್ನು ಮಾಡುವುದು, ಅನ್ನದಾನ ಏರ್ಪಡಿಸುವುದು ಇತ್ಯಾದಿ ಆಚರಣೆ ಕಂಡು ಬರುತ್ತದೆ.

ಇಂಥ ಆಚರಣೆಗಳನ್ನು ಕಂಡಂಥ ದಾಸರು ಪ್ರಾಣಿವಧೆ, ಸಿಡಿ, ಹೋಮ ಹವನಗಳ ಮೂಲಕ ದೇವರನ್ನು ಓಲೈಸಿಕೊಳ್ಳುತ್ತೇವೆ ಎನ್ನುವುದು ಸಲ್ಲದ ವಿಚಾರ ಹಾಗಾಗಿ ಅಮಾಯಕ ಪ್ರಾಣಿ, ಪಕ್ಷಿ, ಭಕ್ತರ ಬಲಿಗಳನ್ನು ಅವರು ವಿರೋಧಿಸುತ್ತಾರೆ ಮತ್ತು ದೇವರು ಒಂದು ನಿರ್ದಿಷ್ಟ ನೆಲೆಯಲ್ಲಿಯೇ ಇದ್ದಾನೆ ಎಂಬುದು ಕನಕರ ದೃಷ್ಟಿಯಲ್ಲಿ ಮೂರ್ಖತನದ ತರ್ಕ. ಆತ ಮನಸ್ಸಿದ್ದವರಲ್ಲಿ, ಭಕ್ತಿ ಇದ್ದವರಲ್ಲಿ ಇದ್ದೇ ಇರುತ್ತಾನೆ. ಅರ್ಥಹೀನ ಆಚರಣೆಗಳು ಸಮಾಜದ ಮೌಢ್ಯದ ಪ್ರೇರಕ ಅಂಶಗಳು ಎಂದಿದ್ದಾರೆ.

ಪ್ರಸ್ತುತದಲ್ಲಿ ನಾಗರೀಕತೆ ಬೆಳೆದಂತೆ ಮನುಷ್ಯನಲ್ಲಿ ಅನಾಗರೀಕವಾದ, ಅಮಾನವೀಯವಾದ ಮೌಲ್ಯಗಳು ದಿನೇ ದಿನೇ ಬೆಳೆಯುತ್ತಿವೆ. ದೈವದ ಹೆಸರಿನಲ್ಲಿ ಪ್ರಾಣಿಹಿಂಸೆಯಂತಹ ಕೃತ್ಯಗಳು ನಡೆಯುತ್ತಿವೆ. ವಿದ್ಯಾವಂತರಾದವರು, ವಿಚಾರವಂತರಾದವರು ಕೂಡ, ಈ ಬಗೆಯ ಕೃತ್ಯಗಳಲ್ಲಿ ತೊಡಗಿರುವುದು ವಿಪರ್ಯಾಸ. ಮೌಢ್ಯತೆ ಎಂಬುದು ಮನಸಿನಾಳದಲ್ಲಿ ಕುಳಿತಿರುವ ಭೂತದಂತೆ ಕೆಲಸಮಾಡುತ್ತಿದೆ. ಮನುಷ್ಯನ ಅಸಾಯಕ ಪರಿಸ್ಥಿತಿಯ ಲಾಭ ಪಡೆದ, ದೇವರ ಏಜೆಂಟರಾದ ಪೂಜಾರಿಗಳ ಪ್ರೋತ್ಸಾಹವು ಸಹ ಸ್ತುತ್ಯಾರ್ಹ.

ಈ ಬಗೆಯ ಮೌಢ್ಯತೆಯ ಆಚರಣೆಗಳು ಹೆಚ್ಚಾಗಿ ಕಂಡು ಬರುವುದು ಕೆಳವರ್ಗದವರಲ್ಲಿಯೇ ಎನ್ನುವುದು ಮತ್ತೊಂದು ವಿಶೇಷ. ಪ್ರಾಣಿಗಳ ಹಿಂಸೆಯಲ್ಲದೆ ಮನುಷ್ಯನೇ ಹಿಂಸಿಸಿಕೊಳ್ಳುವುದರ ಮೂಲಕ ಮೌಢ್ಯತೆಯ ಪರಕಾಷ್ಟೆಯನ್ನು ಮುಟ್ಟಿದ್ದಾನೆ. ಈ ಬಗೆಯ ಅಮಾನುಷ, ಅಮಾನವೀಯ ಕೃತ್ಯಗಳನ್ನು ಕನಕದಾಸರು ವಿರೋಧಿಸಿರುವುದು ಅವರ ದಿಟ್ಟತನದ ಬಂಡಾಯವಾಗಿದೆ.

ಹೀಗೆ ಕನಕದಾಸರು ಪುರೋಹಿತಶಾಹಿಗಳು ಧಾರ್ಮಿಕ ಸ್ಥಾಪಿತ ಹಿತಾಶಕ್ತಿಗಳು ಮಾಡಿದ ಅರ್ಥಹೀನ ಆಚರಣೆಗಳನ್ನು ಕನಕದಾಸರು ಸುಮಾರು ೫೦೦ ವರ್ಷಗಳ ಹಿಂದೆಯೇ ಖಂಡಿಸಿದ್ದಾರೆ. ಸ್ವಾರ್ಥಪರ ಮನುಷ್ಯನು ಹಲವಾರು ವಿಧದಲ್ಲಿ ಮಾಡುವ ಅಕೃತ್ಯಗಳನ್ನು ನೇರವಾಗಿ ವಿರೋಧಿಸಿದ್ದಾರೆ. ದಾಸರಂಥ ಹಲವಾರು ಸಾಧು ಸಜ್ಜನರು, ಸಮಾಜ ಚಿಂತಕರು, ವೈಚಾರಿಕ ಮನೋಧೋರಣೆ ಉಳ್ಳವರು ನಮ್ಮ ಸಮಾಜದ ಮಧ್ಯೆ ಇದ್ದು ಮಾನವನ ಈ ಕೃತ್ಯಗಳನ್ನು ಪ್ರಶ್ನೆ ಮಾಡುತ್ತಾ ವಿರೋಧಿಸುತ್ತಾ ಬಂದಿದ್ದರೂ, ಈ ಆಚರಣೆಗಳು ಆಚರಣೆಗಳಾಗಿಯೇ ಉಳಿದಿವೆ ಮತ್ತು ಬೆಳೆಯುತ್ತಿವೆ.

ಅಡಿಟಿಪ್ಪಣಿಗಳು

೧. ಕಮಲ ಹಂಪನಾ – ಬಿತ್ತರ– ಪುಟ ಸಂ. ೬೭

೨. ಅದೇ.................. ಪುಟ ಸಂ. ೬೭

೩. ಅದೇ.................. ಪುಟ ಸಂ. ೬೮

೪. ಅದೇ.................. ಪುಟ ಸಂ. ೬೮

೫. ಡಾ. ಹೆಚ್.ಜೆ. ಲಕ್ಕಪ್ಪಗೌಡ – ಸಾಹಿತ್ಯ ಬಹುಮುಖಿ ಚಿಂತನೆ. ಪುಟ ಸಂ. ೪೭೩

೬. ಡಾ. ಎಸ್.ಎಸ್.ಕೋತಿನ – ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ನೆಲೆ – ಕನಾಕಾವಲೋಕನ – ಪುಟ ಸಂ. ೭೮೦

೭. ಹೆಚ್.ಜೆ.ಲಕ್ಕಪ್ಪಗೌಡ – ಸಾಹಿತ್ಯ ಬಹುಮುಖಿ ಚಿಂತನೆ – ಪುಟ ಸಂ. ೪೭೩

೮. ಅದೇ.................. ಪುಟ ಸಂ. ೪೭೫

೯. ಕನ್ನಡ ಎಂ.ಎ. ಪ್ರಥಮ – ಕರ್ನಾಟಕ ರಾಜ್ಯ ಮುಕ್ತ ವಿ.ವಿ. ಮೈಸೂರು – ಕುಲದ ನೆಲೆ – ಪುಟ ಸಂ. ೯೮

೧೦. ಡಾ. ಎಸ್.ಎಸ್. ಕೋತಿನ – ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ನೆಲೆ – ಕರ್ನಾಟವಲೋಕನ – ಪುಟ ಸಂ. ೮೧೦

ಅಧ್ಯಾಯ ೪

ಪ್ರಸ್ತುತ ಕಾಲಘಟ್ಟದಲ್ಲಿ ಕನಕದಾಸರ ಕೀರ್ತನೆಗಳ ಅವಲೋಕನ

ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಕನಕದಾಸರು ಅಪೂರ್ವ ಪ್ರತಿಭೆಯುಳ್ಳ ದಾರ್ಶನಿಕರು. ಇವರು ಮಹಾಕವಿಗಳಾಗಿ, ಮಹಾಸಂತರಾಗಿ, ಪವಾಡಪುರುಷರಾಗಿ, ಮಹಾಪುರುಷರ ಜತೆಯಲ್ಲಿ ಬಾಳಿದ ಮಹಾನ್ ಚೇತನ. ಭೋಗಿಯಾಗಿದ್ದು ವಿರಾಗಿಯಾಗಿ ನಿಷ್ಠೆಯಿಂದ ಭಕ್ತಿಪಥದಲ್ಲಿ ಸಾಗಿ ಭಗವಂತನ ಕೃಪೆಗೆ ಪಾತ್ರರಾದವರು. ಇವರು "ಹುಟ್ಟಿನಿಂದ ಶೂದ್ರರಾಗಿ ನಿಷ್ಠೆಯಿಂದ ಬ್ರಾಹ್ಮಣರಾಗಿ, ಇಷ್ಟದಿಂದ ಭಾಗವತರಾಗಿ ಕಟ್ಟಕಡೆಗೆ ದೇವರನ್ನು ಕಂಡವರಾಗಿ ಪುಣ್ಯ ಶ್ಲೋಕರೆನಿಸಿದರು. ಕರ್ನಾಟಕದಲ್ಲಿ ಕಂಗೊಳಿಸುವ ಬಸವೇಶ್ವರರು ಪ್ರಭುದೇವರು ನಿಜಗುಣರು, ಪುರಂದರದಾಸರು, ಜಗನ್ನಾಥದಾಸರು, ಶಾಲ್ಯದರಸರು, ಮಹಲಿಂಗರಂಗರು ಸರ್ವಜ್ಞಮೂರ್ತಿ, ಮುಳುಗುಂದ ಮಹಾಂತ ಸ್ವಾಮಿಗಳು ಇತ್ಯಾದಿ ಮಹಾನುಭಾವರ"[೧] ಸಾಲಿಗೆ ಸೇರಿದವರು.

ಕನ್ನಡ ಸಾಹಿತ್ಯಕ್ಕೆ "ಉತ್ತರ ಭಾರತದ ವೇದೋಪನಿಷತ್ತುಗಳು ದಕ್ಷಿಣಕ್ಕೆ ಹರಿದರೆ ದಕ್ಷಿಣದ ಭಾರತದ ಭಕ್ತಿಯು, ಅನುಭವದ ಸಿದ್ಧಾಂತಗಳು ಉತ್ತರಕ್ಕೆ ಹರಿಯುವಂತೆ ಮಾಡುವಲ್ಲಿ ಕನಕದಾಸರ ಚಿಂತನಾ ಸಿದ್ಧಾಂತದ ಪಾತ್ರವು ಸಹ ಪ್ರಮುಖವಾದುದಾಗಿದೆ. ಆಧುನಿಕ ಮಹರ್ಷಿಗಳಾದ ಪರಮಹಂಸ, ಅರವಿಂದ ರಮಣ, ವಿವೇಕಾನಂದ, ರಾಮತೀರ್ಥ, ಠಾಕೋರ, ಗಾಂಧಿ, ರಾನಡೆ ಮೊದಲಾದವರ ಜೀವನದ ಮೇಲೂ ಕೂಡ ಕನಕದಾಸರ ಪ್ರಭಾವವಿದೆ. ಹಾಗೆಯೇ ವಿಶ್ವವಿಖ್ಯಾತ ಸಾಕ್ರಟೀಸ್, ಯೇಸುಕ್ರಿಸ್ತ, ಕನ್‌ಪ್ಯೂಶಿಯಸ್‌ನ ವಿಚಾರಧಾರೆಗೂ ಸಮನಾದ ತತ್ವಾದರ್ಶಗಳು ಕನಕದಾಸರ ಚಿಂತನಾಲಹರಿಯಲ್ಲಿವೆ"[೨] ಕರ್ನಾಟಕದ ಜನಜೀವನದಲ್ಲಿ ಚೈತನ್ಯವನ್ನು ಕನ್ನಡ ಸಾಹಿತ್ಯದಲ್ಲಿ ಸಾಮರ್ಥ್ಯವನ್ನು ವೇದಾಂತ ಪ್ರಪಂಚದಲ್ಲಿ ವಿನೂತನತೆಯನ್ನು ಉಂಟುಮಾಡುವ ಮೂಲಕ ಕನಕದಾಸರು ಮಾಡಿದ ಸಾಧನೆಯ ಸಿದ್ಧಿ ಅನನ್ಯ ಮಹಾತ್ಮ ಕನಕದಾಸರ ಹಿರಿಮೆ ಗರಿಮೆಗಳ ಗುಟ್ಟು, ಅವರ ಅನುಭಾವ ದೃಷ್ಟಿ, ಅವರ ಭಾಗವತ ಧರ್ಮದ ತತ್ವಗಳ ವಿಚಾರಧಾರೆಗಳು ಅವರ ಸಾಹಿತ್ಯದಲ್ಲಿ ಅಡಗಿವೆ.

ಈ ಹಿನ್ನೆಲೆಯಲ್ಲಿ ಕನಕದಾಸರ ಜೀವನವೇ ಒಂದು ಆದರ್ಶ. ಅವರ ಪಾಂಡಿತ್ಯ ಪ್ರತಿಭೆ ಅನುಭಾವದ ತಪಸ್ಸಿದ್ಧಿ, ಬರೆದ ಸಾಹಿತ್ಯ, ಸಮಾಜದ ಮೇಲೆ ಬೀರಿದ ಪ್ರಭಾವ ಅದರ ಪರಿಣಾಮವಾಗಿ ಭೂತ ಮತ್ತು ವರ್ತಮಾನ ಹಾಗೂ ಭವಿಷ್ಯತ್‌ಕಾಲಗಳಲ್ಲಿ ಪಸರಿಸಿರುವ ಇವರ ಚಿಂತನೆಗಳು ಸಾರ್ವಕಾಲಿಕ ಸತ್ಯಗಳು.

ಮನುಷ್ಯನ ಪ್ರಾಪಂಚಿಕ ಜಗತ್ತು ದಿನೇ ದಿನೇ ವೃದ್ಧಿಯಾದಂತೆ ಮನುಷ್ಯನಲ್ಲಿರುವ ಮಾನವೀಯ ಗುಣಗಳು ಕ್ಷೀಣಿಸುತ್ತಿವೆ. ಸ್ವಾರ್ಥಪರವಾದ ಮನುಷ್ಯ ತನ್ನ ಸುಖ ಸಂತೋಷಕ್ಕಾಗಿ

ಇಂದು ವಾಮ ಮಾರ್ಗದ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಿದ್ದಾನೆ. ಹೆಚ್ಚುತ್ತಿರುವ ಭ್ರಷ್ಟಾಚಾರ, ಸ್ತ್ರೀಯ ಮೇಲಿನ ದೌರ್ಜನ್ಯ, ಲೈಂಗಿಕ ಶೋಷಣೆಗಳು, ಮನುಷ್ಯ ಮನುಷ್ಯರ ನಡುವೆ ಹೆಚ್ಚುತ್ತಿರುವ ಜಾತಿಯತೆ, ಧಾರ್ಮಿಕ ಸಂಘರ್ಷಗಳು ವೈಚಾರಿಕತೆ ಬೆಳೆದರೂ ಬೇರೂರಿರುವ ಮೌಢ್ಯತನ, ಮೂಢನಂಬಿಕೆಗಳು ಸ್ವಾರ್ಥಪರವಾದ ರಾಜಕೀಯ ವ್ಯವಸ್ಥೆ ಇತ್ಯಾದಿ ಅಂಶಗಳಿಂದ ತುಂಬಿರುವ ಜಿಡ್ಡುಗಟ್ಟಿದ ಈ ಸಮಾಜಕ್ಕೆ ಕನಕದಾಸರ ಕೀರ್ತನೆಗಳು ಚಿಕಿತ್ಸಕವಾಗಿ ಪ್ರಭಾವ ಬೀರುತ್ತವೆ. ಈ ಕೀರ್ತನೆಗಳು ಸಾರ್ವತ್ರಿಕ ಸತ್ಯಗಳಾಗಿದ್ದು, ಮನುಷ್ಯನ ಬದುಕಿನ ಕ್ರಮ ತಪ್ಪಿದಾಗ ಮಾರ್ಗದರ್ಶಕವಾಗಿ ಊರುಗೋಲಾಗಬಲ್ಲ ಶಕ್ತಿ ಇವುಗಳಿಗಿವೆ. ಬದುಕಿನ ಒತ್ತಡದ ಮಧ್ಯೆ ನೆಮ್ಮದಿ ಕಳೆದುಕೊಂಡು ಪರಿತಪಿಸುವ ಮಾನವನಿಗೆ ಸಾಂತ್ವನದ ನುಡಿಗಳಾಗಿವೆ. ಅರಿಷಡ್ವರ್ಗಗಳ ಇಂದ್ರಿಯಗಳ, ಅತಿಯಾದ ವ್ಯಾಮೋಹವನ್ನು ಹೊಂದಿರುವ ಮಾನವನಿಗೆ ಎಚ್ಚರಿಕೆಯ ಸಂಕೇತಗಳಾಗಿವೆ. ಇವು ಅನುಭಾವದ ಮೂಸೆಯಲ್ಲಿ ಮೂಡಿ ಬಂದಿರುವ ಸತ್ಯದ ಕಿಡಿಗಳಾಗಿದ್ದು, ಇವುಗಳ ಬೆಳಕಿನಲ್ಲಿ ಸಾಗಿದರೆ, ಮಾನವನ ಸಮಾಜ ಸ್ವಾಸ್ಥ್ಯಭರಿತವಾಗಿ ಆರೋಗ್ಯಕರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅವರ ಕೀರ್ತನೆಗಳು ಪ್ರಸ್ತುತ ಕಾಲಮಾನದಲ್ಲಿ ಅವಲೋಕಿಸಿದಾಗ ಮಾನವನ ಸಾಮಾಜಿಕ ಬದುಕಿನ ಮೇಲೆ ಪ್ರಭಾವ ಬೀರುತ್ತವೆ.

ದಾಸರು ಭೋಗಿಯಾಗಿ ವೈರಾಗ್ಯ ತಾಳಿ ಆಧ್ಯಾತ್ಮಿಕ ವಲಯಕ್ಕೆ ಕಾಲಿಟ್ಟಾಗ ಅವರಿಗೆ ಎದುರಾಗಿ ಕಾಡಿದ್ದು ಜಾತಿ ಎಂಬ ಭೂತ. ಈ ಜಾತಿ ಎಂಬ ವಿಷವರ್ತುಲದಲ್ಲಿ ಸಿಲುಕಿ ಪರದಾಡುತ್ತಿರುವ ಮಾನವರ ತತ್ವರಹಿತ ವಿಚಾರಧಾರೆಯನ್ನು ತೀಕ್ಷ್ಣವಾದ ಮಾತುಗಳಿಂದ ಖಂಡಿಸಿದ್ದಾರೆ. ಅವರು ಜಾತಿಯ ಮೂಲ ನೆಲೆಯನ್ನು ಶೋಧಿಸಿದ್ದಾರೆ. ಜಾತಿಯೆಂಬ ಪರಿಕಲ್ಪನೆ ಹುಟ್ಟಿನಿಂದ ಬರುವಂತದಲ್ಲ, ವ್ಯಕ್ತಿ ನಡೆದುಕೊಳ್ಳುವ ಸ್ವಭಾವದ ಮೇಲೆ ನಿರ್ಧಾರವಾಗುತ್ತದೆ ಎಂದು ಜಾತಿ ಎಂಬ ಮಾಯಜಾಲವನ್ನು ಜಾಲಾಡಿಸಿದ್ದಾರೆ. ಕನಕರ ಈ ತಾತ್ವಿಕ ಚಿಂತನೆ ಅಂದಿನ ಕಾಲಘಟ್ಟಕ್ಕೆ ಮಾತ್ರ ಸೀಮಿತವಾಗದೆ, ಹಿಂದು, ಇಂದು, ಮುಂದು ಎಂದೆಂದು ಪ್ರಭಾವ ಬೀರುವ ನಿಟ್ಟಿನಲ್ಲಿ ಸಮಾಜಕ್ಕೆ ಚಾಟಿ ಬೀಸುವ ನಿರಂತರವಾದ ಆದರ್ಶದ ನುಡಿಯಾಗಿದೆ. ಜಗತ್ತು ಬದಲಾದಂತೆ ಮನುಷ್ಯ ಎಲ್ಲಾ ವಿಧದಲ್ಲೂ ಬದಲಾಗುತ್ತಿದ್ದಾನೆ. ಆದರೆ ಸಾಮಾಜಿಕ ಪರಿಧಿಯಲ್ಲಿ ಜಾತಿಯ ವಿಷಯ ಬಂದಾಗ ಮಾತ್ರ ಅವನ ಬದಲಾಗಬೇಕಾದ ಮನೋಧೋರಣೆ ಆ ವಿಷವರ್ತುಲದಿಂದ ಹೊರ ಬರುವುದಿಲ್ಲ. ಇಂದಿಗೂ ಕೂಡ ನಗರ ಹಾಗೂ ಹಳ್ಳಿಗಳಲ್ಲಿ ಈ ಪರಿಕಲ್ಪನೆ ಬಲವಾಗಿ ಬೇರುಬಿಟ್ಟಿರುವುದು ವಾಸ್ತವ ಸತ್ಯ. ಕೆಳವರ್ಗದ ಜನಸಮುದಾಯ ವಾಸಿಸಲು ಬಾಡಿಗೆ ಮನೆಯೂ ಸಿಗದಂತಹ ದಿಸೆಯಲ್ಲಿ ಈ ಪರಿಕಲ್ಪನೆ ಮೇಲ್ವರ್ಗದ ಮನಸ್ಸನ್ನು ಜಾಗೃತಗೊಳಿಸಿರುತ್ತಿರುತ್ತದೆ. ಇನ್ನೂ ಹಳ್ಳಿಗಳಲ್ಲಿ ವಾಸಿಸುವ ಶೂದ್ರ ಹಿನ್ನೆಲೆಯ ಜನರು ಹಿಂಸೆ ಪಡುವ ಮನೋವೇದನೆ ಉಲ್ಲೇಖಾರ್ಹ, ಅವರಿಗೆ ದೇವಾಲಯ ಪ್ರವೇಶ ನಿರಾಕರಣೆ, ಹೋಟೆಲ್, ಕ್ಷೌರದಂಗಡಿ, ಇಸ್ತ್ರಿ ಅಂಗಡಿ, ಮೇಲ್ವರ್ಗದ ಮನೆಯಲ್ಲಿ ಹೊರಗಡೆ ಕುಳಿತು ಊಟಮಾಡುವ ಅಮಾನವೀಯ

ಚಿತ್ರಣ. ಇವೆಲ್ಲ ಜಾತಿ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಕಣ್ಮುಂದೆ ಬರುವ ಚಿತ್ರಣಗಳು. ಈ ಜಾತಿ ಎಂಬ ವಿಷವರ್ತುಲದಲ್ಲಿ ಸಿಲುಕಿರುವ ಪುರೋಹಿತಶಾಹಿಯ ತತ್ವಾದರ್ಶಗಳ ನೀತಿ ನಿಯಮಗಳಿಂದ ಸಮಾಜದಲ್ಲಿ ಕಂಟಕಪ್ರಾಯವಾದ ಅಮಾನವೀಯ ಘಟನೆಗಳು, ಆಗಾಗ ಘಟಿಸುತ್ತಿರುವುದು ಸರ್ವವ್ಯಾಪಿ ಸತ್ಯ. ವೈವಾಹಿಕ ಬಾಂಧವ್ಯಗಳಂತು ಜಟಿಲವಾದ ಸಮಸ್ಯೆ. ೧೨ನೇ ಶತಮಾನದಲ್ಲಿ ಬಸವಣ್ಣನವರು ಅಂತರ್ಜಾತಿ ವಿವಾಹ ಮಾಡಿಸುವ ಮೂಲಕ ಜಾತಿಯ ಅಸಮಾನತೆಯನ್ನು ಹೋಗಲಾಡಿಸಲು ಪ್ರಯತ್ನಿಸಿ ವಿಫಲರಾದರು. ಈ ದಿಸೆಯಲ್ಲಿ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ವಿರಳಾತಿ ವಿರಳವಾಗಿ ನಡೆಯುತ್ತಿದ್ದರೂ, ಗ್ರಾಮೀಣ ಭಾಗದಲ್ಲಂತು ಜಟಿಲವಾದ ಸಮಸ್ಯೆ. ಅಂತರ್ಜಾತಿಯ ಪ್ರೇಮಿಗಳು ಪ್ರೇಮವಾಗುವ ಹಿನ್ನೆಲೆಯಲ್ಲಿ ಇಡೀ ಊರಿಗೆ ಬಹಿಷ್ಕಾರ ಹಾಕುವ, ಅವರಿಗೆ ದೈಹಿಕವಾಗಿ ಹಲ್ಲೆ ಮಾಡುವ ಪ್ರವೃತ್ತಿ ಕಠಿಣ ಕಾನೂನುಗಳ ಅಡಿಯಲ್ಲಿಯೂ ನಡೆಯುತ್ತಿರುವುದು ವಿಪರ್ಯಾಸದ ಸಂಗತಿ. ಇನ್ನು ಮುಂದುವರಿದು ಮರ್ಯಾದೆ ಹತ್ಯೆಯ ಹೆಸರಿನಲ್ಲಿ ನಡೆಯುವ ಪ್ರೇಮಿಗಳನ್ನು ಜೀವಂತವಾಗಿ ಸುಡುವ ಅಮಾನವೀಯ ಧೋರಣೆಯ ಕೃತ್ಯಗಳು ನಡೆಯುತ್ತಿರುವುದು ಮನುಕುಲವನ್ನು ನಡುಗುವಂತೆ ಮಾಡಿದೆ. ಈ ಎಲ್ಲಾ ಅಮಾನವೀಯ ನಡವಳಿಕೆಗಳ ಹಿಂದೆ ಕನಕರ ಕುಲ ಕುಲವೆಂದು ಹೊಡೆದಾಡುವಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಎಂಬ ಕೀರ್ತನೆಯ ಸಾರವನ್ನು ಅರಿತರೆ ಜಾತಿ ಪರಿಕಲ್ಪನೆಯಡಿಗೆ ಸಿಲುಕಿರುವ ಸಮಾಜಕ್ಕೆ ಅದರ ವಿಷವರ್ತುಲದಿಂದ ಹೊರಬರುವುದಕ್ಕೆ ಚಿಕಿತ್ಸಕವಾದ ನುಡಿಯಾಗಿದೆ.

ಜಾತಿ ಪರಿಕಲ್ಪನೆಯು ಸರ್ವವ್ಯಾಪಿ. ಅದು ಧರ್ಮ, ಸಮಾಜ, ಸಂಸ್ಕೃತಿ, ಆಚಾರ, ವಿಚಾರ, ನಡೆನುಡಿ ಇತ್ಯಾದಿ ಎಲ್ಲಾ ಚಟುವಟಿಕೆಗಳ ಮೇಲೂ ಪ್ರಭಾವ ಬೀರುತ್ತದೆ. ಸಮಾಜದಲ್ಲಿ ನಡೆಯುವ ಶುಭ ಸಮಾರಂಭಗಳಲ್ಲಿ ಭೇದವೆಣಿಸುವ ಚಿತ್ರಣ ಸರ್ವೆ ಸಾಮಾನ್ಯ. ಸಹಪಂಕ್ತಿ ಭೋಜನ ನಿಷಿದ್ಧ. ಇಂತಹ ಅಸಮಾನ ಪ್ರಕ್ರಿಯೆಗಳ ವೈದಿಕಶಾಹಿಯ ಶಾಸ್ತ್ರ ಸಂಪ್ರದಾಯಗಳು ನೇರ ಪ್ರಭಾವವನ್ನು ಬೀರಿವೆ. ಈ ಹಿನ್ನೆಲೆಯಲ್ಲಿ ದಾಸರು.

ಎಂಜಲು ಎಂಜಲು ಎಂಬರಾ ನುಡಿ
ಎಂಜಲಲ್ಲವೆ? ವಾರಿ ಜಲಚರದ
ಎಂಜಲಲ್ಲವೆ; ಕರುವಿನ ಹಾಲು ಎಂಜಲೆನಿಸಿರದೆ......

ಎಂದು ನುಡಿದಿರುವ ಚಿಂತನೆ ಭೇದವನೆಣಿಸುವ ಹೀನಗುಣಗಳುಳ್ಳ ಮನುಷ್ಯರಿಗೆ ಕೇಳುವ ಪ್ರಶ್ನೆಯಾಗಿದೆ. ಸಮಾಜದಲ್ಲಿ ನಾವೇ ಶ್ರೇಷ್ಠರು ಎಂದು ಬೀಗಿ ನಡೆಯುವವರ ಪ್ರತಿಷ್ಠೆಗೆ ಚುಚ್ಚಿ ನುಡಿಯುವ ಮಾರ್ಮಿಕವಾದ ಮಾತುಗಳಾಗಿವೆ. ಈ ಸಮಾನ ಪ್ರಕ್ರಿಯೆಗಳೂ ಕೇವಲ ವೈದಿಕ ಮತ್ತು ಶೂದ್ರ ವರ್ಗದವರ ನಡುವೆ ನಡೆಯದೆ ಒಂದೇ ಜಾತಿಯ ಒಂದೇ ಜನಾಂಗದ ನಡುವೆ ನಡೆಯುವಷ್ಟರ ಮಟ್ಟಿಗೆ ಇಂದು ಪ್ರಬಲವಾಗುತ್ತಿದೆ. ಒಂದೇ ಜಾತಿಯ ಬಡವ–ಬಲ್ಲಿದರ ನಡುವೆ ಅವರ ಶ್ರೀಮಂತಿಕೆಯ ಬಡವರ್ಗದ ನಡೆ–ನುಡಿ ವೇಷಭೂಷಣಗಳ

ಕಂಡು ಭೇದವೆಣಿಸುವ ಹೀನ ಪ್ರಕ್ರಿಯೆ ನಡೆಯುತ್ತಿರುವುದು ಶೋಚನೀಯ. ಈ ದಿಸೆಯಲ್ಲಿ ಕನಕದಾಸರ ಈ ಚಿಂತನೆಯ ನುಡಿಗಳು ಪ್ರಸ್ತುತದಲ್ಲಿ ಜನರ ಮನಸ್ಸಿನಾಳಕ್ಕೆ ಇಳಿದು ಅವರ ಮನಃಪರಿವರ್ತಿಸುವಲ್ಲಿ ಪ್ರಭಾವ ಬೀರಬೇಕಾಗಿದೆ.

ಸಮಾಜದ ಅಹಿತಕರ ಪ್ರಕ್ರಿಯೆಗಳಲ್ಲಿ ಜಾತಿ ಒಂದಾದರೆ ಮತ್ತೊಂದು ಮೌಢ್ಯತೆ, ಧರ್ಮದ ಹೆಸರಿನಲ್ಲಿ ನಡೆಯುವ ಈ ಮೌಢ್ಯ ಆಚರಣೆಗಳು ಸರ್ವವ್ಯಾಪಿ. ಇದರಡಿಯಲ್ಲಿ ಸಿಲುಕಿರುವ ಮನುಷ್ಯ ಶೋಷಣೆಗೆ ಗುರಿಯಾಗಿ ಮನ ನೆಮ್ಮದಿ ಕೆಡಿಸಿಕೊಂಡಿದ್ದಾನೆ. ಮನುಷ್ಯ ಅಹಾಯಕನಾದಾಗ ದೈವದ ಮೊರೆ ಹೋಗುವುದು ಸಹಜ. ಇಂತಹ ಸನ್ನಿವೇಶ ದುರುಪಯೋಗಪಡಿಸಿಕೊಂಡ ಪುರೋಹಿತ ವರ್ಗ ಹಾಗೂ ಬುದ್ಧಿವಂತ ವರ್ಗ ಮುಗ್ದ ಜನರ ಮನಸ್ಸನ್ನು ಬಂಡವಾಳ ಮಾಡಿಕೊಂಡು, ನೂರಾರು ದೈವಗಳ ಹೆಸರಿನಲ್ಲಿ ಶೋಷಣೆಯನ್ನು ಮಾಡುವ ಪ್ರವೃತ್ತಿ ಎಲ್ಲಾ ಕಡೆಯೂ ಅಂದಿನಿಂದ ಇಂದಿನವರೆಗೂ ನಡೆದುಕೊಂಡು ಬರುತ್ತಿರುವ ಜೀವಂತ ಪ್ರಕ್ರಿಯೆ. ಇಂಥ ಪ್ರವೃತ್ತಿಯ ಹಿನ್ನೆಲೆಯಲ್ಲಿ ಕನಕದಾಸರು ತಮ್ಮ ಕೀರ್ತನೆಯಲ್ಲಿ

ಎಕ್ಕನಾತಿ ಎಲ್ಲಮ್ಮ ಮಾರಿ ದುರ್ಗಿ ಚೌಡಿ
ಕೊಂಬು ಹೋತ ಕುರಿ ಕೋಣನಾ ಬಲಿಗೊಂಬ
ದೊಂಬಿ ದೈವಗಳ ಭಜಿಸದಿರು ಮನವೆ

ಎಂದಿದ್ದಾರೆ. ಸಮಾಜದಲ್ಲಿ ಇಂದು ಧರ್ಮದ ಹೆಸರಿನಲ್ಲಿ ನಾನಾ ರೀತಿಯ ಅಹಿತಕರ ಕೃತ್ಯಗಳು ನಡೆಯುತ್ತಿವೆ. ಅಸಾಹಕನಾದ ಮನುಷ್ಯ ದೈವದ ಹೆಸರಿನಲ್ಲಿ ನಾನಾ ದೇವರಿಗೆ ಮೊರೆ ಹೋಗಿ ಹರಕೆ ಹೋರುತ್ತಿದ್ದಾನೆ. ಈ ಹರಕೆಯ ನೆಪದಲ್ಲಿ ಕೋಳಿ, ಕುರಿ ಪ್ರಾಣಿಗಳ ಕ್ರೂರವಾದ ಹಿಂಸಾ ಪ್ರಕ್ರಿಯೆ ನಡೆಯುತ್ತಿದೆ. ಮನುಷ್ಯನ ಮೌಢತನದ ಪರಮಾವಧಿ ಅತಿರೇಕದ ಎಲ್ಲೆಯನ್ನು ಮುಟ್ಟಿದೆ. ಈ ಮೌಢ್ಯತನ ಸಮಾಜಕ್ಕೆ ಮಾರಕವಾಗುವುದಲ್ಲದೆ ಪ್ರಾಣಿ ಹಿಂಸೆಯ ಧ್ಯೋತಕವಾಗಿದೆ.

ಪ್ರಾಪಂಚಿಕ ಜಗತ್ತಿನಲ್ಲಿ ಮೋಸ, ವಂಚನೆ ಎಲ್ಲೆಡೆ ಮನೆಮಾಡಿದೆ. ಇಂದು ಸೋಮಾರಿತನದಿಂದಲೋ ಬೇಗ ಸಿರಿವಂತನಾಗಬೇಕೆಂಬ ಹಂಬಲದಿಂದಲೋ ಇಂದ್ರಿಯಗಳ ಸುಖ ತೃಪ್ತಿಗಾಗಿಯೋ ಮನುಷ್ಯ ಇಂದು ಮಾಡಬಾರದ ಹೀನ ಕೃತ್ಯ ಮಾಡುತ್ತಿದ್ದಾನೆ. ಕಳ್ಳತನ ಮಾಡುವ, ತಲೆ ಹಿಡಿಯುವ, ದರೋಡೆ ಮಾಡುವ, ಲೈಂಗಿಕ ಶೋಷಣೆ ಮಾಡುವ, ಅನ್ಯರಿಗೆ ಕೇಡನ್ನು ಬಗೆಯುವ, ಹೀನ ಪ್ರವೃತ್ತಿ ದಿನೇ ದಿನೇ ಹೆಚ್ಚುತ್ತಿರುವ ಇಂದಿನ ಕಾಲಘಟ್ಟದಲ್ಲಿ ದಾಸರ ಕೀರ್ತನೆಗಳು ತುಂಬಾ ಪರಿಣಾಮ ಬೀರುತ್ತವೆ. ಇವು ನೈತಿಕ ನೆಲೆಗಟ್ಟಿನ ಮೇಲೆ ನಿಂತಿದ್ದು, ಮಾನವನ ಬದುಕಿನ ಮೇಲೆ ಒಂದಲ್ಲಾ ಒಂದು ರೀತಿಯಲ್ಲಿ ನಿರಂತರವಾಗಿ ಪ್ರಭಾವ ಬೀರಿರುವ ಮಾರ್ಗದರ್ಶಕಗಳಾಗಿವೆ.

ಮನುಷ್ಯ ಹುಟ್ಟುವಾಗ ಏಕಾಂಗಿ, ಸಾಯುವಾಗ ಕೂಡ ಏಕಾಂಗಿ, ಈ ಹುಟ್ಟು ಸಾವಿನ ಮಧ್ಯೆ ಬಂಧು–ಬಾಂಧವರೆಂಬ ಬಂಧನಗಳಡಿಯಲ್ಲಿ ಬಂಧಿಯಾಗಿದ್ದಾನೆ. ಅದಕ್ಕೆ ದಾಸರು 'ಆರು ಹಿತವರು ಎಂದು ನಂಬಬೇಡ ಯಾರಿಗ್ಯಾರಿಲ್ಲ ಆಪತ್ತು ಬಂದೊದಗಿದೊಡೆ' ಎಂದು ಈ ಬಂಧನವನ್ನು ನಿಶ್ಚಯವಾಗಿ ನಂಬದೆ ಆ ದೇವರನ್ನು ನಂಬು ಮನಸ್ಸಿಗೆ ಸುಖ ನೆಮ್ಮದಿ ಸಿಗುತ್ತದೆ ಎಂದಿದ್ದಾರೆ.

ಇಂದು ಮನುಷ್ಯನ ಬಾಂಧವ್ಯಗಳು ಶಿಥಿಲವಸ್ಥೆಯಲ್ಲಿದೆ, ತಾಯಿ ತಂದೆಗಳು, ಅಣ್ಣ ತಮ್ಮಂದಿರು, ಬಂಧು ಬಾಂಧವರು ಮತ್ತು ದಾಯಾದಿಗಳು ಇತ್ಯಾದಿ ಬಾಂಧವ್ಯಗಳು ತಮ್ಮ ಬಾಂಧವ್ಯ ಸ್ವರೂಪದಿಂದ ಹೊರಬಂದು ನೈತಿಕ ಸ್ವಾಸ್ತ್ಯವನ್ನು ಹಾಳು ಮಾಡುತ್ತಿವೆ. ತಂದೆಯೆ ಮಗನಿಗೆ ವೈರಿಯಾಗಿ, ಅತ್ತೆ ಸೊಸೆಯ ನಡುವೆ ಕಲಹವೇರ್ಪಟ್ಟು, ಅಣ್ಣನೇ ತಂಗಿಯನ್ನು ಮೋಹಿಸಿ ದಾಯಾದಿಗಳ ನಡುವೆ ಕೊಲೆ ಸುಲಿಗೆಯಾಗಿ ಇಂದು ಸಂಸಾರ ವಿಘಟನೆಯತ್ತ ಸಾಗುತ್ತಿದೆ. ಇದಕ್ಕೆ ಕಾರಣ ಮನುಷ್ಯನಲ್ಲಿರುವ ಅರಿಷಡ್ವರ್ಗಗಳು ಹಾಗಾಗಿ ದಾಸರ ಕೀರ್ತನೆಗಳು ನೈತಿಕ ಸ್ವಾಸ್ತ್ಯವನ್ನು ಬಲಪಡಿಸುವಲ್ಲಿ ಪ್ರಭಾವ ಬೀರುತ್ತವೆ.

ಬದಲಾವಣೆ ಜಗದ ನಿಯಮ. ಬದಲಾದ ಕಾಲಘಟ್ಟ ಸನ್ನಿವೇಶದಲ್ಲಿ ಮಾನವನ ಆಸೆ ಆಮಿಷಗಳ ಧಾವಂತವು ಬದಲಾಗುತ್ತಿರುತ್ತದೆ. ಮಿತ ಕಾಲದಲ್ಲಿ ಅಪರಿಮಿತವಾಗಿ ಬದುಕಬೇಕೆನ್ನುವ ಅತಿಯಾದ ವ್ಯಾಮೋಹ ಮನುಷ್ಯನದು. ಹಾಗಾಗಿ ಹೇಗಾದರೂ ಹಣ ಸಂಪಾದನೆ ಮಾಡಿ ಶ್ರೀಮಂತಿಕೆಯಲ್ಲಿ ಮೆರೆಯಬೇಕೆನ್ನುವ ಹಂಬಲ ಮಾನವನದು. ಅದಕ್ಕಾಗಿ ಮನ ನೆಮ್ಮದಿ ಕಳೆದುಕೊಂಡು, ಅತೃಪ್ತಿಯಲ್ಲೇ ಸಾಗುವ ಈತನಿಗೆ ದಾಸರ ಈ ವಾಣಿ

ಹತ್ತು ಎಂಟು ಲಕ್ಷಗಳಿಸಿ ಮತ್ತೆ ಸಾಲದೆಂದು ಪರ
ರರ್ಥಕ್ಕಾಗಿ ಆಸೆಪಟ್ಟು ನ್ಯಾಯ ಮಾಡುವರೊ
ಬಿತ್ತಿ ಬೆಳೆವೆನೆಂದು ನೀವು ವ್ಯರ್ಥ ಚಿಂತೆ ಮಾಡಿ ಬರಿದೆ
ಸತ್ತು ಹೋದ ಮೇಲೆ ನಿಮ್ಮ ಅರ್ಥವಾರಿಗೊ?

ಎಂದು ಮಾನವನ ಶ್ರೀಮಂತಿಕೆ, ಆಸೆ ವ್ಯಾಮೋಹದ ಅತಿಯಾದ ಧಾವಂತವನ್ನು ವಿಘಟಿಸಿದ್ದಾರೆ. ಎಷ್ಟೇ ವೈಭೋಗ ಜೀವನದಿಂದ ಬದುಕಿದರೂ, ಸಾವು ಎಂಬುದು ಬಿಡದು. ಸತ್ತ ನಂತರ ನಾವು ಎಷ್ಟೇ ಗಳಿಸಿದರೂ ಅದು ಪರರ ಪಾಲಾಗುತ್ತದೆ. ಹಾಗಾಗಿ ಅತಿಯಾಸೆಗೆ ಬಲಿಯಾಗಿ ಮನ ನೆಮ್ಮದಿ ಕಳೆದುಕೊಳ್ಳುವ ಮಾನವನಿಗೆ ಜೀವನದ ನಶ್ವರತೆ, ಸಂಪತ್ತಿನ ಅಶಾಶ್ವತತೆಯನ್ನು ತಿಳಿಸಿದ್ದಾರೆ.

ಹೆಣ್ಣಿನಿಂದಲೇ ಇಹವು, ಹೆಣ್ಣಿನಿಂದಲೇ ಪರವು, ಹೆಣ್ಣೇ ಸಕಲ ಸಾಧನಕ್ಕೂ ಸಂಪತ್ತಿಗೂ ಎಂಬಂತೆ, ಹೆಣ್ಣು ಮಾನವನ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ. ಹುಟ್ಟಿನಿಂದ ಸಾಯುವ ತನಕ ವಿವಿಧ ಸ್ವರೂಪದಲ್ಲಿ ಪಾತ್ರ ವಹಿಸುತ್ತಾಳೆ. ಕನಕದಾಸರಿಗೆ ಹೆಣ್ಣು ಭೋಗದ

ಆಕರ್ಷಣೆಯ ವಸ್ತುವಾಗಿ ಕಾಣಿಸಿದ್ದಾಳೆ, ಹೆಣ್ಣಿನ ಆಕರ್ಷಣೆಯಿಂದ ತಪ್ಪಿಸಿಕೊಳ್ಳುವುದು ಕಷ್ಟ ಎಂದಿದ್ದಾರೆ. ಹಂಬಲಿಸಿ ಭವ ಸುಖ ಮೆಚ್ಚಿದಾತನ ಸಂಗ ರಂಭ ಸ್ತ್ರೀಯರ ಮೋಹಿಪನ ಸಂಗ ಬೇಡ ಎಂದು ನಿರ್ಲಿಪ್ತ ಭಾವನೆ ತೋರಿದ್ದಾರೆ. ಸತಿಯಾದವಳು ಪತಿಯ ಸನ್ನೆಯನರಿತು ನಡೆಯಬೇಕು ಎನ್ನುವ ದಾಸರು ನಿಲುವು ಪುರುಷನ ಪ್ರಾಧ್ಯಾನ್ಯತೆಯನ್ನು ಎತ್ತಿ ಹಿಡಿದರೂ, ಸ್ತ್ರೀಯರ ಅತಿರೇಕದ ವ್ಯಕ್ತಿತ್ವವನ್ನು ನಿಯಂತ್ರಿಸುತ್ತದೆ. ಪರಸತಿಯಲ್ಲಿ ವ್ಯಾಮೋಹವನ್ನು ಹೊಂದಬಾರದು ಎಂದು ಹೇಳುವ ದಾಸರು ಮಾನಿನಿಯ ಮನಸು ನಿಧಾನವಿರದಿರೆ ಮಾನಾಭಿಮಾನಗಳುದೀತೆ ಎಂದಿದ್ದಾರೆ. ಅಂದರೆ ಪುರುಷ ಹೇಗೆ ಪರಸ್ತ್ರೀಯನ್ನು ಬಯಸಬಾರದೋ ಹಾಗೆಯೇ ಸ್ತ್ರೀಯಾದವಳು ಗಂಡನ ಅನುಪಥದಲ್ಲಿ ನ್ಯಾಯಮಾರ್ಗದಲ್ಲಿ ನಡೆಯಬೇಕು. ಪರಪುರುಷನ ಸಂಗದಿಂದ ದೂರವಿರಬೇಕು. ಗಂಡಗಂಜದ ನಾರಿ ಅವಳೇ ಹೆಮ್ಮಾರಿ ಎಂದು ಸ್ತ್ರೀಯರ ವಿನಯ ಮೀರಿದ ವರ್ತನೆಯನ್ನು ತಿಳಿಸಿದ್ದಾರೆ. ಹಾಗಾಗಿ ದಾಸರು ಹೆಣ್ಣನ್ನು ಸಂಪ್ರಾದಾಯಿಕ ಚೌಕಟ್ಟಿನಲ್ಲಿಯೇ ನೋಡಿದ್ದಾರೆ. ಪತಿಭಕ್ತಿ, ಶೀಲಗಳೇ ಹೆಣ್ಣಿನ ಪರಮ ಧ್ಯೇಯವಾಗಿರಬೇಕು ಎಂದಿದ್ದಾರೆ.

ದಾಸರು ಹೆಣ್ಣಿನ ಬಗ್ಗೆ ನಿರ್ಲಿಪ್ತ ಧೋರಣೆ ಹೊಂದಿ ಕೊಬ್ಬಿದ ಕುಚಗಳ ರಮಣಿಯರಷ್ಟೆ ಎಂದಿದ್ದಾರೆ. ಆದರೂ ಕನಕದಾಸರ ನುಡಿಗಳು ಹೆಣ್ಣನ್ನು ಸಮಾಜದಲ್ಲಿ ಗೌರವದಿಂದ ಕಾಣುತ್ತದೆ. ಆ ಗೌರವಕ್ಕೆ ಸ್ತ್ರೀಯಾದವಳು ಪಾತ್ರಳಾಗಬೇಕು. ಅತಿರೇಕದ ವರ್ತನೆ ಹೆಮ್ಮಾರಿಯಾನ್ನಾಗಿ ಮಾಡುತ್ತದೆ. ಹೆಣ್ಣು ಪುರುಷನ ಅಧೀನ ಸ್ಥಾನದಲ್ಲಿ ಇರಲು ಬಯಸದಿದ್ದರೂ, ಗಂಡ ಹೆಂಡತಿಯರ ನಡುವೆ ಅನೋನ್ಯತೆ ಇರಬೇಕು. ಈ ಕೊರತೆಯಿಂದ ಇಂದು ವಿಚ್ಛೇದನ ಎಂಬ ಪರಿಕಲ್ಪನೆ ಹಿನ್ನೆಲೆಯಲ್ಲಿ ಸತಿ-ಪತಿ ದಾಂಪತ್ಯ ಶಿಥಿಲಗೊಳ್ಳುತ್ತಿದೆ. ಮಿತಿಮೀರಿದ ಸ್ತ್ರೀಯ ವರ್ತನೆ, ಇಂದು ವೇಶ್ಯವಾಟಿಕೆ, ಕೊಲೆ ಸುಲಿಗೆಯಂತ ಕೃತ್ಯಗಳು ನಡೆಯಲೂ ಕಾರಣಳಾಗಿದ್ದಾಳೆ. ನೈತಿಕ ಸ್ವಾಸ್ತ್ಯ ಭರಿತ ಸಮಾಜ ಅವಳೆಡೆಗೆ ಬೆರಳು ತೋರುವಂತೆ ಮಾಡಿದೆ. ಹಾಗಾಗಿ ದಾಸರು ಸ್ತ್ರೀಯರ ಬಗ್ಗೆ ನಿರ್ಲಿಪ್ತ ಧೋರಣೆ ಹೊಂದಿದ್ದರೂ ಅವರ ಕೀರ್ತನೆಗಳು ಪರಿಮಿತ ವ್ಯಾಪ್ತಿಯಲ್ಲಿ ಸ್ತ್ರೀಯರ ಮೇಲೆ ಪ್ರಭಾವ ಬೀರುತ್ತವೆ.

ಒಟ್ಟಿನಲ್ಲಿ ದಾಸರ ನುಡಿಗಳು ಸಮಾಜ ಮತ್ತು ಮಾನವನ ಮೇಲೆ ನಿರಂತರವಾಗಿ ಅನುದಿನವೂ ಪ್ರಭಾವ ಬೀರುವ ಸತ್ಯದ ಕಿಡಿಗಳು. ಇವು ಕಿರಿದಾದ ವ್ಯಾಪ್ತಿಯನ್ನು ಹೊಂದಿದ್ದರೂ ಅರ್ಥದಲ್ಲಿ ವಾಮನನ ಸ್ವರೂಪದಲ್ಲಿ ವ್ಯಾಪಿಸಿವೆ. ಇವು ಮಾನವನ ಇಹ-ಪರ ಎರಡನ್ನು ಸ್ಪರ್ಶಿಸಿ ಮಾರ್ಗದರ್ಶನ ತೋರಬಲ್ಲ ದಾರಿದೀಪಗಳಾಗಿವೆ. ಇವುಗಳ ಸಾರವು ಕೇವಲ ಪ್ರಾದೇಶಿಕ ವ್ಯಾಪ್ತಿಯಲ್ಲಿ ಸಿಲುಕದೆ ಪ್ರಪಂಚದ ಎಲ್ಲಾ ವರ್ಗ, ವರ್ಣ, ಧರ್ಮ, ಜನಾಂಗದ ಮೇಲೂ ತನ್ನ ಪ್ರಭಾವ ಬೀರುವ ನಿಟ್ಟಿನಲ್ಲಿ ತನ್ನ ಕಬಂಧ ಬಾಹುವನ್ನು ಚಾಚಿವೆ. ಇಂದು ರಾಷ್ಟ್ರ, ದೇಶ ಭಾಷೆಗಳ ಭಿನ್ನತೆಯೆನ್ನದೆ ಸರ್ವವ್ಯಾಪಿಯಾಗಿ ಜಾತಿಗಾಗಿ,

ಕುಲಕ್ಕಾಗಿ, ಅಂತಸ್ತಿಗಾಗಿ ಬಡಿದಾಡಿ ಸಮಾಜದ ನಿದ್ದೆಗೆಡಿಸುವಂತಹ ಮಂದಿಗೆ ಚಾಟಿಯೇಟಿನಂತಹ ತೀಕ್ಷ್ಣ ನುಡಿಗಳಾಗಿವೆ. ಮನಸ್ಸಿನ ದುರ್ಬಲದಿಂದ ನೆಮ್ಮದಿ ಕಳೆದುಕೊಂಡು ಪರಿತಪಿಸುವ ಮಾನವನಿಗೆ ಸಾಂತ್ವನದ ನುಡಿಗಳಾಗಿವೆ. ಎಲ್ಲವನ್ನು ಕಳೆದುಕೊಂಡು ಅಸಾಹಯಕನಾಗಿ ನಿಂತಾಗ ಮಾರ್ಗದರ್ಶನ ತೋರುವ ದಾರಿದೀಪವಾಗಿವೆ. ಐಹಿಕ ಜೀವನ ಸಾಕೆಂದು ಪರಿತಪಿಸುವ ಮಾನವನಿಗೆ ಮುಕ್ತಿ ಮಾರ್ಗ ತೋರಿಸುವ ಸತ್ಪಥಗಳಾಗಿವೆ.

ಅಡಿಟಿಪ್ಪಣಿಗಳು

೧. ಶಿವಮೂರ್ತಿಶಾಸ್ತ್ರಿ.ಬಿ. – ಕನಕದಾಸರ ಕೀರ್ತನೆಗಳು. ಮುನ್ನುಡಿಯಿಂದ ಪುಟ ಸಂ. XII

೨. ಅದೇ.................. ಪುಟ ಸಂ. XIV

ಉಪಸಂಹಾರ

ಕನಕದಾಸರು ನಾಡು ಕಂಡಂತಹ ಶ್ರೇಷ್ಠ ಸಂತ. ಅವರು ಬರೆದಿರುವ ಕೀರ್ತನೆಗಳು ಸಾಹಿತ್ಯವಲಯದಲ್ಲಿ ಸದಾ ಮಿನುಗುವ ದಾರಿದೀಪಗಳಾಗಿವೆ. ಇವು ಸಮಾಜದ ಎಲ್ಲಾ ಮಗ್ಗಲುಗಳನ್ನು ದರ್ಶಿಸಿ, ಮಾರ್ಗದರ್ಶನ ನೀಡಬಲ್ಲ ಕೈದೀವಿಗೆಗಳು. ಈ ಕೀರ್ತನೆಗಳಲ್ಲಿನ ಸಾರ ಸಾರ್ವತ್ರಿಕ ಸತ್ಯವಾಗಿದ್ದು, ಮನುಷ್ಯ ಹಾದಿ ತಪ್ಪಿದಾಗ ಎಚ್ಚರಿಸುವ ಕಿರುಗಂಟೆಗಳಾಗಿವೆ.

ದಾಸರು ಕೆಳಸ್ತರದಿಂದ ಬಂದವರಾಗಿದ್ದು, ತಮ್ಮ ಜ್ಞಾನ ಪ್ರತಿಭೆ ಬಲದಿಂದ ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆದವರು. ಹಾಗಾಗಿ ಸಮಾಜದ ಅಂಕು ಡೊಂಕುಗಳ ಪರಿಪೂರ್ಣ ಅನುಭವ ಅವರಿಗಿತ್ತು. ಆ ಅನುಭವದಲ್ಲಿ ಕಂಡ ಓರೆ-ಕೋರೆಗಳನ್ನು ನೇರವಾಗಿ ನಿಷ್ಠುರ ನುಡಿಯಲ್ಲಿ ಖಂಡಿಸಿದ್ದಾರೆ.

ಇವರು ತಮ್ಮ ಕೀರ್ತನೆಯಲ್ಲಿ ಸಮಾಜದಲ್ಲಿನ ಅಸಮಾನ ತಾತ್ವಿಕತೆಯನ್ನು ಸರಿಸಮಾನವಾದ ಮಾನವೀಯ ನೆಲೆಗಟ್ಟಿನಲ್ಲಿ ನೋಡುವ ದೃಷ್ಟಿಕೋನವಿದೆ. ಇವರ ಕೀರ್ತನೆಗಳು ಪ್ರಮುಖವಾಗಿ ಧಾರ್ಮಿಕತೆ, ಸಾಮಾಜಿಕತೆ ಮತ್ತು ನೈತಿಕ ನೆಲೆಗಟ್ಟಿನ ಮೇಲೆ ನಿಂತಿವೆ. ಹಾಗಾಗಿ ಇವರು ಸಮಾಜದಲ್ಲಿನ ಜಾತಿಪದ್ಧತಿ, ಅಸ್ಪೃಶ್ಯತಾ ಪರಿಕಲ್ಪನೆಯನ್ನು ಖಾರವಾದ ನುಡಿಗಳಿಂದ ಟೀಕಿಸಿದ್ದಾರೆ. ಜಾತಿಪದ್ಧತಿಯ ಮೂಲ ನೆಲೆಯನ್ನು ಕೀರ್ತನೆಯಲ್ಲಿ ತಿಳಿಸಿ, ಜಾತಿ ಎಂಬುದು ಹುಟ್ಟಿನಿಂದ ಬರುವಂತದಲ್ಲ ಅದು ಅವರ ನಡವಳಿಕೆಯ ಮೇಲೆ ಅವಲಂಬಿತವಾಗಿರುವುದು ಎಂದು, ತಾರ್ಕಿಕವಾದ ಉತ್ತರವ ಕೊಟ್ಟು ಜಾತಿ ಮೂಲವನ್ನು ಶೋಧಿಸಿದ್ದಾರೆ. ಅಸ್ಪಶ್ಯತಾ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಸಮಾಜದಲ್ಲಿ ಬೇರು ಬಿಟ್ಟಿರುವ ಶುಚಿತ್ವದ ನೆಲೆಯನ್ನು ಶೋಧಿಸಿದ್ದಾರೆ. ಮೇಲ್ವರ್ಗದವರ ಮಡಿ-ಮೈಲಿಗೆಯ ಬಗ್ಗೆ ತಾರ್ಕಿಕವಾದ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಇವರ ಚಿಂತನೆಗಳು ಸಾರ್ವಕಾಲಿಕವಾದ ಸತ್ಯಗಳಾಗಿದ್ದರೂ ಸಹ ಜನಮಾನಸದಿಂದ ದೂರವಾದ ನೆಲೆಯಲ್ಲಿಯೇ ನಿಂತಿವೆ. ಇದಕ್ಕೆ ಉದಾಹರಣೆ ಎಂಬಂತೆ ಉಡುಪಿ ಮಠ ಮತ್ತು ಕುಕ್ಕೆ ಸುಬ್ರಹ್ಮಣ್ಯದ ಮಡೆಸ್ನಾನದಂತ ಆಚರಣಾ ಪದ್ಧತಿಗಳು ಇವರ ಚಿಂತನೆಯನ್ನು ಬಗ್ಗು ಬಡಿಯುತ್ತಿವೆ.

ಮನುಷ್ಯ ಹುಟ್ಟಿನಿಂದ ಸಾಯುವ ತನಕ ಧಾರ್ಮಿಕ ಪರಿಧಿಯಲ್ಲಿ ಬದುಕುತ್ತಿದ್ದಾನೆ. ಧಾರ್ಮಿಕ ಶಾಸ್ತ್ರ ಸಂಪ್ರದಾಯಗಳು ನಮ್ಮದೇ ಸ್ವತ್ತು ಎಂಬಂತೆ ಭಾವಿಸಿರುವ ಪುರೋಹಿತ ಶಾಹಿಗಳು ಮಾಡಿರುವ ತತ್ವರಹಿತವಾದ ಆಚರಣೆಗಳ ಬಗ್ಗೆ ಕನಕದಾಸರ ಕೀರ್ತನೆಗಳು ಬೆಳಕು ಚೆಲ್ಲುತ್ತವೆ. ಧರ್ಮದ ಹೆಸರಲ್ಲಿ ವೈದಿಕರು ಮಾಡುವ ಮೋಸ, ವಂಚನೆ, ಕಪಟಗಳು ಸಮಾಜಕ್ಕೆ ಮಾರಕವಾದ ಅಂಶಗಳು. ಇವುಗಳನ್ನು ದಾಸರು ಒಮ್ಮೆ ಸಾತ್ವಿಕವಾಗಿ, ಒಮ್ಮೊಮ್ಮೆ ಕಟುವಾಗಿ ಟೀಕಿಸಿದ್ದಾರೆ. ಇವರ ಸ್ವಾರ್ಥ ದಾಹಕ್ಕೆ ಬಲಿಯಾದ ಜನಸಾಮಾನ್ಯರ ಅಜ್ಞಾನವನ್ನು, ಅಂಧಕಾರವನ್ನು ತಿಳಿಸಿದ್ದಾರೆ. ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಮಾಡುವ ವ್ಯರ್ಥ ಆಚರಣೆಗಳ ಬಗ್ಗೆ ಬೆಳಕು ಬೀರಿದ್ದಾರೆ. ಕನಕದಾಸರ ಈ ಸೂಕ್ಷ್ಮವಾದ ತಾತ್ವಿಕವಾದ

ಎಳೆಗಳನ್ನು ಅರಿತರೆ ಸಮಾಜ ನೈತಿಕವಾಗಿ ಸ್ವಾಸ್ಥ್ಯಭರಿತವಾಗಿರುತ್ತದೆ. ಮತ್ತು ದುಷ್ಕೃತ್ಯಗಳಿಂದ ದೂರವಿರುತ್ತದೆ.

ಧಾರ್ಮಿಕವಾಗಿಯೇ ಆಗಲಿ, ಸಾಮಾಜಿಕವಾಗಿಯೇ ಆಗಲಿ ಸ್ವಾರ್ಥ ಪರವಾದ ಧಾರ್ಮಿಕ ಚಿಂತಕರು ಮಾಡಿದ ಸಂಪ್ರದಾಯಗಳಿಗೆ ಬಲಿಯಾಗಿ ಬಳಲುತ್ತಿರುವವರು ಕೆಳವರ್ಗದವರು ಎಂಬ ಅಂಶ ಕೀರ್ತನೆಗಳಿಂದ ಸ್ಪಷ್ಟವಾಗುತ್ತವೆ. ಇವರೊಡ್ಡಿದ ಸಂಚಿನ ಬಲೆಗೆ ಸಿಲುಕಿ ಬಡವರು ಬಡವರಾಗಿಯೇ ಉಳಿಯುವ, ಶ್ರೀಮಂತರು ಶ್ರೀಮಂತರಾಗಿ ಮುಂದುವರಿಯುವ ಅಂಶಗಳನ್ನು ಕೀರ್ತನೆಗಳು ಬಿತ್ತರಿಸಿವೆ.

ಸಮಾಜದಲ್ಲಿ ಬದುಕುವ ಮನುಷ್ಯನಿಗೆ ರೀತಿ–ನೀತಿಗಳು ಅವಶ್ಯಕ. ಅವು ನೈತಿಕ ನೆಲೆಗಟ್ಟಿನ ಹಾದಿ ತಪ್ಪಿದಾಗ ಮನುಷ್ಯ ಅಧೋಗತಿಗೆ ಇಳಿಯುತ್ತಾನೆ. ಹಾಗಾಗಿ ದಾಸರ ಕೀರ್ತನೆಗಳಲ್ಲಿ ಮನುಷ್ಯನ ಸ್ವಾರ್ಥಪರವಾದ ಚಿಂತನೆ ಅದರ ಫಲವಾಗಿ ಮಾನಸಿಕ ನೆಮ್ಮದಿಯನ್ನು ಕಳೆದುಕೊಂಡು ಪರಿತಪಿಸುವ ಆತನಿಗೆ ಸಾಂತ್ವಾನ ನೀಡುವ ಸಮಾಧಾನದ ನುಡಿಗಳಿವೆ. ಸಾಂಸಾರಿಕ ಜೀವನದಲ್ಲಿ ಸ್ತ್ರೀ–ಪುರುಷ ಎರಡು ಬಂಡಿಗಳಂತೆ. ಅವು ಸಮನಾಗಿ ಸಾಗಿದಾಗ ಮಾತ್ರ ಸಂಸಾರ ಸಾರ, ಇಲ್ಲದಿದ್ದರೆ ನಿಸ್ಸಾರವಾಗುತ್ತದೆ. ಹಾಗಾಗಿ ಸ್ತ್ರೀ–ಪುರುಷರಲ್ಲಿ ಅನ್ಯೋನ್ಯವಾದ ಭಾಂದವ್ಯವಿರಬೇಕೆಂದು ಇವರ ಚಿಂತನೆಗಳು ತಿಳಿಸುತ್ತವೆ ಮತ್ತು ಪ್ರಸ್ತುತ ವಿಚ್ಛೇದನದಂತಹ ಕ್ರಿಯೆಗಳ ಮೇಲೂ ಬೆಳಕು ಬೀರುವಲ್ಲಿ ಪ್ರಭಾವ ಬೀರುತ್ತದೆ.

ಇವರ ಕೀರ್ತನೆಗಳನ್ನು ಪ್ರಸ್ತುತ ಕಾಲಮಾನದ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಸಮಾಜದ ಎಲ್ಲ ಮಗ್ಗಲುಗಳನ್ನು ದರ್ಶಿಸುತ್ತವೆ. ಸಾಮಾಜಿಕ, ನೈತಿಕ, ಧಾರ್ಮಿಕ, ಮಾನವೀಯ ನೆಲೆಗಟ್ಟಿನಲ್ಲಿ ಸದಾಕಾಲ ಪ್ರಭಾವ ಬೀರುವ ಗುಣ ಇವರ ಕೀರ್ತನೆಗಳಲ್ಲಿವೆ. ಧರ್ಮ, ದೇವರು, ಜಾತಿ, ಮತ, ಸಂಪ್ರದಾಯ, ಆಚರಣೆಗಳು, ರೂಢಿ–ಸಂಪ್ರದಾಯಗಳು ಇತ್ಯಾದಿ ಅಂಶಗಳನ್ನು ಪ್ರಸ್ತುತ ದಿನಗಳ ಮೇಲೆ ಯಾವ ರೀತಿ ಪ್ರಭಾವ ಬೀರಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಕನಕದಾಸರು ಶೂದ್ರವರ್ಗದಿಂದ ಬಂದವರು. ವಿದ್ಯೆಯಿಂದ ದೂರವೇ ಆಗುಳಿದ ಜನಾಂಗದಿಂದ ಮೇಲೆ ಬಂದು ತಮ್ಮದೆ ಆದ ಪ್ರತಿಭೆ, ಪಾಂಡಿತ್ಯಗಳಿಂದ ಸಾಹಿತ್ಯ ರಚಿಸಿದ್ದಾರೆ. ಹಾಗಾಗಿ ಕೀರ್ತನೆಗಳಲ್ಲಿನ ಪದಲಾಲಿತ್ಯ, ಲಯ, ಮಾದುರ್ಯ, ಪ್ರಾಸದ ಜೋಡಣೆ, ಭಕ್ತಿ ಪರಿಕಲ್ಪನೆ, ಜಾನಪದೀಯ ನೆಲೆಗಟ್ಟಿನ ಭಾಷೆಯ ಬಳಕೆ ಹಾಗೂ ಅವರ ಸಾಹಿತ್ಯ ಮೌಲ್ಯವನ್ನು ಕುರಿತಂತೆ ಅವರ ಕೀರ್ತನೆಗಳಲ್ಲಿ ವಿವೇಚಿಸಲಾಗಿದೆ.

ಹೀಗೆ ಮೇಲೆ ಪ್ರಸ್ತಾಪಿಸಿರುವ ಎಲ್ಲಾ ಸಂಗತಿಗಳು, ಕನಕದಾಸರ ಕೀರ್ತನೆಗಳಲ್ಲಿ ಕಂಡು ಬರುವ ಅಂಶಗಳು. ದಾಸರ ಚಿಂತನೆಗಳು ವಾಸ್ತವ ಬದುಕಿನ ಮೇಲೆ ಸಹಜವಾಗಿಯೇ ಪ್ರಭಾವ ಬೀರುವ ನಿಟ್ಟಿನಲ್ಲಿ ಸಾರ್ವತ್ರಿಕ ಸಂಗತಿಗಳಾಗಿವೆ. ಹಾಗಾಗಿ ನನ್ನ ನಿಬಂಧದ

ಪರಿಮಿತಿಯೊಳಗೆ ಕನಕದಾಸರ ಕೀರ್ತನೆಗಳಲ್ಲಿ ಕಂಡು ಬರುವ ಸಾಮಾಜಿಕ ಪ್ರಜ್ಞೆಗೆ ಸಂಬಂಧಿಸಿದಂತೆ ಈ ಮೇಲ್ಕಂಡ ರೀತಿಯಲ್ಲಿ ವಿವೇಚಿಸುವ ಪ್ರಯತ್ನ ಮಾಡಿದ್ದೇನೆ.

ಜಗತ್ತು ಬೆಳೆದಂತೆ ಜನಸಂಖ್ಯೆ ಹೆಚ್ಚಾದಂತೆ ಮಾನವನಲ್ಲಿ ಅಧಿಕಾರ ದಾಹ, ಹಣದ ದಾಹ, ಶ್ರೀಮಂತಿಕೆ ದಾಹ, ಹೆಣ್ಣಿನ ಮೋಹ ಇತ್ಯಾದಿ ಹೀನಗುಣಗಳು ಬಲಗೊಳ್ಳುತ್ತಿವೆ. ಇಂದು ನೈತಿಕ ಮೌಲ್ಯಗಳು ಹದಗೆಡುತ್ತಿವೆ. ಸಂಬಂಧಗಳು ಶಿಥಿಲಗೊಳ್ಳುತ್ತಿವೆ. ಮಾನವನಲ್ಲಿ ಕ್ರೌರ್ಯತನ ಹೆಚ್ಚುತ್ತಿವೆ. ಹೆಣ್ಣಿನಲ್ಲಿರಬೇಕಾದ ಸಾತ್ವಿಕ ಗುಣಗಳು ಬದಲಾಗುತ್ತಿವೆ. ಸ್ವಾರ್ಥತನದಿಂದ ಸಮಾಜದಲ್ಲಿ ಅಸಮಾನತೆ ತಲೆದೂರಿ, ಅಹಿತಕರ ಘಟನೆಗಳು ನಡೆಯುತ್ತಿವೆ. ಮನುಷ್ಯನ ಮಿತಿ ಮೀರಿದ ದಾಹ ಗುಣದಿಂದ ಪ್ರಾಕೃತಿಕ ಅಸಮಾನತೆ ಉಂಟಾಗಿ ವಾತಾವರಣದಲ್ಲಿ ವೈಪರೀತ್ಯ ಉಂಟಾಗುತ್ತಿದೆ. ಹಾಗಾಗಿ ದಾಸರು ತಿಳಿಸಿರುವ ಆರೋಗ್ಯಭರಿತ ತಾತ್ವಿಕ ಚಿಂತನೆಗಳ ಸೂಕ್ಷ್ಮ ಎಳೆಗಳನ್ನು ಗುರ್ತಿಸುವುದರ ಮೂಲಕ ಬದಲಾದ ಕಾಲಮಾನದಲ್ಲಿ ಇವರ ಕೀರ್ತನೆಗಳು ಮತ್ತೆ ಮತ್ತೆ ಅಧ್ಯಯನಕ್ಕೆ ಒಳಪಡುವ ಸಾಧ್ಯತೆಯಿರುವುದರಿಂದ ಸಾಮಾಜಿಕ ಪ್ರಜ್ಞೆಯನ್ನು ಬಿಂಬಿಸುವಂತಹ ಕೀರ್ತನೆಗಳ ಮೇಲೆ ಅಧ್ಯಯನ ಕೈಗೊಳ್ಳಲು ಇನ್ನೂ ಹೆಚ್ಚಿನ ಅವಕಾಶಗಳಿವೆ.

ಆಕರ ಗ್ರಂಥಸೂಚಿ

೧. ಶ್ರೀ ಬಿ.ಶಿವಮೂರ್ತಿಶಾಸ್ತ್ರಿ – 'ಕನಕದಾಸರ ಕೀರ್ತನೆಗಳು'
ಡಾ. ಕೆ.ಎಂ.ಕೃಷ್ಣರಾವ್
ಎಂ.ಎ., ಪಿಎಚ್.ಡಿ.,
ಪ್ರಕಾಶಕರು
ರಾಜ್ಯ ಸಮಿತಿ
ಶ್ರೀ ಕನಕದಾಸರ ನಾಲ್ಕನೆಯ ಶತಮಾನೋತ್ಸವ
ಮೈಸೂರು ಸರ್ಕಾರ,
ಬೆಂಗಳೂರು.

೨. ಟಿ.ಜಯಲಕ್ಷ್ಮಿ ಶ್ಯಾಂಸುಂದರ್ – 'ಕನಕದಾಸರ ಕೀರ್ತನೆಗಳು'
ಪ್ರಕಾಶಕರು
ನವಜ್ಯೋತಿ ಪ್ರಕಾಶನ
ಹೊಸಕೋಟೆ

೩. ದಿವ್ಯ.ಕೆ.ವೈ. – ಕನಕದಾಸರ ಗೀತೆಗಳು
ಪ್ರಕಾಶಕರು
ನವಭಾರತ ಪಬ್ಲಿಕೇಷನ್
ಬೆಂಗಳೂರು.

ಪರಾಮರ್ಶನ ಗ್ರಂಥ

೧. ಕಾ.ತ.ಚಿಕ್ಕಣ್ಣ – ಕನಕ ಕಿರಣ – ೧೯೮೨
ಕಾಳಿದಾಸ ಸಾಂಸ್ಕೃತಿಕ ಸಂಸ್ಥೆ,
ಬೆಂಗಳೂರು.

೨. ರಂಗರಾಜ ನವದುರ್ಗ – ಕನಕದಾಸರ ವೈಚಾರಿಕತೆ – ೨೦೦೧
ಪ್ರಸಾರಾಂಗ
ಕುವೆಂಪು ವಿಶ್ವವಿದ್ಯಾಲಯ,
ಶಂಕರಘಟ್ಟ

೩. ವರದರಾಜರಾವ್.ಜಿ. – ಹರಿದಾಸ ಸಾಹಿತ್ಯ ಸಮೀಕ್ಷೆ ೧೯೮೦
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು.

೪. ಡಾ. ಲಕ್ಕಪ್ಪಗೌಡ.ಎಚ್.ಜೆ. – ಸಾಹಿತ್ಯ ಬಹುಮುಖಿ ಚಿಂತನೆ ೨೦೦೨
ಸಿ.ವಿ.ಜಿ.ಪಬ್ಲಿಕೇಷನ್
ಬೆಂಗಳೂರು.

೫. ದೇ.ಜವರೇಗೌಡ – ಕನಕ ಸಾಹಿತ್ಯಾದರ್ಶನ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು.

೬. ಜಿ.ಎಸ್.ಶಿವರುದ್ರಪ್ಪ – ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ
ಸಂ. ೪ ಭಾಗ–೨
ಪ್ರಸಾರಾಂಗ
ಬೆಂಗಳೂರು ವಿ.ವಿ.
ಬೆಂಗಳೂರು.

೭. ಡಾ.ಲಕ್ಕಪ್ಪಗೌಡ.ಹೆಚ್.ಜೆ. – ವಿಲೋಕನ – ೧೯೯೮
ಚೇತನ ಬುಕ್ ಹೌಸ್
ಬೆಂಗಳೂರು.

೮. ಜ್ಯೋತಿ ಹೊಸೂರು – ಕನಕದಾಸರ ಜೀವನ ವಿಚಾರ
ಕಾಲಗತಿ ಪ್ರಕಾಶನ ರಾಯಭಾಗ

೯. ಮಳಲಿ ವಸಂತಕುಮಾರ – ಕನಕದಾಸ – ೧೯೮೭
ಪ್ರಸಾರಾಂಗ
ಮೈಸೂರು ವಿ.ವಿ.
ಮೈಸೂರು.

೧೦. ಡಾ. ದೇ. ಜವರೇಗೌಡ – ಕನಕಾವಲೋಕನ – ೨೦೧೨
ಕನಕ ಸಾಹಿತ್ಯದ ದರ್ಶನ ಸಂಪುಟ – ೧
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ,
ಬೆಂಗಳೂರು.

೧೧. ಡಾ.ಕಮಲಾ ಹಂಪನಾ – ಬಿತ್ತರ – ೨೦೧೦
ಸ್ವಪ್ನ ಬುಕ್‌ಹೌಸ್
ಬೆಂಗಳೂರು.